24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 125 | ನವದೆಹಲಿ | ಬೆಲೆ ₹10 | ಅಕ್ಟೋಬರ್, 31, 2026, ಶನಿವಾರ

ಒಳಪುಟಗಳಲ್ಲಿ

ನ್ಯಾಯಾಂಗದ ವಿರುದ್ಧ ಅವಹೇಳನಕಾರಿ ಹೇಳಿಕೆ ಆರೋಪ ಸೌರವ್‌ದಾಸ್‌ಗೆ ಮದ್ರಾಸ್ ಹೈಕೋರ್ಟ್ ನೋಟಿಸ್ - ಪು.4

ಮಾಫಿ ಸಾಕ್ಷಿ ಪ್ರದೋಶ್‌ಗೆ ನ್ಯಾಯಾಲಯದಲ್ಲಿ ಹಿನ್ನಡೆ: ಪಿತೃಕಾರ್ಯಕ್ಕೆ ಮಧ್ಯಂತರ ಜಾಮೀನು ಕೋರಿದ್ದ ಅರ್ಜಿ ವಜಾ - ಪು.5

ಗ್ರಾಮೀಣ ಬದುಕನ್ನು ಸಮೃದ್ಧಗೊಳಿಸುವುದೇ ನಮ್ಮ ಅಭಿವೃದ್ಧಿಯ ಚಿಂತನೆ

ನಗರಗಳು ಆರ್ಥಿಕವಾಗಿ ಬಲಿಷ್ಠವಾದರೆ ಗ್ರಾಮೀಣ ಪ್ರದೇಶಕ್ಕೆ ಸಂಪನ್ಮೂಲ ಒದಗಿಸಲು ಸಾಧ್ಯ: ಸಿಎಂ ಡಿ.ಕೆ. ಶಿವಕುಮಾರ್

ಕರ್ನಾಟಕ ರಾಜ್ಯ ಪ್ರಾದೇಶಿಕ ನಗರೀಕರಣ ಯೋಜನೆ-2047ರ ವರದಿ ಬಿಡುಗಡೆ

ಬೆಂಗಳೂರು, ಅ.30: ಬೆಂಗಳೂರು ಸೇರಿ ರಾಜ್ಯದ ನಗರಗಳು ಆರ್ಥಿಕವಾಗಿ ಬಲಿಷ್ಠವಾದರೆ ಮಾತ್ರ ಗ್ರಾಮೀಣ ಪ್ರದೇಶಗಳಿಗೂ ಹೆಚ್ಚಿನ ಅಭಿವೃದ್ಧಿ ಸಂಪನ್ಮೂಲ ಒದಗಿಸಲು ಸಾಧ್ಯ. ನಗರಗಳ ಬೆಳವಣಿಗೆಯಿಂದ ಪಟ್ಟಣಗಳು ಅಭಿವೃದ್ಧಿಯಾಗಬೇಕು, ಪಟ್ಟಣಗಳ ಬೆಳವಣಿಗೆಯಿಂದ ಗ್ರಾಮೀಣ ಬದುಕು ಸಮೃದ್ಧವಾಗಬೇಕು. ಇದೇ ನಮ್ಮ ಅಭಿವೃದ್ಧಿಯ ಚಿಂತನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಪ್ರಾದೇಶಿಕ ನಗರೀಕರಣ ಯೋಜನೆ–2047ರ ವರದಿ ಬಿಡುಗಡೆ ಹಾಗೂ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು.

ನಾನು ಎಷ್ಟು ದಿನ ಅಧಿಕಾರದಲ್ಲಿರುತ್ತೇನೆ ಎಂಬುದು ಮುಖ್ಯವಲ್ಲ. ಒಂದು ದಿನ, ಒಂದು ವರ್ಷ ಅಥವಾ ಐದು ವರ್ಷ ಇರಬಹುದು. ಜನರು ಎಷ್ಟು ದಿನ ಆಶೀರ್ವಾದ ಮಾಡುತ್ತಾರೆ ಎಂಬುದು ಬೇರೆ ವಿಚಾರ. ಆದರೆ, ಮುಂದಿನ ಪೀಳಿಗೆಗಾಗಿ ಹಾಕಿಕೊಡುವ ಅಭಿವೃದ್ಧಿಯ ಅಡಿಪಾಯ ಶಾಶ್ವತವಾಗಿರಬೇಕು. ಮನೆ ನಿರ್ಮಿಸುವ ಮುನ್ನ ಮಾಸ್ಟರ್‌ಪ್ಲಾನ್ ಸಿದ್ಧಪಡಿಸುವಂತೆ, ಕರ್ನಾಟಕವನ್ನು ಕಟ್ಟಲು ದೂರದೃಷ್ಟಿಯ ಯೋಜನೆ ಅಗತ್ಯ ಎಂದು ಹೇಳಿದರು.

ಸಮೃದ್ಧ ಕರ್ನಾಟಕ, ಉದ್ಯಮ ಕರ್ನಾಟಕ, ಸಂಚಾರಿ ಕರ್ನಾಟಕ ಹಾಗೂ ಪ್ರತಿಭಾ ಕರ್ನಾಟಕದ ಆಶಯದೊಂದಿಗೆ ರಾಜ್ಯದ ಎಲ್ಲ ಭಾಗಗಳಿಗೂ ಸಮಾನ ಅಭಿವೃದ್ಧಿ ಅವಕಾಶ ಕಲ್ಪಿಸುವ ಉದ್ದೇಶವಿದೆ. ಈ ಹಿನ್ನೆಲೆಯಲ್ಲಿ ಏಳು ಪ್ರಮುಖ ಆದ್ಯತೆಗಳನ್ನು ಆಧರಿಸಿ ಪ್ರಾದೇಶಿಕ ನಗರೀಕರಣ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಬೇಕು: ಹಳ್ಳಿಗಳಿಂದ ಜನರು ನಗರಗಳಿಗೆ ಬರುವುದು ಮುಖ್ಯವಾಗಿ ಎರಡು ಕಾರಣಕ್ಕೆ. ಒಂದು ಶಿಕ್ಷಣ, ಮತ್ತೊಂದು ಉದ್ಯೋಗ. ಎಲ್ಲರೂ ಬೆಂಗಳೂರಿಗೆ ಬಂದರೆ ನಗರದ ಜನಸಂಖ್ಯೆ ಹೆಚ್ಚುತ್ತದೆ. ಅದರೊಂದಿಗೆ ಸಮಸ್ಯೆಗಳೂ ಹೆಚ್ಚುತ್ತವೆ. ಹೀಗಾಗಿ ಜನರು ತಮ್ಮ ಊರು, ತಾಲೂಕು ಮತ್ತು ಜಿಲ್ಲೆಗಳಲ್ಲಿಯೇ ಉದ್ಯೋಗ ಪಡೆಯುವ ವಾತಾವರಣ ನಿರ್ಮಿಸಬೇಕು.

ಬೆಂಗಳೂರು ಸುತ್ತಮುತ್ತಲಿನ ಕೋಲಾರ, ತುಮಕೂರು, ಮಂಡ್ಯ ಸೇರಿ ವಿವಿಧ ಜಿಲ್ಲೆಗಳ ಜನರೂ ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದಾರೆ. ಬೆಂಗಳೂರು ಸುತ್ತಮುತ್ತಲಿನ ಕೆಲವು ಪ್ರದೇಶಗಳ ಜನಸಂಖ್ಯೆಯ ಗಮನಾರ್ಹ ಭಾಗ ನಗರಕ್ಕೆ ಸ್ಥಳಾಂತರಗೊಂಡಿದೆ. ಹೀಗಾಗಿ ಪ್ರಾದೇಶಿಕ ಮಟ್ಟದಲ್ಲಿಯೇ ಕೈಗಾರಿಕೆ ಮತ್ತು ಉದ್ಯೋಗಾವಕಾಶ ಹೆಚ್ಚಿಸುವುದು ಅಗತ್ಯವಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಕೃಷಿ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ

ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿದೆ. ಹಣ್ಣು, ತರಕಾರಿ, ಹೂವು ಸೇರಿದಂತೆ ಹಲವು ಉತ್ಪನ್ನಗಳು ವಿಮಾನ ನಿಲ್ದಾಣದ ಮೂಲಕ ರಫ್ತಾಗುತ್ತಿವೆ. ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್ ಮತ್ತು ರಕ್ಷಣಾ ಉಪಕರಣಗಳ ಉತ್ಪಾದನೆಯ ಜತೆಗೆ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ರಫ್ತಿಗೂ ಹೆಚ್ಚಿನ ಅವಕಾಶ ಕಲ್ಪಿಸಬೇಕು. ಮೈಸೂರು ರೇಷ್ಮೆಗೆ ದೇಶ–ವಿದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದೆ. ರೇಷ್ಮೆ ಉತ್ಪನ್ನಗಳನ್ನು ಖರೀದಿಸಲು ಜನರು ಕಾಯುವ ಪರಿಸ್ಥಿತಿಯಿದೆ. ಚೀನಾದಿಂದ ರೇಷ್ಮೆ ಆಮದು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಬೆಲೆಯಲ್ಲಿಯೂ ಏರಿಕೆಯಾಗಿದೆ. ರಾಮನಗರ, ಚನ್ನಪಟ್ಟಣ, ಕೊಳ್ಳೇಗಾಲ, ಕೋಲಾರ ಮಾತ್ರವಲ್ಲದೆ ಉತ್ತರ ಕರ್ನಾಟಕದಲ್ಲಿಯೂ ರೇಷ್ಮೆ ಕೃಷಿ ವಿಸ್ತರಣೆಯಾಗುತ್ತಿದೆ ಎಂದರು. ಕೃಷಿ, ತೋಟಗಾರಿಕೆ, ಹತ್ತಿ, ಮೆಣಸಿನಕಾಯಿ, ಮಸಾಲೆ ಪದಾರ್ಥ, ಕಾಫಿ ಸೇರಿದಂತೆ ಎಲ್ಲ ಉತ್ಪನ್ನಗಳಿಗೂ ಜಾಗತಿಕ ಮಾರುಕಟ್ಟೆ ಕಲ್ಪಿಸಬೇಕು. ಇದಕ್ಕೆ ಸೂಕ್ತ ಸಂಗ್ರಹಣೆ, ಸಂಸ್ಕರಣೆ, ಸಾರಿಗೆ ಮತ್ತು ಮಾರುಕಟ್ಟೆ ವ್ಯವಸ್ಥೆ ರೂಪಿಸುವುದು ಅಗತ್ಯ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರವಾಸಿಗಳ ಪ್ರಮಾಣ ಶೇ.70ಕ್ಕೆ ಏರಿಕೆ ನಿರೀಕ್ಷೆ

ರಾಜ್ಯದ ಜನಸಂಖ್ಯೆ ಪ್ರಸ್ತುತ ೨ 6.9 ಕೋಟಿ ಇದ್ದು, 2047ರ ವೇಳೆಗೆ 7.7ರಿಂದ 7.8 ಕೋಟಿಗೆ ತಲುಪುವ ನಿರೀಕ್ಷೆಯಿದೆ. ಪ್ರಸ್ತುತ ರಾಜ್ಯದ ಜನಸಂಖ್ಯೆಯಲ್ಲಿ ಶೇ.46ರಷ್ಟು ಮಂದಿ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅಭಿವೃದ್ಧಿಯನ್ನು ಕೇವಲ ಆರ್ಥಿಕ ಅಂಕಿ–ಅಂಶಗಳಿಂದ ಅಳೆಯಲು ಸಾಧ್ಯವಿಲ್ಲ. 2047ರ ವೇಳೆಗೆ ಈ ಪ್ರಮಾಣ ಶೇ.70ಕ್ಕೆ ಏರಿಕೆಯಾಗುವ ಅಂದಾಜಿದೆ. ಈ ಬದಲಾವಣೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳದಿದ್ದರೆ ಭವಿಷ್ಯದಲ್ಲಿ ನಗರಗಳ ಮೇಲೆ ಒತ್ತಡ ಹೆಚ್ಚಾಗಲಿದೆ ಎಂಬ ಹಿನ್ನೆಲೆಯಲ್ಲಿ ಸಮಗ್ರ ಪ್ರಾದೇಶಿಕ ನಗರೀಕರಣ ಯೋಜನೆ ರೂಪಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು.

ಮಾಜಿ ಸಚಿವ ಶಿವಾನಂದ ಕೌಜಲಗಿ ನಿಧನ

ಬೆಳಗಾವಿ, ಅ.30: ಹಿರಿಯ ಮುತ್ಸದ್ದಿ, ಮಾಜಿ ಸಚಿವ ಹಾಗೂ ಕೆಎಲ್‌ಇ ಸಂಸ್ಥೆಯ ಮಾಜಿ ಅಧ್ಯಕ್ಷ ಶಿವಾನಂದ ಎಚ್.ಕೌಜಲಗಿ (87) ಅವರು ಶುಕ್ರವಾರ ಬೆಳಿಗ್ಗೆ ನಿಧನರಾದರು. ಶಾಸಕ ಮಹಾಂತೇಶ ಕೌಜಲಗಿ ಅವರ ತಂದೆ ಶಿವಾನಂದ ಕೌಜಲಗಿ ಅವರು ಕಳೆದ ಮೂರು ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಕಿತ್ತೂರು ಕರ್ನಾಟಕ ಭಾಗದ ಹಿರಿಯ, ಸಜ್ಜನ ಹಾಗೂ ಸೌಮ್ಯ ಸ್ವಭಾವದ ರಾಜಕಾರಣಿಯಾಗಿ ಶಿವಾನಂದ ಕೌಜಲಗಿ ಅವರ ಜನಪರ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿ ಹಾಗೂ ಪುರಸ್ಕಾರಗಳು ಲಭಿಸಿದ್ದವು. ಮೃತರು ಪತ್ನಿ, ಪುತ್ರರಾದ ಶಾಸಕ ಮಹಾಂತೇಶ ಕೌಜಲಗಿ, ಕಾಂಗ್ರೆಸ್ ಮುಖಂಡ ಬಸವರಾಜ ಕೌಜಲಗಿ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಶನಿವಾರ ಬೆಳಗ್ಗೆ 11 ಗಂಟೆಗೆ ಬೆಳಗಾವಿಯ ಆನಗೋಳ ರಸ್ತೆಯ ರುದ್ರಭೂಮಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಜೋಶಿಮಠ ಬಳಿ ಹೆಲಿಕಾಪ್ಟರ್ ಪತನ:

ಬೆಂಗಳೂರಿನ ಪೊಲೀಸ್ ಇನ್ಸ್‌ಪೆಕ್ಟರ್ ಅರುಣ್ ಸೋಲಂಕಿ ಸೇರಿ 6 ಸಾವು

ಡೆಹ್ರಾಡೂನ್, ಅ.30: ಉತ್ತರಾಖಂಡದ ಜೋಶಿಮಠ ಸಮೀಪ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಬೆಂಗಳೂರಿನ ಪೊಲೀಸ್ ಇನ್ಸ್‌ಪೆಕ್ಟರ್ ಅರುಣ್ ಸೋಲಂಕಿ ಸೇರಿ ಆರು ಮಂದಿ ಮೃತಪಟ್ಟಿದ್ದಾರೆ. ಬದರಿನಾಥ ಧಾಮದಿಂದ ಫಾಟಾ ಕಡೆಗೆ ತೆರಳುತ್ತಿದ್ದ ಹೆಲಿ ಕಾಪ್ಟರ್ ಶುಕ್ರವಾರ ಮಧ್ಯಾಹ್ನ ಚಮೋಲಿ ಜಿಲ್ಲೆಯ ಜೋಶಿ ಮಠ ಸಮೀಪದ ಚಾಯಿ ಗ್ರಾಮದ ಬಳಿ ಪತನಗೊಂಡಿದೆ. ಅರುಣ್ ಸೋಲಂಕಿ ಅವರು ಸ್ನೇಹಿತರು ಹಾಗೂ ಕುಟುಂಬದವರೊಂದಿಗೆ ಚಾರ್‌ಧಾಮ್ ಯಾತ್ರೆಗೆ ತೆರಳಿದ್ದರು. ಈ ಸಂದರ್ಭದಲ್ಲಿ ಹೆಲಿಕಾಪ್ಟರ್ ದುರಂತ ಸಂಭವಿಸಿದೆ. ಪೈಲಟ್ ಕ್ಯಾಪ್ಟನ್ ಹಿಮಾಂಶು ಹಾಗೂ ಪ್ರಯಾಣಿಕರಾದ ಪ್ರತಾಪ್, ಅರುಣ್, ಶಂಕರ್ ಗೌಡ, ಸುಧೀರ್ ಕೆ. ಮತ್ತು ಎಚ್.ಎಸ್. ನಟರಾಜ ಅವರಿದ್ದರು. ಇವರಲ್ಲಿ ಪೈಲಟ್ ಹೊರತುಪಡಿಸಿ ಉಳಿದ ಐವರು ಬೆಂಗಳೂರಿನವರು. ಪ್ರತಿಕೂಲ ಹವಾಮಾನ, ಮಳೆ ಮತ್ತು ಕಡಿಮೆ ಗೋಚರತೆಯಿಂದಾಗಿ ರಕ್ಷಣಾ ಕಾರ್ಯಾಚರಣೆಗೆ ತೊಂದರೆಯಾಗಿದೆ.

ವಿವಿಧ ಕ್ಷೇತ್ರಗಳ 71 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

ಕಾಗೋಡು ತಿಮ್ಮಪ್ಪ, ಬಿ.ವಿ. ಆಚಾರ್ಯ ಸೇರಿ ಗಣ್ಯರಿಗೆ ಗೌರವ: ನಾಳೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ಅ.30: 71ನೇ ಕರ್ನಾಟಕ ರಾಜ್ಯೋತ್ಸವ ಹಿನ್ನೆಲೆ 71 ಸಾಧಕರಿಗೆ ಸರ್ಕಾರ ಪ್ರಶಸ್ತಿ ಘೋಷಣೆ ಮಾಡಿದೆ. ಕನ್ನಡ ಚಲನಚಿತ್ರ ನಟರಾದ ಡಾ. ವಿಷ್ಣುವರ್ಧನ್ ಹಾಗೂ ನಟಿ ಸರೋಜಾ ದೇವಿಯರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿಯನ್ನು ಸರ್ಕಾರ ಘೋಷಿಸಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾಹಿತಿ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸಮಾಜಸೇವೆ 9, ಜಾನಪದ, ಸಂಕೀರ್ಣ ಕ್ಷೇತ್ರದಲ್ಲಿ ತಲಾ 7, ರಂಗಭೂಮಿ, ಸಾಹಿತ್ಯ ಕ್ಷೇತ್ರದಲ್ಲಿ ತಲಾ 6, ಶಿಕ್ಷಣ 4, ಸಂಗೀತ, ಚಲನಚಿತ್ರ/ಕಿರುತೆರೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ತಲಾ 3, ಶಿಲ್ಪಕಲೆ, ಕೃಷಿ, ವಿಜ್ಞಾನ/ತಂತ್ರಜ್ಞಾನ, ಮಾಧ್ಯಮ, ವೈದ್ಯಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ತಲಾ 2, ನೃತ್ಯ, ಯಕ್ಷಗಾನ, ಬಯಲಾಟ, ಕರಕುಶಲ, ಪರಿಸರ, ಮಾಧ್ಯಮ/ಛಾಯಾಚಿತ್ರ, ಸಂಕೀರ್ಣ ವಾಸ್ತುಶಾಸ್ತ್ರ, ಎಂಜಿನಿಯರಿಂಗ್, ನ್ಯಾಯಾಂಗ, ಹೊರನಾಡು/ಹೊರದೇಶ ಮತ್ತು ಚಿತ್ರಕಲೆ ಕ್ಷೇತ್ರಗಗಳಲ್ಲಿ ತಲಾ ಒಬ್ಬರು ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ತಿಳಿಸಿದರು.

ಪ್ರಶಸ್ತಿ ಪುರಸ್ಕೃತರ ಪಟ್ಟಿ

- **ಜಾನಪದ ಕ್ಷೇತ್ರ:** ದಾವಲಸಾಬ ಅತ್ತಾರ, ಕೊಪ್ಪಳ, ಗೌರಮ್ಮ, ಚಾಮರಾಜನಗರ, ಪಾಂಡಪ್ಪ ದೇವಲಪ್ಪ ಲಮಾಣಿ, ಗದಗ, ಎ.ಆರ್. ಸತ್ಯನಾರಾಯಣ, ಬೆಂಗಳೂರು ದಕ್ಷಿಣ, ಈರಣ್ಣ ರುದ್ರಾಕ್ಷಿ, ರಾಯಚೂರು, ಶಿವಲಿಂಗಪ್ಪ ತಂದೆ ರಾಮಣ್ಣ, ಕೊಪ್ಪಳ, ಸುರೇಶ್ ರಾಮಚಂದ್ರ ಜೋಶಿ, ವಿಜಯಪುರ
- **ಸಂಗೀತ ಕ್ಷೇತ್ರ:** ಡಾ. ಸಿ.ಎ. ಶ್ರೀಧರ್, ಮೈಸೂರು, ಡಾ. ಎ.ನಾರಾಯಣಸ್ವಾಮಿ, ಹಾಸನ, ಬಿ.ಮುರಳಿ, ಬೆಂಗಳೂರು ಗ್ರಾಮಾಂತರ
- **ನೃತ್ಯ:** ಡಾ. ಸತ್ಯನಾರಾಯಣರಾಜು, ಬೆಂಗಳೂರು ನಗರ
- **ಚಲನಚಿತ್ರ:** ಬಾಬಜೀ ವೆಂಕಟರಮಣ, ಧಾರವಾಡ, ಅಶೋಕ್, ಬೆಂಗಳೂರು ಗ್ರಾಮಾಂತರ
- **ಕಿರುತೆರೆ:** ಕೆ.ಎಸ್. ರವೀಂದ್ರನಾಥ್, ಬೆಂಗಳೂರು ನಗರ
- **ಯಕ್ಷಗಾನ:** ಗೋಪಾಲ ಗಾಣಿಗ, ಉಡುಪಿ
- **ಬಯಲಾಟ:** ಹುಲಿಗೆಮ್ಮ, ಬಳ್ಳಾರಿ
- **ರಂಗಭೂಮಿ:** ಡಿ.ಕೆಂಪಣ್ಣ ಬಿನ್ ಲೇಟ್ ದ್ಯಾವಪ್ಪ, ಬೆಂಗಳೂರು ಗ್ರಾಮಾಂತರ, ಕೆ. ಜಯಲಕ್ಷ್ಮಿ ಪಾಟೀಲ್, ಧಾರವಾಡ, ಜಿ.ಡಿ. ತಿಮ್ಮಯ್ಯ, ಚಿತ್ರದುರ್ಗ, ಕೆ.ಆರ್. ಸುಮತಿ, ಮೈಸೂರು, ಹೆಚ್.ವಿ. ಪುಟ್ಟವೀರಪ್ಪ, ಬೆಂಗಳೂರು ದಕ್ಷಿಣ, ಹೊನ್ನನಾಯಕ್, ಮೈಸೂರು
- **ಶಿಲ್ಪಕಲೆ:** ಜಿ.ವಿ. ಹಂಸಾನಂದ ಆಚಾರ್ಯ ವಿಜಯನಗರ, ಕಾಡಪ್ಪ, ಬೆಳಗಾವಿ
- **ಚಿತ್ರಕಲೆ:** ಸಿ.ಬಿ.ಸೋಮಶೆಟ್ಟಿ, ಬೀದರ್
- **ಕರಕುಶಲ:** ಶಾಂತಾಬಾಯಿ ಮೋಹನ್ ಕಾಂಬಳೆ, ಬೀದರ್
- **ಕೃಷಿ:** ಎಚ್.ಕೆ. ಶ್ರೀಕಂಠು, ಬೆಂಗಳೂರು ದಕ್ಷಿಣ, ಬಿ.ಎ. ಚನ್ನಪ್ಪಗೌಡ, ಬೆಂಗಳೂರು ನಗರ
- **ಪರಿಸರ:** ಡಾ. ಸ್ವಾಮಿ ಆನಂದ್ ಆರ್, ಮೈಸೂರು
- **ವಿಜ್ಞಾನ ತಂತ್ರಜ್ಞಾನ:** ಪ್ರೊ. ರಾಜಾಸಾಬ್ ಎ.ಎಚ್., ಕಲಬುರಗಿ, ಡಾ. ರಾಜಶೇಖರ ಮೂರ್ತಿ, ಹೊರದೇಶ (ಕೆನಡಾ)

- **ಮಾಧ್ಯಮ:** ಉಮಾಪತಿ, ಚಿತ್ರದುರ್ಗ, ಎಂ.ಪಿ. ಸುಶೀಲ, ಬೆಂಗಳೂರು ನಗರ, ವಿಶ್ವನಾಥ್ ಸುವರ್ಣ, ದಕ್ಷಿಣ ಕನ್ನಡ
- **ಸಂಕೀರ್ಣ:** ರುಕ್ಮಿಣಿ ಬಾಯಿ ನಾಗಪ್ಪ ವಾಷ್ಠರ್, ಬಾಗಲಕೋಟೆ, ಡಿ.ಎಸ್. ಚೌಗಲೆ, ಬೆಳಗಾವಿ, ಬೆಳ್ಳೂರು ಶಂಕರ್‌ನಾರಾಯಣ ದ್ವಾರಕನಾಥ್, ಬೆಂಗಳೂರು ನಗರ, ಬಿ.ಪಿ ಆರಾಧ್ಯ, ಬೆಂಗಳೂರು ದಕ್ಷಿಣ, ರವಿ ಪ್ರವೀಣ್ ನೊರೋನಾ, ಬೆಂಗಳೂರು ನಗರ, ಎಂ.ಆರ್. ಜೈಶಂಕರ್, ಚಿಕ್ಕಮಗಳೂರು, ಪ್ರಸಾದ್ ಬಿಡ್ಡಪ್ಪ, ಕೊಡಗು, ವಾಸಪ್ಪ ಯಲ್ಲಪ್ಪ ಕುಸಗೂರ, ಹಾವೇರಿ
- **ಸಮಾಜಸೇವೆ:** ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿ, ಗದಗ, ಬಸವರಾಜು, ಮಂಡ್ಯ, ಕಾಗೋಡು ತಿಮ್ಮಪ್ಪ, ಶಿವಮೊಗ್ಗ, ಡಾ. ಎಸ್.ಎಂ. ಎಲಿ, ದಾವಣಗೆರೆ, ಡಾ. ಜಿ.ಎಸ್ ಚಂದ್ರಶೇಖರ್ (ಆದರ್ಶ ಚಾರಿಟಬಲ್ ಟ್ರಸ್ಟ್), ಉತ್ತರ ಕನ್ನಡ, ಡಾ. ಶಿವಾನಂದ ಮಹಾಸ್ವಾಮಿ, ಕಲಬುರಗಿ, ಕೃಷ್ಣೇಗೌಡ ಬಿನ್ ವೆಂಕಟರಾಯಪ್ಪ, ಚಿಕ್ಕಬಳ್ಳಾಪುರ, ಎ.ಸಿ. ಭಂಡಾರಿ, (ಅ.ಭಾ ತುಳು ಒಕ್ಕೂಟ), ದಕ್ಷಿಣ ಕನ್ನಡ, ಗುರಮ್ಮ ಹಂಪಯ್ಯ ಸಂಕಿನಮಠ, ಬಾಗಲಕೋಟೆ
- **ವೈದ್ಯಕೀಯ:** ಡಾ. ವಿಜಯೇಂದ್ರ ಹೊನ್ನೂರಪ್ಪ, ಬೆಂಗಳೂರು ನಗರ, ಡಾ.ಸುಜಾತ ಮಲ್ಲಿಕಾರ್ಜುನ ಜಾಲಿ, ಬೆಳಗಾವಿ
- **ಆಡಳಿತ:** ತೆರೆಸಾ ಭಟ್ಟಾಚಾರ್ಯ, ಬೆಂಗಳೂರು ನಗರ, ಡಾ. ಕೆ.ಎಸ್. ಸೋಮಶೇಖರ್, ಹೊರನಾಡು
- **ಇಂಜಿನಿಯರಿಂಗ್:** ಡಾ ಕೆ.ಎನ್. ವೆಂಕಟಕೃಷ್ಣಾರಾವ್, ಚಿಕ್ಕಬಳ್ಳಾಪುರ
- **ಸಾಹಿತ್ಯ:** ಡಾ. ಇಂದಿರಾ ಹೆಗಡೆ, ದಕ್ಷಿಣ ಕನ್ನಡ, ವೀರಹನುಮಾನ್, ರಾಯಚೂರು, ಪ್ರೊ. ನಾರಾಯಣಘಟ್ಟ, ತುಮಕೂರು, ಸಿ. ಮಹೇಶ್ವರಪ್ಪ ಚಟ್ನಳ್ಳಿ, ಚಿಕ್ಕಮಗಳೂರು, ಡಾ. ಕರೀಗೌಡ ಬೀಚನಹಳ್ಳಿ, ತುಮಕೂರು, ಡಾ. ಸಿದ್ಧರಾಮ ಹೊನ್ಕಲ್, ಯಾದಗಿರಿ
- **ಶಿಕ್ಷಣ:** ಫಾ॥ ಜೊಸೆಫ್(ಕ್ರೈಸ್ಟ್ ವಿಶ್ವವಿದ್ಯಾಲಯ, ಉಪ ಕುಲಪತಿಗಳು), ಬೆಂಗಳೂರು ನಗರ, ಶಾಂತಪ್ಪ ದಶವಂತ, ವಿಜಯಪುರ, ಸಂಗೀತಾ ಎನ್ ಕಟ್ಟಿಮನಿ, ಕಲಬುರಗಿ, ಡಾ. ಎನ್.ಎಸ್. ರಂಗರಾಜು, ಮೈಸೂರು
- **ನ್ಯಾಯಾಂಗ:** ಬಿ.ವಿ ಆಚಾರ್ಯ, ಉಡುಪಿ
- **ಹೊರನಾಡು/ಹೊರದೇಶ:** ರಮೇಶ್‌ಗೌಡ (ಮಾಜಿ ಅಧ್ಯಕ್ಷರು, ಅಕ್ಕ ಅಮೆರಿಕಾ)
- **ಕ್ರೀಡೆ:** ಜಿಮ್ ರವಿ, ಕೋಲಾರ, ಡಾ॥ ಎ.ಬಿ.ಸುಬ್ಬಯ್ಯ, ಕೊಡಗು, ಎಂ. ಗಿರೀಶ್, ಬೆಂಗಳೂರು ನಗರ

ಸರೋಜಾದೇವಿ, ಡಾ.ವಿಷ್ಣುವರ್ಧನ್‌ಗೆ ಮರಣೋತ್ತರ ಪ್ರಶಸ್ತಿ

ಬಿ.ಸರೋಜಾದೇವಿ, ಡಾ.ವಿಷ್ಣುವರ್ಧನ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಘೋಷಿಸಲಾಗಿದ್ದು, ನ.19ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ. ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಸೂಪರ್‌ಸ್ಟಾರ್ ರಜನಿಕಾಂತ್ ಆಹ್ವಾನಿಸಲು ಪ್ರಯತ್ನಿಸುತ್ತಿದ್ದೇವೆ. ವಿಷ್ಣುವರ್ಧನ್ ಜೊತೆ ನಟಿಸಿದ ಲಕ್ಷ್ಮೀ ಮತ್ತು ಸುಹಾಸಿನಿ ಅವರನ್ನು ಕಾರ್ಯಕ್ರಮಕ್ಕೆ ಕರೆಸುತ್ತೇವೆ. ಕರ್ನಾಟಕ ರತ್ನ ಪ್ರಶಸ್ತಿಗೆ ಅರ್ಹರು ಇನ್ನೂ ಬಹಳಷ್ಟು ಜನರಿದ್ದಾರೆ. ಮುಂದಿನ ದಿನಗಳಲ್ಲಿ ಅವರನ್ನೂ ಪರಿಗಣನೆ ಮಾಡುತ್ತೇವೆ ಎಂದರು.

ರಾಜ್ಯೋತ್ಸವ ನಿಮಿತ್ತ ದೆಹಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿಲ್ಲ: ಸಿಎಂ ಡಿ.ಕೆ. ಶಿವಕುಮಾರ್

ಬೆಂಗಳೂರು, ಅ.30: ಕರ್ನಾಟಕ ರಾಜ್ಯೋತ್ಸವವನ್ನು ವಿಭಿನ್ನವಾಗಿ ಆಚರಿಸುತ್ತಿದ್ದು, ಹೀಗಾಗಿ ನವೆಂಬರ್ 1ರಂದು ದೆಹಲಿಯಲ್ಲಿ ನಡೆಯಲಿರುವ ಎಸ್‌ಐಆರ್ ವಿರುದ್ಧದ ಪ್ರತಿಭಟನೆಯಲ್ಲಿ ನಾನು ಮತ್ತು ಸಚಿವ ಸಂಪುಟ ಸಹೋದ್ಯೋಗಿಗಳು ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ಶುಕ್ರವಾರ ಪ್ರತಿಕ್ರಿಯಿಸಿ, ಪಕ್ಷದ ವತಿಯಿಂದ ರಾಜ್ಯದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದರು

ಜಿಲ್ಲಾ ಸಚಿವರು ಜಿಲ್ಲೆಗಳಲ್ಲಿ ಧ್ವಜಾರೋಹಣ: ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಚಿವರು ರಾಜ್ಯೋತ್ಸವ ನಿಮಿತ್ತ ಧ್ವಜಾರೋಹಣ ಮಾಡಲಿದ್ದು, ಶಾಸಕರು ಪಾಲ್ಗೊಳ್ಳಲಿದ್ದಾರೆ. ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರಿಗೆ ಅನಾರೋಗ್ಯದಿಂದಾಗಿ ವಿಶ್ರಾಂತಿಯ ಅಗತ್ಯವಿದ್ದು, ಅವರ ಬದಲಿಗೆ ಸಚಿವ ಕೃಷ್ಣ ಬೈರೇಗೌಡ ಧ್ವಜಾರೋಹಣ ಮಾಡಲಿದ್ದಾರೆ ಎಂದು ವಿವರಿಸಿದರು.

ಪ್ರಶಸ್ತಿ ನಿರಾಕರಿಸಿದ ವಾಟಾಳ್ ನಾಗರಾಜ್: ರಾಜ್ಯೋತ್ಸವ ಪ್ರಶಸ್ತಿಯನ್ನು ಇಂತಿಷ್ಟೇ ಮಂದಿಗೆ ಕೊಡಬೇಕು ಎಂದು ನಿಗದಿ ಮಾಡಲಾಗಿದೆಯೇ ಎಂದು ಕೇಳಿದಾಗ, ನಾವು ಎಷ್ಟನೇ ವರ್ಷದ ರಾಜ್ಯೋತ್ಸವ ಆಚರಿಸುತ್ತಿರುತ್ತೇವೋ ಅಷ್ಟು ಜನರಿಗೆ ಪ್ರಶಸ್ತಿ ಪ್ರದಾನ ಮಾಡುವುದು ಈ ಹಿಂದಿನಿಂದ ನಡೆದು ಬಂದಿರುವ ಸಂಪ್ರದಾಯ. ಅದನ್ನು ಈ ಬಾರಿಯೂ ಮುಂದುವರಿಸುತ್ತೇವೆ.

ಈ ಬಾರಿ ಕನ್ನಡಕ್ಕಾಗಿ ಹೋರಾಡಿದ ವಾಟಾಳ್ ನಾಗರಾಜ್ ಅವರ ಹೆಸರನ್ನು ಪ್ರಶಸ್ತಿಗೆ ಅಂತಿಮಗೊಳಿಸಲಾಗಿತ್ತು. ಅವರಿಗೆ ಈ ಪ್ರಶಸ್ತಿ ನೀಡಬೇಕು ಎನ್ನುವುದು ನನ್ನ ಆಸೆಯೂ ಆಗಿತ್ತು. ಆದರೆ, ವಾಟಾಳ್ ನಾಗರಾಜ್ ಅವರು ಈ ಹಿಂದಿನಂತೆ, ಈ ಬಾರಿಯೂ ಪ್ರಶಸ್ತಿಯನ್ನು ನಿರಾಕರಿಸಿದ್ದಾರೆ ಎಂದು ಸಿಎಂ ತಿಳಿಸಿದ್ದಾರೆ.

ಕಾಂಗ್ರೆಸ್ ಆರಂಭಿಸಿದ ಬ್ಯಾಂಕ್‌ಗಳನ್ನು ಮಾರುತ್ತಿರುವ ಮೋದಿ

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಾಗ್ದಾಳಿ



ನವದೆಹಲಿ, ಅ.30: ದೇಶದ ಪ್ರಮುಖ ಐಡಿಬಿಐ ಬ್ಯಾಂಕ್ ಅನ್ನು ಕೆನಡಾ ಮೂಲದ ಫೇರ್‌ಫಾಕ್ಸ್ ಫೈನಾನ್ಷಿಯಲ್ ಹೋಲ್ಡಿಂಗ್ಸ್‌ಗೆ ಮಾರಾಟ ಮಾಡುವ ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧ ಶುಕ್ರವಾರ (ಅ.30) ಕಾಂಗ್ರೆಸ್ ನಾಯಕ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಅವರು, ಕಾಂಗ್ರೆಸ್‌ನ ಅವಧಿಯಲ್ಲಿ, ದೇಶದ ಕೈಗಾರಿಕಾ ರಂಗವನ್ನು ಕಟ್ಟಲು ಐಡಿಬಿಐ ಅನ್ನು ಸ್ಥಾಪಿಸಲಾಯಿತು. ಕಾಂಗ್ರೆಸ್‌ನ ಅವಧಿಯಲ್ಲಿ ಬ್ಯಾಂಕುಗಳನ್ನು ಸೃಷ್ಟಿಸಲಾಗುತ್ತಿತ್ತು. ಮೋದಿ ಅವರ ಅವಧಿಯಲ್ಲಿ ಅವುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಕಿಡಿಕಾರಿದ್ದಾರೆ.

ಮೋದಿ ಅವರ ಅವಧಿಯಲ್ಲಿ, ಮೊದಲು ಬಿಡ್ಡಿಂಗ್ ನಡೆಯಿತು, ನಂತರ ಬೆಲೆಯನ್ನು ನಿಗದಿಪಡಿಸಲಾಯಿತು. ನಾನು ಐಡಿಬಿಐ ಬ್ಯಾಂಕ್ ನೌಕರರ ಪರವಾಗಿ ನಿಲ್ಲುತ್ತೇನೆ ಎಂದು ಅವರಿಗೆ ಬೆಂಬಲವಾಗಿ ಬಹಿರಂಗ ಪತ್ರವನ್ನು ಬರೆದಿದ್ದಾರೆ ಐಡಿಬಿಐ ಬ್ಯಾಂಕ್ ನೌಕರರಿಗೆ ಬರೆದ ಪತ್ರವನ್ನು ಹಂಚಿಕೊಂಡಿರುವ ಅವರು, ಅದರಲ್ಲಿ ಕೇಂದ್ರ ಸರ್ಕಾರವು ಕೆನಡಾ ಮೂಲದ ಫೇರ್‌ಫಾಕ್ಸ್ ಫೈನಾನ್ಷಿಯಲ್ ಹೋಲ್ಡಿಂಗ್ಸ್‌ಗೆ ಐಡಿಬಿಐ ಬ್ಯಾಂಕ್‌ನಲ್ಲಿನ ತನ್ನ ಬಹುಪಾಲು ಪಾಲನ್ನು ಮಾರಾಟ ಮಾಡುವ ಪ್ರಸ್ತಾಪವನ್ನು ವಿರೋಧಿಸುತ್ತಿರುವ ಐಡಿಬಿಐ ಬ್ಯಾಂಕ್ ನೌಕರರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ತೆರಿಗೆದಾರರ ಹಣದಿಂದ ನಿರ್ಮಿಸಲಾದ ಲಾಭದಾಯಕ ಸಾರ್ವಜನಿಕ ಸಂಸ್ಥೆಯನ್ನು ಸರ್ಕಾರ ಮಾರಾಟ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಮತ್ತು ಐಡಿಬಿಐ ಬ್ಯಾಂಕ್ ಅನ್ನು ಖಾಸಗೀಕರಣಗೊಳಿಸುವ ಹಿಂದಿನ ತಾರ್ಕಿಕತೆಯನ್ನು ಪ್ರಶ್ನಿಸಿದ್ದಾರೆ. ಜೊತೆಗೆ ಪ್ರಸ್ತಾವಿತ ವಹಿವಾಟಿನ ನೌಕರರು, ಠೇವಣಿದಾರರು ಮತ್ತು ಮೀಸಲಾತಿ ನೀತಿಗಳ ಮೇಲೆ ಉಂಟಾಗುವ ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಹಾಗೂ ಈ ಬಗ್ಗೆ ಲೋಕಸಭೆಯಲ್ಲಿ ಪ್ರಶ್ನಿಸಿದಾಗಲೂ ಸರ್ಕಾರದಿಂದ ಸಮರ್ಪಕ ಉತ್ತರ ಸಿಗಲಿಲ್ಲ ಎಂದಿದ್ದಾರೆ.

ಮೀಸಲಾತಿ ಮೇಲೆ ಪರಿಣಾಮ

ಐಡಿಬಿಐ ಬ್ಯಾಂಕಿನಲ್ಲಿ ಕನಿಷ್ಠ 51 ಪ್ರತಿಶತದಷ್ಟು ಮಾಲೀಕತ್ವವನ್ನು ಯಾವಾಗಲೂ ಉಳಿಸಿಕೊಳ್ಳುವುದಾಗಿ ಸರ್ಕಾರ ಸಂಸತ್ತಿಗೆ 2003ರಲ್ಲಿ ನೀಡಿದ ಭರವಸೆಯನ್ನು ಉಲ್ಲೇಖಿಸಿದ್ದು, ಸಾರ್ವಜನಿಕ ಹಣದಿಂದ ನಿರ್ಮಿಸಲಾದ ಸಂಸ್ಥೆಯು ಸಾರ್ವಜನಿಕರಿಗೆ ಸೇರಿದ್ದು.... 2003ರಲ್ಲಿ, ಸರ್ಕಾರವು ಐಡಿಬಿಐನಲ್ಲಿ ಕನಿಷ್ಠ 51 ಪ್ರತಿಶತದಷ್ಟು ಪಾಲನ್ನು ಯಾವಾಗಲೂ ಹೊಂದಿರುವುದಾಗಿ ಸಂಸತ್ತಿಗೆ ಭರವಸೆ ನೀಡಿತ್ತು ಎಂದು ಹೇಳಿದ್ದಾರೆ. ಖಾಸಗೀಕರಣವು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನಿಬಂಧನೆಗಳ ಮೇಲೆ ಪರಿಣಾಮ ಬೀರಬಹುದುಬ್ಯಾಂಕ್ ಖಾಸಗಿ ಒಡೆತನಕ್ಕೆ ಹೋದಾಗ ಅದರೊಂದಿಗೆ ಮೀಸಲಾತಿಯೂ ಹೋಗುತ್ತದೆ. ಈಗಾಗಲೇ ದುರ್ಬಲಗೊಂಡಿರುವ ನಿಮ್ಮ ಸೇವಾ ಷರತ್ತುಗಳು, ತಮ್ಮ ಕೊನೆಯ ರಕ್ಷಣಾ ಕವಚವನ್ನೂ ಕಳೆದುಕೊಳ್ಳಲಿವೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಇರಾನ್ ಯುದ್ಧ ಶೀಘ್ರ ಕೊನೆಗೊಳ್ಳಲಿದೆ: ಟ್ರಂಪ್

ವಾಷಿಂಗ್ಟನ್, ಅ.30: ನವೆಂಬರ್ 3 ರಂದು ನಡೆಯಲಿರುವ ಮಧ್ಯಂತರ ಕಾಂಗ್ರೆಷನಲ್ (ಸಂಸದೀಯ) ಚುನಾವಣೆಗಳ ಹಿನ್ನೆಲೆಯಲ್ಲಿ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಜೊತೆಗಿನ ಯುದ್ಧವು ಶೀಘ್ರದಲ್ಲೇ ಕೊನೆಗೊಳ್ಳಲಿದೆ ಎಂದು ಶುಕ್ರವಾರ ಹೇಳಿದ್ದಾರೆ.

ಆದರೆ ಇದು ಹೇಗೆ ಸಂಭವಿಸುತ್ತದೆ ಎಂಬುದನ್ನು ಅವರು ವಿವರಿಸಲಿಲ್ಲ. "ಇದು ಶೀಘ್ರದಲ್ಲೇ ಕೊನೆಗೊಳ್ಳಲಿದೆ ಎಂದು ಕ್ಯಾನ್ಸಾಸ್ ಸಿಟಿಯ ರೇಡಿಯೋ ಕೇಂದ್ರ ಕೆಸಿಎಂಓ' ಜೊತೆಗಿನ ಸಂದರ್ಶನದಲ್ಲಿ ಟ್ರಂಪ್ ತಿಳಿಸಿದರು.

"ಅಲ್ಲಿ ಎಂದಿಗೂ ಪರಮಾಣು ಅಸ್ತ್ರಗಳು ಇರುವುದಿಲ್ಲ ಎಂಬ ಖಾತರಿ ನಮಗೆ ಬೇಕು," ಎಂದು ಅವರು ಹೇಳಿದರು.

ಇತ್ತ, ಇರಾನ್ ಮತ್ತು ಅಮೆರಿಕದ ನಡುವೆ ಶಾಂತಿ ಒಪ್ಪಂದ ವೊಂದಕ್ಕಾಗಿ ಮಾತುಕತೆ ನಡೆಯುತ್ತಿದ್ದು, ಈ ಪ್ರಕ್ರಿಯೆಯನ್ನು ಮುಂದುವರಿಸಲು ಕತಾರ್‌ನ ಮಧ್ಯವರ್ತಿಗಳು ಟೆಹ್ರಾನ್‌ಗೆ ಮರಳಿದ್ದಾರೆ. ಚುನಾವಣೆಗೂ ಮುನ್ನ ಅಮೆರಿಕವು ಇರಾನ್ ಮೇಲೆ ದಾಳಿ ನಡೆಸುವುದಿಲ್ಲ ಎಂದು ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

ನಿತ್ಯ ಪಂಚಾಂಗ 31.10.2026 ಶನಿವಾರ

ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ಆಶ್ವಯುಜ ಬಹುಳ, ಷಷ್ಠಿ,
ಆರ್ದ್ರಾ ನಕ್ಷತ್ರ,
ರಾಷ್ಟ್ರೀಯ ಏಕೀಕರಣ ದಿನ,
ಲಾಲ ಲಜಪತರಾಯ್ ಪುಣ್ಯದಿನ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	ಸ. 5.04– 6.33	12.00– 1.30	3.00– 4.00
ಸೋಮ	ಬೆ. 7.20– 9.04	10.30–12.00	1.30– 3.00
ಮಂಗಳ	ಮ. 3.25– 4.59	9.00–10.30	12.00– 1.30
ಬುಧ	ಮ.12.16– 1.50	7.30– 9.00	10.30– 12.00
ಗುರು	ಮ. 1.50– 3.29	6.00– 7.30	9.00– 10.30
ಶುಕ್ರ	ಬೆ.10.42–12.16	3.00– 4.30	7.30– 9.00
ಶನಿ	ಬೆ. 9.07–10.41	1.30– 3.00	6.00– 7.30

ಎಸ್ಐಆರ್ ಪ್ರಕ್ರಿಯೆ ಸಮರ್ಥಿಸುವ ಉದ್ದೇಶವಲ್ಲ: ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ: ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟೀಕರಣ

ಬೆಂಗಳೂರು, ಅ.30: ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯನ್ನು ಸಮರ್ಪಕವಾಗಿ ನಡೆಸಲಾಗಿದೆ ಎಂಬ ಅರ್ಥ ಬರುವಂತೆ ತಾವು ಈ ಹಿಂದೆ ನೀಡಿದ್ದ ಹೇಳಿಕೆಗೆ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಶುಕ್ರವಾರ ಸ್ಪಷ್ಟನೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು,

ತಮ್ಮ ಹಿಂದಿನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ಎಸ್ಐಆರ್ ಪ್ರಕ್ರಿಯೆಯನ್ನು ಸಮರ್ಥಿಸುವ ಉದ್ದೇಶ ತಮಗಿರಲಿಲ್ಲ. ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಬದಲಾವಣೆ ಮಾಡಲು ಬಿಜೆಪಿ ನಡೆಸಿದೆ ಎನ್ನಲಾದ ಪ್ರಯತ್ನಗಳನ್ನು ರಾಜ್ಯ ಕಾಂಗ್ರೆಸ್ ಹೇಗೆ ತಡೆಗಟ್ಟಿದೆ ಎಂಬುದನ್ನು ತಿಳಿಸುವುದು ತಮ್ಮ ಉದ್ದೇಶವಾಗಿತ್ತೇ ಹೊರತು, ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ಸಮರ್ಥಿಸುವುದಾಗಿರಲಿಲ್ಲ ಎಂದಿದ್ದಾರೆ.

ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ನಮೂನೆ-7 ನ್ನು ಬಳಸಿಕೊಂಡು ಕಾಂಗ್ರೆಸ್ ಬೆಂಬಲಿತ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಬಿಜೆಪಿ ನಡೆಸಿದ ಸಂಚನ್ನು ನಮ್ಮ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರ ಹೋರಾಟ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ವಿಫಲಗೊಳಿಸಲಾಗಿದೆ ಎಂಬುದನ್ನು ತಿಳಿಸುವುದು ನನ್ನ ಉದ್ದೇಶವಾಗಿತ್ತು. ಎಸ್ಐಆರ್ ಪ್ರಕ್ರಿಯೆ ಸರಿಯಾಗಿದೆ ಎಂಬ ಅರ್ಥದಲ್ಲಿ ನಾನು ಹೇಳಿಕೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಜತೆಗೆ ತಮ್ಮದೇ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಿರುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಪರಿಷ್ಕೃತ ಅಂತಿಮ ಮತದಾರರ ಪಟ್ಟಿ ಇನ್ನೂ ನಮ್ಮ ಕೈಗೆ ಬಂದಿಲ್ಲ. ಅದು ಲಭ್ಯವಾದ ಬಳಿಕ ಪಟ್ಟಿಯಿಂದ ಕೈಬಿಡಲಾದ ಮತದಾರರು ಬೇರೆಡೆಗೆ ಸ್ಥಳಾಂತರ ಗೊಂಡಿದ್ದಾರೆಯೇ, ಮೃತಪಟ್ಟಿದ್ದಾರೆಯೇ ಅಥವಾ ಒಂದಕ್ಕಿಂತ ಹೆಚ್ಚು ಬಾರಿ ಹೆಸರು ನೋಂದಣಿಯಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುವುದು. ಆ ಬಳಿಕ ಈ ಕುರಿತು ಸ್ಪಷ್ಟ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ.

ರೈತರಿಗೆ 2,500 ರೂ. ಪರಿಹಾರ ನೀಡಲು 17 ಷರತ್ತು: ನೇರವಾಗಿ ಡಿಬಿಟಿ ಮೂಲಕ ಹಣ ನೀಡುವಂತೆ ಆರ್.ಅಶೋಕ್ ಒತ್ತಾಯ

ಬೆಂಗಳೂರು, ಅ.30: ರೈತರಿಗೆ ನೆರವು ನೀಡುವ ವಿಷಯದಲ್ಲಿ ಹೊಣೆಗೇಡಿತನ ಪ್ರದರ್ಶಿಸಿರುವ ಕಾಂಗ್ರೆಸ್‌ಗೆ ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆ ಇಲ್ಲ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಐದಾರು ತಿಂಗಳಿಂದ ಬರ ಪರಿಸ್ಥಿತಿ ಎದುರಿಸುತ್ತಿರುವ ರೈತರಿಗೆ ಪರಿಹಾರ ನೀಡಲು ವಿಳಂಬ ಮಾಡಿರುವ ಸರ್ಕಾರ, ವಿಶೇಷ ಅಧಿವೇಶನ ನಡೆಸಿ ಪ್ರತಿ ರೈತ ಕುಟುಂಬಕ್ಕೆ 2,500 ಪರಿಹಾರ ಘೋಷಿಸಿತ್ತು. ಒಂದು ತಿಂಗಳು ಕಳೆದರೂ ರೈತರ ಖಾತೆಗೆ ಹಣ ಜಮೆಯಾಗಿಲ್ಲ. ಇದೀಗ ಪರಿಹಾರ ನೀಡಲು ಬರೋಬ್ಬರಿ 17 ಕಠಿಣ ಷರತ್ತುಗಳನ್ನು ವಿಧಿಸುವ ಮೂಲಕ ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿದೆ. ರೈತರಿಗೆ ಪರಿಹಾರ ನೀಡುವುದಕ್ಕಿಂತ ಅವರನ್ನು

ಕಚೇರಿಯಿಂದ ಕಚೇರಿಗೆ ಅಲೆದಾಡಿಸುವುದೇ ಸರ್ಕಾರದ ಉದ್ದೇಶವಾಗಿದೆ. ಪರಿಹಾರ ನೀಡಲು ಸರ್ಕಾರಕ್ಕೆ ಸಾಧ್ಯವಾಗದಿದ್ದರೆ ಅಧಿಕಾರದಲ್ಲಿರುವುದರ ಔಚಿತ್ಯವೇನು ಪ್ರಶ್ನಿಸಿದರು.

ಷರತ್ತು ವಿಧಿಸುವ ಅಗತ್ಯವೇನು?

ಕಂದಾಯ ಇಲಾಖೆಯಲ್ಲಿರುವ ರೈತರ ಬ್ಯಾಂಕ್ ಖಾತೆ ವಿವರಗಳು, ಭೂ ದಾಖಲೆಗಳು ಹಾಗೂ ಇತರ ಮಾಹಿತಿಗಳು ಈಗಾಗಲೇ ಡಿಜಿಟಲ್ ವ್ಯವಸ್ಥೆಯಲ್ಲಿವೆ. ಹಿಂದೆ ನಾನು ಕಂದಾಯ ಸಚಿವನಾಗಿದ್ದಾಗ ಡಿಬಿಟಿ ಮೂಲಕ ನೇರವಾಗಿ ರೈತರ ಖಾತೆಗಳಿಗೆ ಹಣ ವರ್ಗಾವಣೆ ಮಾಡಲಾಗಿದೆ. ಫ್ರೂಟ್ಸ್ ತಂತ್ರಾಂಶದಲ್ಲೂ ರೈತರ ವಿವರಗಳಿವೆ. ಹೀಗಿರುವಾಗ ಮತ್ತೆ 17 ಷರತ್ತುಗಳನ್ನು ವಿಧಿಸುವ ಅಗತ್ಯವೇನಿದೆ ಎಂದು ಅಶೋಕ್ ಪ್ರಶ್ನಿಸಿದರು.

ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಕೇಂದ್ರ ಸರ್ಕಾರ ಪ್ರತಿ ವರ್ಷ 6,000 ರೂ. ಹಣವನ್ನು ರೈತರ ಖಾತೆಗೆ ನೇರವಾಗಿ ವರ್ಗಾವಣೆ ಮಾಡುತ್ತಿದೆ. ಅದಕ್ಕೆ 17 ಷರತ್ತುಗಳ ಅಗತ್ಯವಿಲ್ಲ. ರಾಜ್ಯ ಸರ್ಕಾರವೂ ಅದೇ ಮಾದರಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ನೀಡಿ, ಅರ್ಹ ರೈತರ ಖಾತೆಗಳಿಗೆ ನೇರವಾಗಿ ಪರಿಹಾರ ವರ್ಗಾವಣೆ ಮಾಡಬೇಕು. ರೈತರಿಗೆ ಭರವಸೆಗಳೂ ಬೇಡ, ಅಲೆದಾಟವೂ ಬೇಡ. ತಕ್ಷಣ ಹಣ ಬಿಡುಗಡೆ ಮಾಡಬೇಕು ಎಂದು ಅಶೋಕ್ ಆಗ್ರಹಿಸಿದರು.

ಹಾಲಿನ ದರ ಏರಿಕೆ, ಜನಸಾಮಾನ್ಯರಿಗೆ ಹೊರೆ

ರಾಜ್ಯ ಸರ್ಕಾರ ಏಕಾಏಕಿ ಪ್ರತಿ ಲೀಟರ್ ಹಾಲಿನ ದರವನ್ನು 8ರೂ. ಹೆಚ್ಚಿಸಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಹಿಂದೆ ಮೂರು ಸಲ ಹಾಲಿನ ದರ ಏರಿಕೆ ಮಾಡಲಾಗಿದೆ. ಆದರೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹಾಲಿನ ಸಬ್ಸಿಡಿಯನ್ನು 5ರಿಂದ 7ರೂ.ಗೆ ಹೆಚ್ಚಿಸುವುದಾಗಿ, ಪಶುಭಾಗ್ಯ ಯೋಜನೆಯಡಿ ಹಸು ಮತ್ತು ಎಮ್ಮೆ ಖರೀದಿಗೆ 3 ಲಕ್ಷ ರೂ.ವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡುವುದಾಗಿ, ಕ್ಷೀರ ಕ್ರಾಂತಿ ಹಾಗೂ ಕ್ಷೀರ ಕ್ರೆಡಿಟ್ ಕಾರ್ಡ್ ಯೋಜನೆ, ಪುಣ್ಯಕೋಟಿ ನಂದಿನಿ ನಮ್ಮದು, ಎಲ್ಲ ಕಂದಾಯ ಭಾಗದಲ್ಲಿ ಪಾಲಿಟೆಕ್ನಿಕ್ ಸ್ಥಾಪನೆ ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು. ಇವುಗಳಲ್ಲಿ ಎಷ್ಟು ಭರವಸೆಗಳನ್ನು ಈಡೇರಿಸಲಾಗಿದೆ ಒಂದು ಭರವಸೆ ಈಡೇರಿಸಿಲ್ಲ ಎಂದು ಅಶೋಕ್ ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ಒಂದೆಡೆ ಗ್ಯಾರಂಟಿಗಳ ಹೆಸರಿನಲ್ಲಿ ಪ್ರಚಾರ ಮಾಡುತ್ತಿದ್ದು, ಮತ್ತೊಂದೆಡೆ ತೆರಿಗೆ ಮತ್ತು ಬೆಲೆ ಏರಿಕೆಯ ಮೂಲಕ ಜನರನ್ನು ಶೋಷಿಸುತ್ತಿದೆ.

ಸಿದ್ದರಾಮಯ್ಯ ಅವರ ಅವಧಿಯಲ್ಲಿ ಒಂದು ಸುತ್ತಿನ ಬೆಲೆ ಏರಿಕೆಯಾಗಿದ್ದರೆ, ಈಗ ಡಿ.ಕೆ.ಶಿವಕುಮಾರ್ ಅವರ ಅವಧಿಯಲ್ಲಿ ಮತ್ತೊಂದು ಸುತ್ತಿನ ಬೆಲೆ ಏರಿಕೆ ನಡೆಯುತ್ತಿದೆ.

ಹಾಲಿನ ದರವನ್ನು 8 ಹೆಚ್ಚಿಸಿರುವುದು ಜನವಿರೋಧಿ ನಿರ್ಧಾರ. ಇಂತಹ ಜನವಿರೋಧಿ ನೀತಿಗಳ ಪರಿಣಾಮವಾಗಿಯೇ ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ನಾಲ್ಕೂ ಕ್ಷೇತ್ರಗಳಲ್ಲಿ ಸೋಲು ಅನುಭವಿಸಿದೆ. ಇದೇ ಧೋರಣೆ ಮುಂದುವರಿದರೆ 2028ರ ಚುನಾವಣೆಯಲ್ಲೂ ಜನರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಕುಮಾರಸ್ವಾಮಿ ಕೇಳಿ ಸಚಿವರ ನೇಮಕ ಮಾಡಲ್ಲ: ಪ್ರಿಯಾಂಕ್ ಖರ್ಗೆ ತಿರುಗೇಟು

ಬೆಂಗಳೂರು, ಅ.30: ಗೃಹ ಇಲಾಖೆ ಯಾರಿಗೆ ನೀಡಬೇಕು, ಮುಖ್ಯಮಂತ್ರಿಯಾಗಿ ಯಾರನ್ನು ನೇಮಿಸಬೇಕು ಎಂಬುದನ್ನು ಎಚ್.ಡಿ. ಕುಮಾರಸ್ವಾಮಿ ಕೇಳಿ ಸರ್ಕಾರ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

ಕುಮಾರಸ್ವಾಮಿ ಮೊದಲು ತಮ್ಮ ಸ್ಥಾನಕ್ಕೆ ಗೌರವ ನೀಡುವುದನ್ನು ಕಲಿಯಬೇಕು. ತಮ್ಮ ಕುರ್ಚಿಗೆ ಅವರೇ ಗೌರವ ಕೊಡದಿದ್ದರೆ ಬೇರೆಯವರು ಹೇಗೆ ಗೌರವ ನೀಡುತ್ತಾರೆ. ಯಾರದೋ ಮಾತು ಕೇಳಿಕೊಂಡು ಇತರರನ್ನು ನಿಂದಿಸಿದರೆ ಮುಂದೆ ಅವರಿಗೇ ತೊಂದರೆ ಯಾಗಲಿದೆ ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ ಕುಮಾರ ಸ್ವಾಮಿ ಅವರನ್ನು ನಿರುದ್ಯೋಗಿ ಸಚಿವ ಎಂದು ವ್ಯಂಗ್ಯವಾಡಿದ ಅವರು, ಅವರ ಬಗ್ಗೆ ಹೆಚ್ಚು ಮಾತನಾಡುವ ಅಗತ್ಯವಿಲ್ಲ. ಸರ್ಟಿಫಿಕೇಟ್ ಕೊಡಲು ಇವರ್‍ಯಾರು, ಅವರಿಗೆ ಕೆಲಸ ಇಲ್ಲ ಎಂದು ಕುಟುಕಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬಿಜೆಪಿ ನಾಯಕರು ಟೀಕಿಸಿರುವ ಬಗ್ಗೆ ಪ್ರತಿಕ್ರಿಸಿದ ಅವರು ಯಾರು ಏನೇ ಅಂದ್ರು ಖರ್ಗೆಯವರ ವರ್ಚಸ್ಸಿಗೆ ಧಕ್ಕೆ ಬರಲ್ಲ. ಖರ್ಗೆ ಹೇಗೆ ಬೆಳೆದು ಬಂದಿದ್ದಾರೆ ಎಂಬುದು ಎಲ್ಲ ಗೊತ್ತಿದೆ ಎಂದರು.

ಮಹದೇವಪ್ಪ-ಸಿದ್ದರಾಮಯ್ಯ ವಿಚಾರದಲ್ಲಿ ಸಂಘರ್ಷವಿಲ್ಲ

ಸಂವಿಧಾನ ದಿನಾಚರಣೆ ಕಾರ್ಯಕ್ರಮದ ವಿಚಾರವಾಗಿ ಸಚಿವ ಎಚ್.ಸಿ. ಮಹದೇವಪ್ಪ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ನಡುವೆ ಸಂಘರ್ಷವಿದೆ ಎಂಬ ಚರ್ಚೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಸರ್ಕಾರದ ವತಿಯಿಂದ ನಡೆಯುವ ಕಾರ್ಯಕ್ರಮಗಳ ಬಗ್ಗೆ ನಮಗೆ ಸ್ಪಷ್ಟವಾದ ಯೋಜನೆ ಇದೆ ಎಂದರು. ಮಹದೇವಪ್ಪ ಹಿರಿಯ ನಾಯಕರು. ಅವರು ಪ್ರತ್ಯೇಕವಾಗಿ ಕಾರ್ಯಕ್ರಮ ಆಯೋಜಿಸಿದರೆ ಅದಕ್ಕೂ ಸರ್ಕಾರದ ಕಾರ್ಯಕ್ರಮಕ್ಕೂ ಏನು ಸಂಬಂಧ? ಸಂವಿಧಾನ ದಿನಾಚರಣೆಯನ್ನು ನವೆಂಬರ್ 26ರಂದೇ ಆಚರಿಸಬೇಕು. ಕಳೆದ ಬಾರಿಯೂ ಮಹದೇವಪ್ಪ ಅವರು ಸಚಿವರಾಗಿದ್ದಾಗ ರಾಜ್ಯದ ಪ್ರತಿಯೊಂದು ತಾಲೂಕಿನಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮಗಳನ್ನು ನಡೆಸಿದ್ದರು. ಇದರಲ್ಲಿ ಸಂಘರ್ಷದ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ದೆಹಲಿ ನಿವಾಸದಲ್ಲಿ ಮಹಜರು ನಡೆದಿಲ್ಲ: ಎಚ್.ಡಿ. ಕುಮಾರಸ್ವಾಮಿ

ಸುದ್ದಿವಾಹಿನಿ, ಪತ್ರಿಕೆಗಳಲ್ಲಿನ ವರದಿಗಳು ಸಂಪೂರ್ಣ ಸುಳ್ಳು, ದುರುದ್ದೇಶ ಬಿತ್ತುವ ಯತ್ನ

ಬೆಂಗಳೂರು, ಅ.30: ನವದೆಹಲಿಯಲ್ಲಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಅಧಿಕೃತ ನಿವಾಸದಲ್ಲಿ ಪರಿಶೀಲನೆ ನಡೆಸಲಾಗಿದೆ ಮತ್ತು ಮಹಜರು ಸಿದ್ಧಪಡಿಸಲಾಗಿದೆ ಎಂದು ರಾಜ್ಯದ ಕೆಲವು ಸುದ್ದಿವಾಹಿನಿಗಳು ಪ್ರಸಾರ ಮಾಡುತ್ತಿರುವ, ಕೆಲ ದಿನಪತ್ರಿಕೆಗಳು ಪ್ರಕಟಿಸಿರುವ ವರದಿಗಳು ಸಂಪೂರ್ಣ ಸುಳ್ಳು, ದುರುದ್ದೇಶಪೂರಿತ ಮತ್ತು ತಪ್ಪು ಕಲ್ಪನೆಗಳನ್ನು ಬಿತ್ತುವ ಪ್ರಯತ್ನಗಳಾಗಿವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಸರಕಾರದೊಳಗಿನ ಕೆಲ

ಸ್ವಾರ್ಥ ಹಿತಾಸಕ್ತಿಗಳು, ನೇರವಾಗಿ ಅಥವಾ ಸಿಸಿಬಿಯಂತಹ ತನಿಖಾ ಸಂಸ್ಥೆಗಳ ಮೂಲಕ ವ್ಯಕ್ತಿಗಳ ಘನತೆಗೆ ಧಕ್ಕೆ ತರುವ ಮತ್ತು ಸುಳ್ಳು ನಿರೂಪಣೆಯನ್ನು ಸೃಷ್ಟಿಸುವ ಉದ್ದೇಶದಿಂದ ಮಾಧ್ಯಮಗಳಲ್ಲಿ ಕಟ್ಟುಕಥೆಗಳನ್ನು ಹಾಗೂ ದಾರಿತಪ್ಪಿಸುವ ಮಾಹಿತಿಯನ್ನು ಹರಡಲು ಪ್ರಯತ್ನಿಸುತ್ತಿರುವುದು ಸ್ಪಷ್ಟವಾಗಿದೆ.

ಪರಿಶೀಲಿಸದ ಮಾಹಿತಿಯನ್ನು ಆಯ್ದು ಸೋರಿಕೆ ಮಾಡುವ ಮೂಲಕ ಮತ್ತು ದಿನಪತ್ರಿಕೆ ಮತ್ತು ಸುದ್ದಿವಾಹಿನಿಗಳನ್ನು ರಾಜಕೀಯ ಕೆಸರೆರಚಾಟಕ್ಕೆ ಬಳಸಿಕೊಳ್ಳುವ ಮೂಲಕ ಸರಕಾರವು ಇಂತಹ ತಂತ್ರಗಳನ್ನು ಅನುಸರಿಸಬಾರದು ಎಂದು ಎಚ್ಚರಿಸುತ್ತೇವೆ ಎಂದು ಹೇಳಿದ್ದಾರೆ. ಹಾಗೂ ಇಂತಹ ಕಟ್ಟುಕತೆ, ಸುದ್ದಿಗಳನ್ನು ಪ್ರಕಟಿಸದಂತೆಯೂ ಮನವಿ ಮಾಡಿದ್ದಾರೆ.

ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಜೋರು, ಆಂತರಿಕ ಅಭಿಪ್ರಾಯ ಭೇದವೂ ಜೋರು

ನ.10ಕ್ಕೆ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವಧಿ ಅಂತ್ಯ

ಬೆಂಗಳೂರು, ಅ.30: ಚುನಾವಣೆಗೆ ಇನ್ನೂ ಅವಧಿ ಇದ್ದರೂ ರಾಜ್ಯ ಬಿಜೆಪಿಯಲ್ಲಿ ಮುಂದಿನ ಅಧ್ಯಕ್ಷರು ಯಾರು ಎಂಬ ಚರ್ಚೆ ಈಗ ಕೇಂದ್ರಬಿಂದುವಾಗಿದೆ. ಹಾಲಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಅವಧಿ ನವೆಂಬರ್ 10ಕ್ಕೆ ಕೊನೆಗೊಳ್ಳುತ್ತಿದ್ದು, ಹಿರಿಯ ನಾಯಕರ ನಡುವೆ ಈ ಹುದ್ದೆಗಾಗಿ ಒಳಗಿನ ಸ್ಪರ್ಧೆ ಮತ್ತು ಅಭಿಪ್ರಾಯ ಭೇದ ಜೋರಾಗಿದೆ. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿನ ಎಡವಟ್ಟುಗಳು, ಬರದ ಪರಿಸ್ಥಿತಿ ಮತ್ತು ನಾಯಕತ್ವದ ಗೊಂದಲಗಳು ಪ್ರತಿಪಕ್ಷಕ್ಕೆ ಸರ್ಕಾರವನ್ನು ಕಟ್ಟಿಹಾಕಲು ಸಾಕಷ್ಟು ಅವಕಾಶ ನೀಡಿವೆ.

ಇತ್ತೀಚಿನ ವಿಧಾನಪರಿಷತ್ ಚುನಾವಣೆಯ ನಾಲ್ಕು ಸ್ಥಾನಗಳಲ್ಲಿ ಬಿಜೆಪಿ ಉತ್ತಮ ಫಲಿತಾಂಶ ಪಡೆದಿದ್ದರೂ, ಈ ಅವಕಾಶವನ್ನು ಮತವಾಗಿ ಪರಿವರ್ತಿಸಲು ಸಂಘಟನೆ, ಸ್ಪಷ್ಟ ನಾಯಕತ್ವ ಮತ್ತು ಒಗ್ಗಟ್ಟು ಅಗತ್ಯವಾಗಿದೆ. ಕೇವಲ ಆರೋಪಗಳನ್ನು ಪುನಃ ಹೇಳುತ್ತಾ ಹೋದರೆ ಜನರ ವಿಶ್ವಾಸ ಗಳಿಸಲು ಸಾಧ್ಯವಿಲ್ಲ. ಬೆಳೆ ನಷ್ಟ, ಪರಿಹಾರ ವಿತರಣೆ, ಬೆಳೆ ವಿಮೆ, ಕುಡಿಯುವ ನೀರು, ಜಾನುವಾರು ಮೇವು ಮತ್ತು ರೈತರ ಸಾಲದ ಹೊರೆಯ ಬಗ್ಗೆ ತಾಲೂಕುವಾರು ದಾಖಲೆಗಳನ್ನು ಸಂಗ್ರಹಿಸಿ, ಸರ್ಕಾರದ ವೈಫಲ್ಯಕ್ಕೆ ಪರ್ಯಾಯ ಪರಿಹಾರವನ್ನು ಮುಂದಿಟ್ಟಾಗ ಮಾತ್ರ ಬಿಜೆಪಿಯ ಹೋರಾಟಕ್ಕೆ ಬಲ ಬರುತ್ತದೆ ಎಂಬ ಮಾತುಗಳು ಕೇಳಿಬರುತ್ತಿದೆ.

■ ವಿಜಯೇಂದ್ರ ಅವರನ್ನು ಬಿಜೆಪಿ ಕೇಂದ್ರ ನಾಯಕತ್ವವು ನವೆಂಬರ್ 10, 2023 ರಂದು ನೇಮಕ ಮಾಡಿತು.

ಮಳೆ ಹಿನ್ನೆಲೆ ಇಂಡಿಯಾ ಕೂಟದ ಅಣಕು ಸಂಸತ್ ಮುಂದೂಡಿಕೆ

ನವದೆಹಲಿ, ಅ. 30: ಎಸ್ಐಆರ್‌ನಲ್ಲಿ ಅಕ್ರಮ ಆರೋಪ ಮತ್ತು ಚುನಾವಣಾ ಆಯೋಗದ ವಿರುದ್ಧದ ಹೋರಾಟದ ಭಾಗವಾಗಿ ಶುಕ್ರವಾರ ಇಂಡಿಯಾ ಕೂಟದ ವಿಪಕ್ಷಗಳು ಅಣಕು ಸಂಸತ್ ಅನ್ನು ಆಯೋಜಿಸಿದ್ದವು. ಆದರೆ ಬೆಳಗ್ಗೆಯಿಂದಲೇ ದೆಹಲಿಯಲ್ಲಿ ಮಳೆ ಹಿನ್ನೆಲೆ ಕಾರ್ಯಕ್ರಮವನ್ನು ಶನಿವಾರಕ್ಕೆ ಮುಂದೂಡಿಕೆ ಮಾಡಲಾಗಿದೆ ಎಂದು ವರದಿಯಾಗಿದೆ.

ದೆಹಲಿಯ ರಾಜಾಜಿ ಮಾರ್ಗದಲ್ಲಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧಿಕೃತ ನಿವಾಸದ ಹುಲ್ಲುಹಾಸಿನಲ್ಲಿ ಮಧ್ಯಾಹ್ನ 3:30ಕ್ಕೆ ಅಣಕು ಸಂಸತ್ ಆಯೋಜಿಸಲಾಗಿತ್ತು. ಸಿಇಸಿ ಜ್ಞಾನೇಶ್ ಕುಮಾರ ಅವರ ಸಾರ್ವಜನಿಕ ಮಹಾಭಿಯೋಗ ನಡೆಸಲು ನಿರ್ಧರಿಸಲಾಗಿತ್ತು. ಆದರೆ ಮಳೆ ಹಿನ್ನೆಲೆ ಕಾರ್ಯಕ್ರಮವನ್ನು ಶನಿವಾರ (ಅ. 31) ಇದೇ ಸಮಯಕ್ಕೆ ನಡೆಯಲಿದೆ.

ಮಾಜಿ ಲೋಕಸಭಾ ಸ್ಪೀಕರ್ ಮೀರಾ ಕುಮಾರ್ ಅವರು ಅಣಕು ಸಂಸತ್‌ನ ಅಧ್ಯಕ್ಷತೆ ವಹಿಸಲಿದ್ದಾರೆ.

ಒಟ್ಟು ಮೂರು ಗಂಟೆಗಳ ಕಾಲ ಅಣಕು ಸಂಸತ್ ನಡೆಯಲಿದೆ. ರಾಜ್ಯಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಖರ್ಗೆ ಅವರು ಕುಮಾರ್ ಅವರನ್ನು ಪದಚ್ಯುತಗೊಳಿಸುವ ಪ್ರಸ್ತಾವವನ್ನು ಮಂಡಿಸಲಿದ್ದಾರೆ. ಇತ್ತ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಮಾರೋಪ ಭಾಷಣ ಮಾಡುವ ನಿರೀಕ್ಷೆಯಿದೆ.

ಗುರುವಾರ ಕುರಿತು ಖರ್ಗೆ ನಿವಾಸದಲ್ಲಿ ಸಭೆ ನಡೆದಿದ್ದು, ಜ್ಞಾನೇಶ್ ಕುಮಾರ್ ಅವರ ಸಾರ್ವಜನಿಕ ದೋಷಾರೋಪಣೆ ಪ್ರಕ್ರಿಯೆ ರೂಪರೇಷೆಗಳನ್ನು ಚರ್ಚಿಸಲಾಗಿದೆ. ಸಭೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ಗಾಂಧಿ ವಾದ್ರಾ, ಜೈರಾಮ್ ರಮೇಶ್ ಮತ್ತು ಕೆ.ಸಿ. ವೇಣುಗೋಪಾಲ್, ಮೀರಾಕುಮಾರ್, ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್, ತೃಣಮೂಲ ಕಾಂಗ್ರೆಸ್ ಸಂಸದ ಡೆರೆಕ್ ಒ'ಬ್ರೇನ್, ಸಮಾಜವಾದಿ ಪಕ್ಷದ ಹರೇಂದ್ರ ಮಲಿಕ್ ಮತ್ತು ಜೆಎಂಎಂನ ಮಹುವಾ ಮಾಜಾ ಇತರರು ಭಾಗವಹಿಸಿದ್ದರು. 21 ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸೇರಿದಂತೆ ಕನಿಷ್ಠ 30 ಭಾಷಣಕಾರರು ಅಣಕು ಸಂಸತ್ನಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಬಿಜೆಡಿಗೆ ಆಹ್ವಾನ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ, ಆದರೆ ಪಕ್ಷವು ಇನ್ನೂ ಭಾಗವಹಿಸುವಿಕೆಯನ್ನು ದೃಢೀಕರಿಸಿಲ್ಲ.

ಐವರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು, ಅ.30: ಕರ್ನಾಟಕ ಸರ್ಕಾರವು ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ ಮಾಡಿದ್ದು, ಐವರು ಐಎಎಸ್ ಅಧಿಕಾರಿಗಳ ವರ್ಗಾವಣೆ ಹಾಗೂ ಹುದ್ದೆ ಬದಲಾವಣೆ ಮಾಡಿ ಆದೇಶ ಹೊರಡಿಸಿದೆ. ಅ.30ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಈ ಕುರಿತು ಅಧಿಕೃತ ಅಧಿಸೂಚನೆ ಪ್ರಕಟಿಸಿದೆ.

1.ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಾಗಿದ್ದ ಸುರಳ್ಕರ್ ವಿಕಾಸ್ ಕಿಶೋರ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ, ಹಿಂದುಳಿದ ವರ್ಗಗಳ ಆಯುಕ್ತರಾಗಿ ನೇಮಕ ಮಾಡಲಾಗಿದೆ.

2. ಕರ್ನಾಟಕ ಗೃಹ ಮಂಡಳಿಯ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿರುವ ಕೆ.ಎ. ದಯಾನಂದ್ ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದೆ. ಈ ಹಿಂದೆ ಅಕ್ಟೋಬರ್ 17ರಂದು ಹೊರಡಿಸಿದ್ದ ಅಧಿಸೂಚನೆಗೆ ಭಾಗಶಃ ತಿದ್ದುಪಡಿ ಮಾಡಿ ಈ ಆದೇಶ ಹೊರಡಿಸಲಾಗಿದೆ.

3. ಹುದ್ದೆ ನಿರೀಕ್ಷೆಯಲ್ಲಿದ್ದ 2013ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ವೆಂಕಟ್‌ರಾಜ್ ಅವರನ್ನು ಪಂಚಾಯತ್ ರಾಜ್ ಇಲಾಖೆಯ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಈ ಮೂಲಕ ಪಾಟೀಲ್ ಯಲಗೌಡ ಶಿವನಗೌಡ ಅವರ ಬಳಿ ಇದ್ದ ಹೆಚ್ಚುವರಿ ಪ್ರಭಾರವನ್ನು ಹಿಂಪಡೆಯಲಾಗಿದೆ.

4. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಿಶೇಷ ಆಯುಕ್ತರಾಗಿದ್ದ ಶಿಲ್ಪಾ ನಾಗ್ ಸಿ.ಟಿ. ಅವರನ್ನು ವರ್ಗಾವಣೆ ಮಾಡಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಕೇಂದ್ರ ಸರ್ಕಾರದ ನಿಯೋಜನೆಗೆ ತೆರಳುತ್ತಿರುವ ಡಾ. ರಾಜೇಂದ್ರ ಕೆ.ವಿ. ಅವರ ಸ್ಥಾನಕ್ಕೆ ಇವರನ್ನು ನೇಮಿಸಲಾಗಿದೆ.

5. ಕಲಬುರಗಿ ನಗರ ಪಾಲಿಕೆ ಆಯುಕ್ತರಾಗಿದ್ದ 2020ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಶಿಂಧೆ ಅವಿನಾಶ್ ಸಂಜೀವನ್ ಅವರನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಉಪ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಇದರ ಜೊತೆಗೆ ಕಲಬುರಗಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ಅವರಿಗೆ ವಹಿಸಲಾಗಿದೆ. ಈ ಹಿಂದೆ ಈ ಜವಾಬ್ದಾರಿ ಹೊಂದಿದ್ದ ರಾಹುಲ್ ಶರಣಪ್ಪ ಸಂಕನೂರು ಅವರಿಂದ ಹೆಚ್ಚುವರಿ ಪ್ರಭಾರವನ್ನು ಹಿಂಪಡೆಯಲಾಗಿದೆ.

ಉತ್ತರ ಪ್ರದೇಶ ಬಿಜೆಪಿ ಕಾರ್ಯಕಾರಿ ಸಮಿತಿಗೆ ಬ್ರಿಜ್ ಭೂಷಣ್ ಆಯ್ಕೆ

ಲಖನೌ, ಅ.30: ಮಹಿಳಾ ಕುಸ್ತಿಪಟುಗಳ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ನ್ಯಾಯಾಲಯದಿಂದ ಖುಲಾಸೆಗೊಂಡ ಕೆಲವೇ ತಿಂಗಳ ಬಳಿಕ, ಬಿಜೆಪಿ ಮಾಜಿ ಸಂಸದ ಹಾಗೂ ಭಾರತೀಯ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಉತ್ತರ ಪ್ರದೇಶ ಬಿಜೆಪಿಯ ರಾಜ್ಯ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಗಿದೆ.

2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ಇಂದು ನಡೆಯಲಿರುವ ಸಭೆಗೂ ಮುನ್ನ, ಅಕ್ಟೋಬರ್ 26ರಂದು ಯುಪಿ ಬಿಜೆಪಿ ಅಧ್ಯಕ್ಷ ಪಂಕಜ್ ಚೌಧರಿ ಅವರು ನೂತನ ರಾಜ್ಯ ಕಾರ್ಯಕಾರಿ ಸಮಿತಿಯನ್ನು ರಚಿಸಿದ್ದಾರೆ. ಲಖನೌದಲ್ಲಿ ನಡೆಯಲಿರುವ ಈ ಸಭೆಯ ಉದ್ಘಾಟನಾ ಅಧಿವೇಶನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಸಮಾರೋಪ ಅಧಿವೇಶನದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾಷಣ ಮಾಡಲಿದ್ದಾರೆ. ಸಭೆಯ ಕಾರ್ಯಸೂಚಿ ನಿರ್ಧರಿಸಲು ಪಕ್ಷದ ಪದಾಧಿಕಾರಿಗಳು ಗುರುವಾರ ಸಭೆ ನಡೆಸಿದ್ದರು. ಬ್ರಿಜ್ ಭೂಷಣ್ ಸೇರಿದಂತೆ ಗೊಂಡಾ ಜಿಲ್ಲೆಯ ಏಳು ಬಿಜೆಪಿ ನಾಯಕರು ಈ ಸಮಿತಿಯಲ್ಲಿದ್ದಾರೆ.

ಅವರು ಆರು ಬಾರಿ ಸಂಸದರಾಗಿದ್ದರೂ ಮತ್ತು ನಾಲ್ಕು ದಶಕಗಳ ಸುದೀರ್ಘ ರಾಜಕೀಯ ಅನುಭವ ಹೊಂದಿದ್ದರೂ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿರುವುದು ಇದೇ ಮೊದಲು ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದ್ದಾರೆ. ಆರು ಬಾರಿ ಸಂಸದರಾಗಿದ್ದರೂ ಈ ಹಿಂದೆ ರಾಷ್ಟ್ರೀಯ ಬಿಜೆಪಿಯಲ್ಲಾಗಲಿ ಅಥವಾ ರಾಜ್ಯ ಘಟಕದಲ್ಲಾಗಲಿ ಅವರಿಗೆ ಯಾವುದೇ ಅಧಿಕೃತ ಹುದ್ದೆ ನೀಡಿರಲಿಲ್ಲ ಎನ್ನಲಾಗಿದೆ.

ಮಹಿಳಾ ಕುಸ್ತಿಪಟುಗಳ ಆರೋಪದಿಂದ ವಿವಾದ ಸೃಷ್ಟಿಯಾದ ಹಿನ್ನೆಲೆಯಲ್ಲಿ 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯು ಬ್ರಿಜ್ ಭೂಷಣ್ ಅವರಿಗೆ ಟಿಕೆಟ್ ನಿರಾಕರಿಸಿತ್ತು. ಬದಲಿಗೆ, ಅವರು ಪ್ರತಿನಿಧಿಸುತ್ತಿದ್ದ ಕೈಸರಗಂಜ್ ಕ್ಷೇತ್ರದಿಂದ ಅವರ ಕಿರಿಯ ಪುತ್ರ ಕರಣ್ ಭೂಷಣ್ ಸಿಂಗ್ ಅವರನ್ನು ಕಣಕ್ಕಿಳಿಸಲಾಗಿತ್ತು. ಚೊಚ್ಚಲ ಚುನಾವಣೆಯಲ್ಲೇ

ಕರಣ್ ಭೂಷಣ್ ಗೆಲುವು ಸಾಧಿಸಿದ್ದರು.

ಆಗಸ್ಟ್ 3ರಂದು ದೆಹಲಿ ವಿಚಾರಣಾ ನ್ಯಾಯಾಲಯವು ಆರು ಮಹಿಳಾ ಕುಸ್ತಿಪಟುಗಳು ಹೂಡಿದ್ದ ಪ್ರಕರಣದಲ್ಲಿ ಬ್ರಿಜ್ ಭೂಷಣ್ ಅವರನ್ನು ಖುಲಾಸೆಗೊಳಿಸಿತ್ತು. ಆದಾಗ್ಯೂ, ಈ ತೀರ್ಪನ್ನು ಪ್ರಶ್ನಿಸಿ ನಾಲ್ವರು ಕುಸ್ತಿಪಟುಗಳು ದೆಹಲಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅಕ್ಟೋಬರ್ 28ರಂದು ನ್ಯಾಯಾಲಯವು ಬ್ರಿಜ್‌ಭೂಷಣ್ ಅವರಿಗೆ ಪ್ರತಿಕ್ರಿಯೆ ಸಲ್ಲಿಸಲು ಒಂದು ವಾರದ ಕಾಲಾವಕಾಶ ನೀಡಿದೆ. ಮುಂದಿನ ವಿಚಾರಣೆಯನ್ನು ನವೆಂಬರ್ 20ಕ್ಕೆ ನಿಗದಿಪಡಿಸಲಾಗಿದೆ. ನ್ಯಾಯಾಲಯದ ಖುಲಾಸೆ ಹಿನ್ನೆಲೆಯಲ್ಲಿ ಬ್ರಿಜ್ ಭೂಷಣ್ ಅವರು ಶಾಸನಬದ್ಧವಾಗಿ ಕಂಟಕಮುಕ್ತರಾಗಿದ್ದು, ಮುಂಬರುವ ದಿನಗಳಲ್ಲಿ ಪಕ್ಷದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ. ಬಿಜೆಪಿ ವಕ್ತಾರ ರಾಕೇಶ್ ತ್ರಿಪಾಠಿ ಮಾತನಾಡಿ, ಬ್ರಿಜ್‌ಭೂಷಣ್ ವಿರುದ್ಧದ ಆರೋಪಗಳು ರಾಜಕೀಯ ಪಿತೂರಿಯಾಗಿದ್ದು, ನ್ಯಾಯಾಲಯ ಅವರನ್ನು ಖುಲಾಸೆಗೊಳಿಸಿದೆ ಎಂದಿದ್ದಾರೆ.

ಯುಪಿ ಬಿಜೆಪಿ ವೆಬ್‌ಸೈಟ್ ಪ್ರಕಾರ, ಈ ಹಿಂದೆ 184 ಸದಸ್ಯರಿದ್ದ ರಾಜ್ಯ ಕಾರ್ಯಕಾರಿಣಿ ಸಮಿತಿಯನ್ನು ಈ ಬಾರಿ 712 ಸದಸ್ಯರಿಗೆ ವಿಸ್ತರಿಸಲಾಗಿದೆ. ಇದರಲ್ಲಿ 134 ವಿಶೇಷ ಆಹ್ವಾನಿತರು ಮತ್ತು 30 ಕಾಯಂ ಆಹ್ವಾನಿತರು ಸೇರಿದ್ದಾರೆ. ವಾರಾಣಸಿ ಕ್ಷೇತ್ರದಿಂದ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಮತ್ತು ಮಾಜಿ ಬಿಜೆಪಿ ಅಧ್ಯಕ್ಷ ಮುರಳಿ ಮನೋಹರ ಜೋಶಿ ಅವರು ಸಮಿತಿಯ ಕಾಯಂ ಆಹ್ವಾನಿತರಾಗಿದ್ದಾರೆ.

ಬ್ರಿಜ್‌ಭೂಷಣ್, ದೇವೀಪಟನ್ ಮಂಡಲಕ್ಕೆ ಸೇರಿದ ಗೊಂಡಾ, ಬಲರಾಮಪುರ, ಕೈಸರಗಂಜ್, ಮತ್ತು ಶ್ರಾವಸ್ತಿ ಭಾಗಗಳಲ್ಲಿ ಭಾರಿ ಜನಪ್ರಿಯತೆ ಹೊಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಉತ್ತರ ಪ್ರದೇಶ ಬಿಜೆಪಿಯಲ್ಲಿ ಠಾಕೂರ್ (ರಜಪೂತ) ಮತ್ತು ಬ್ರಾಹ್ಮಣ ಸಮುದಾಯಗಳ ನಡುವೆ ರಾಜಕೀಯ ಸಮತೋಲನ ಕಾಯ್ದುಕೊಳ್ಳುವುದು ಮುಖ್ಯವಾಗಿದೆ. 2027ರ ವಿಧಾನಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಮುದಾಯದ ಪ್ರಭಾವಿ ನಾಯಕನನ್ನು ತೃಪ್ತಿಪಡಿಸಲು ಬಿಜೆಪಿ ಮುಂದಾಗಿದೆ.

ಭಾರತೀಯ ಕುಸ್ತಿ ಫೆಡರೇಷನ್‌ನ ಆಗಿನ ಅಧ್ಯಕ್ಷರಾಗಿದ್ದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಹಾಗೂ ಕೆಲ ತರಬೇತುದಾರರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ, ಶೋಷಣೆ ಮಾಡಿದ್ದಾರೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸರ್ವಾಧಿಕಾರಿ ಧೋರಣೆ ತಳೆದಿದ್ದಾರೆ ಎಂದು ಆರೋಪಿಸಿ ಭಾರತದ ಪ್ರಮುಖ ಕುಸ್ತಿಪಟುಗಳಾದ ವಿನೇಶ್ ಫೋಗಾಟ್, ಸಾಕ್ಷಿ ಮಲಿಕ್ ಮತ್ತು ಭಜರಂಗ್ ಪುನಿಯಾ ಸೇರಿದಂತೆ ಹಲವು ಕ್ರೀಡಾಪಟುಗಳು ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ಆರಂಭಿಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

ಪಿಎಂ ಕಿಸಾನ್ 24ನೇ ಕಂತು ಬಿಡುಗಡೆ: 9.34 ಕೋಟಿ ರೈತರ ಖಾತೆಗೆ 18,690 ಕೋಟಿ ಜಮೆ



ನವದೆಹಲಿ, ಅ.30: ದೇಶದ ರೈತರಿಗೆ ಕೇಂದ್ರ ಸರ್ಕಾರ ದೀಪಾವಳಿ ಕೊಡುಗೆ ನೀಡಿದ್ದು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 24ನೇ ಕಂತಿನ ಹಣವನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದ್ದಾರೆ. ಗುಜರಾತ್‌ನ ಬನಸ್ಕಾಂತ ಜಿಲ್ಲೆಯ ಭಿಲ್ಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶದ 9.34 ಕೋಟಿಗೂ ಅಧಿಕ ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ಒಟ್ಟು 18,690 ಕೋಟಿಗೂ ಅಧಿಕ ಹಣವನ್ನು ನೇರ ನಗದು ವರ್ಗಾವಣೆ ಮೂಲಕ ಜಮೆ ಮಾಡಲಾಗಿದೆ.

ಯೋಜನೆಯಡಿ ಪ್ರತಿ ಅರ್ಹ ರೈತ ಕುಟುಂಬಕ್ಕೆ 2,000 ರೂಪಾಯಿಗಳಂತೆ ಹಣ ಪಾವತಿಸಲಾಗಿದೆ. ಈ ಯೋಜನೆಯಡಿ ರೈತ ಕುಟುಂಬಗಳಿಗೆ ವಾರ್ಷಿಕ 6,000 ರೂಪಾಯಿ ಆರ್ಥಿಕ ನೆರವು ನೀಡಲಾಗುತ್ತಿದ್ದು, ವರ್ಷಕ್ಕೆ ಮೂರು ಕಂತುಗಳಲ್ಲಿ ತಲಾ 2,000 ರೂಪಾಯಿ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗುತ್ತದೆ.

ಹಿಂದಿನ 23 ಕಂತುಗಳ ಮೂಲಕ ಈಗಾಗಲೇ 4.47 ಲಕ್ಷ ಕೋಟಿಗೂ ಅಧಿಕ ಹಣವನ್ನು ಅರ್ಹ ರೈತರಿಗೆ ವಿತರಿಸಲಾಗಿದೆ. 24ನೇ ಕಂತಿನ ಬಿಡುಗಡೆಯೊಂದಿಗೆ ಈ ಯೋಜನೆಯಡಿ ನೆರವು ಪಡೆದ ರೈತರ ಸಂಖ್ಯೆ ಮತ್ತಷ್ಟು ಹೆಚ್ಚಾಗಿದೆ.

ಈ ಕಾರ್ಯಕ್ರಮದ ಸಂದರ್ಭದಲ್ಲಿ ಕೃಷಿ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೂ ಪ್ರಧಾನಿ ಒತ್ತು ನೀಡಿದ್ದಾರೆ. ಕೃಷಿ ಮೂಲಸೌಕರ್ಯ ನಿಧಿಯಡಿ ಸ್ಥಾಪಿಸಲಾದ 521 ಘಟಕಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದ್ದು, ತೋಟಗಾರಿಕೆ ಬೆಳೆಗಳ ಉತ್ಪಾದನೆ ಮತ್ತು ಆದಾಯ ಹೆಚ್ಚಿಸುವ ಉದ್ದೇಶದಿಂದ 12 ತೋಟಗಾರಿಕೆ ಕ್ಲಸ್ಟರ್‌ಗಳಿಗೆ ಚಾಲನೆ ನೀಡಲಾಗಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ರೈತರು ದೇಶದ ಅನ್ನದಾತರು ಮತ್ತು ರಾಷ್ಟ್ರದ ಬಲಿಷ್ಠ ಆಧಾರಸ್ತಂಭಗಳಾಗಿದ್ದಾರೆ. ರೈತರ ಕಲ್ಯಾಣ ಮತ್ತು ಸಬಲೀಕರಣಕ್ಕೆ ತಮ್ಮ ಸರ್ಕಾರ ಆದ್ಯತೆ ನೀಡುತ್ತಿದೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಮೂಲಕ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಆರ್ಥಿಕ ನೆರವು ವರ್ಗಾವಣೆ ಮಾಡಲಾಗುತ್ತಿದೆ.

ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಯತ್ನ

ಹಿಂದಿನ ಸರ್ಕಾರಗಳು ಕನಿಷ್ಠ ಬೆಂಬಲ ಬೆಲೆ ವಿಚಾರದಲ್ಲಿ ರೈತರನ್ನು ವಂಚಿಸುತ್ತಿದ್ದವು ಎಂದು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ, ತಮ್ಮ ಸರ್ಕಾರ ಕೃಷಿ ಉತ್ಪಾದನೆ, ರೈತರ ಆದಾಯ ಹೆಚ್ಚಳ ಹಾಗೂ ಕೃಷಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುತ್ತಿದೆ ಎಂದು ಹೇಳಿದರು. ಕೃಷಿ ಕ್ಷೇತ್ರದ ಆಧುನೀಕರಣ, ತೋಟಗಾರಿಕೆ ಅಭಿವೃದ್ಧಿ ಮತ್ತು ಹೈನುಗಾರಿಕೆಗೆ ಉತ್ತೇಜನ ನೀಡುವ ಮೂಲಕ ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಬಂಡವಾಳ ಸರಕು ಯೋಜನೆ, ಪಿಎಂ ಇ-ಡ್ರೈವ್‌ನಿಂದ ಆಟೋಮೊಬೈಲ್ ಪೂರಕ ವ್ಯವಸ್ಥೆಗೆ ಆನೆಬಲ: ಎಚ್‌ಡಿಕೆ

ಪುಣೆ, ಅ.30: ರಾಷ್ಟ್ರದ ವಿವಿಧ ಭಾಗಗಳಲ್ಲಿ ಇರುವ ಆಟೋಮೊಬೈಲ್ ಟೆಸ್ಟಿಂಗ್ ಏಜೆನ್ಸಿಗಳನ್ನು ತಾಂತ್ರಿಕವಾಗಿ ಉನ್ನತ ದರ್ಜೆಗೆ ಏರಿಸಲು 780 ಕೋಟಿ ರೂ. ಮೀಸಲಿಡಲಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ ಕೇಂದ್ರಕ್ಕೆ ಸಂಸ್ಥೆಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಿಎಂ ಇ-ಡ್ರೈವ್'ಯೋಜನೆಯಡಿ, ಪರೀಕ್ಷಾ ಸಂಸ್ಥೆಗಳ ಉನ್ನತೀಕರಣಕ್ಕಾಗಿ 780 ಕೋಟಿಗಳನ್ನು ಮೀಸಲಿಡಲಾಗಿದೆ. ಇದರಲ್ಲಿ 79.96 ಕೋಟಿಗಳನ್ನು ಎಆರ್‌ಎಐಗೆ ನೀಡಲಾಗಿದೆ ಎಂದರು.

ವಾಹನ ಸಂಶೋಧನೆ, ಪರೀಕ್ಷೆ ಮತ್ತು ಪ್ರಮಾಣೀಕರಣ ಕ್ಷೇತ್ರದಲ್ಲಿ ದೇಶದ ಅತ್ಯಂತ ಪ್ರಮುಖ ಸಂಸ್ಥೆಗಳಲ್ಲಿ ಒಂದಾದ ಎಆರ್‌ಎಐ ಸಂಸ್ಥೆಗೆ ಭೇಟಿ ನೀಡಿರುವುದು ನನಗೆ ಸಂತೋಷದ ವಿಷಯವಾಗಿದೆ. ಎಆರ್‌ಎಐ 60 ವರ್ಷಗಳ ಸಾರ್ಥಕ ಪಯಣವನ್ನು ಮುಂದುವರಿಸಿದ ನಿಟ್ಟಿನಲ್ಲಿ ವಜ್ರ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ಮೈಲುಗಲ್ಲುಗಳನ್ನು ಸೃಷ್ಟಿಸಲಿದೆ ಎಂದರು.

ಕಳೆದ ಆರು ದಶಕಗಳಲ್ಲಿ ಭಾರತದ ಸಾರಿಗೆ ಪೂರಕ ವ್ಯವಸ್ಥೆಯಲ್ಲಿ ಪರಿವರ್ತನೆಯನ್ನು ಬೆಂಬಲಿಸುವಲ್ಲಿ ಎಆರ್‌ಎಐ ಪ್ರಮುಖ ಪಾತ್ರ ವಹಿಸಿದೆ. ವಾಹನ ಪ್ರಮಾಣೀಕರಣ ಮತ್ತು ಇಂಗಾಲ ಹೊರಸೂಸುವಿಕೆ ತಡೆಯುವ ತಂತ್ರಜ್ಞಾನಗಳಿಂದ ಹಿಡಿದು, ಎಲೆಕ್ಟ್ರಿಕ್ ಮತ್ತು ಸುಸ್ಥಿರ ಸಾರಿಗೆ ಪರಿಹಾರಗಳವರೆಗೆ ಭಾರತದ ತಾಂತ್ರಿಕ ಪ್ರಗತಿಗೆ ಎಆರ್‌ಎಐ ನಿರಂತರವಾಗಿ ಮಹತ್ವದ ಕೊಡುಗೆ ನೀಡುತ್ತಿದೆ. ಹೊಸ ಸೌಲಭ್ಯಗಳ ಉದ್ಘಾಟನೆ ಮತ್ತು ವಿವಿಧ ಉಪಕ್ರಮಗಳ ಪ್ರಾರಂಭವು ಸುರಕ್ಷಿತ, ಸ್ವಚ್ಛ ಮತ್ತು ಪರಿಸರಸ್ನೇಹಿ ಸಾರಿಗೆ ವ್ಯವಸ್ಥೆಯನ್ನು ರೂಪಿಸುವಲ್ಲಿ ಎಆರ್‌ಎಐ ಹೊಂದಿರುವ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ನುಡಿದರು.

ಸಂಶೋಧನೆ, ಅಭಿವೃದ್ಧಿ, ಪರೀಕ್ಷೆ, ಪ್ರಮಾಣೀಕರಣ ಮತ್ತು ನಾವೀನ್ಯತೆಯನ್ನು ಬೆಂಬಲಿಸುವ ಜಾಗತಿಕ ದರ್ಜೆಯ ಮೂಲಸೌಕರ್ಯವನ್ನು ಸೃಷ್ಟಿಸುವ ಮಹತ್ವವನ್ನು ನಾವು ಅರಿತಿದ್ದೇವೆ. ಅದಕ್ಕಾಗಿ ಕೇಂದ್ರವು 'ಕ್ಯಾಪಿಟಲ್ ಗೂಡ್ಸ್ ಸ್ಕೀಮ್' (ಬಂಡವಾಳ ಸರಕು ಯೋಜನೆ) ಮತ್ತು 'ಪಿಎಂ ಇ-ಡ್ರೈವ್' ಯೋಜನೆಯಂತಹ ಉಪಕ್ರಮಗಳನ್ನು ಬೃಹತ್ ಕೈಗಾರಿಕೆ ಸಚಿವಾಲಯವು ಜಾರಿಗೆ ತಂದಿದೆ. ಈ ಯೋಜನೆಗಳು 'ಆತ್ಮನಿರ್ಭರ ಭಾರತ'ದ ಗುರಿಗಳನ್ನು ಸಾಧಿಸಲು ನೇರವಾಗಿ ಕೊಡುಗೆ ನೀಡುತ್ತಿವೆ ಎಂದು ಕುಮಾರಸ್ವಾಮಿ ಹೇಳಿದರು.

ಸ್ವಲ್ಪ ಸಮಯದ ಹಿಂದೆ 'ಕ್ಯಾಪಿಟಲ್ ಗೂಡ್ಸ್ ಸ್ಕೀಮ್'ನ ಎರಡನೇ ಹಂತದ ಅಡಿಯಲ್ಲಿ ಸ್ಥಾಪಿಸಲಾದ 'ಅಡ್ವಾನ್ಸ್ಡ್ ಬ್ಯಾಟರಿ ಲ್ಯಾಬೋರೇಟರಿ' ಉದ್ಘಾಟಿಸಿದ್ದೇನೆ. ಇದೇ ಯೋಜನೆಯ ಅಡಿಯಲ್ಲಿ, 'ಡಿಜಿಟಲ್ ಟ್ವಿನ್ ಸೆಂಟರ್' ಮತ್ತು 'ಇಂಟೆಲಿಜೆಂಟ್ ವೆಹಿಕಲ್ ಟೆಕ್ನಾಲಜಿ'ಗಾಗಿ 'ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪಿಸಲು ನಾವು ಎಆರ್‌ಎಐಗೆ ಬೆಂಬಲ ನೀಡುತ್ತಿದ್ದೇವೆ ಎಂದರು.

ಕೇಂದ್ರದ ಕೃಷಿ ಸಮ್ಮಾನ್ ನಿಧಿಯಿಂದ ರೈತರ ಆತ್ಮಹತ್ಯೆ ಪ್ರಮಾಣ ತಗ್ಗಿದೆ: ಶೋಭಾ ಕರಂದ್ಲಾಜೆ

ಬೆಂಗಳೂರು, ಅ.30: ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರಿ ರೈತರಿಗೆ ವಾರ್ಷಿಕ 6 ಸಾವಿರ ಸಹಾಯಧನ ನೀಡುತ್ತಿರುವ ಕಾರಣ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪಿದೆ ಎಂದು ಕೇಂದ್ರ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಪಿಎಂ ಕಿಸಾನ್ ಉತ್ಸವ ದಿವಸ ಮತ್ತು ಕೃಷಿ ಭೂಮಿ ಉಳಿಸಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಶೋಭಾ ಕರಂದ್ಲಾಜೆ, ಇದರಿಂದ ರೈತರು ಸಾಲದ ಸುಳಿಗೆ ಸಿಲುಕಿಕೊಳ್ಳಲು ಸಹಕಾರಿ ಆಗಿದೆ. ರಾಸಾಯನಿಕಗಳಿಂದ ರೈತರ ಜಮೀನುಗಳ ಮಣ್ಣಿನ ಫಲವತ್ತತೆ ರಕ್ಷಣೆ ಅತ್ಯಗತ್ಯವಾಗಿದೆ. ಆದ್ದರಿಂದ ಮಣ್ಣಿನ ಪರಿಶೀಲನೆ ನಡೆಸಿ ಸೂಕ್ತ ಬೆಳೆಗಳನ್ನು ಬೆಳೆಯಬೇಕು ಹಾಗೂ ರಾಸಾಯನಿಕ ಗೊಬ್ಬರ ಮುಕ್ತಗೊಳಿಸಬೇಕು ಎಂದರು.

ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ನಿರ್ದೇಶಕ ಟಿ.ಕೆ ಬೆಹರಾ, ಪಿಎಂ ಕಿಸಾನ್ ಉತ್ಸವ ದಿವಸ ಆಚರಿಸಿದ್ದೇವೆ. ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಿಸಾನ್ ಸಮ್ಮಾನ್ ಯೋಜನೆಯಡಿ 24ನೇ ಕಂತಿನ 18 ಸಾವಿರ ಕೋಟಿ ರೂಪಾಯಿ ರೈತರ ಖಾತೆಗೆ ಜಮೆ ಮಾಡಿದ್ದಾರೆ. ಇದರಿಂದ 9.4 ಕೋಟಿ ರೈತರಿಗೆ ಸಹಕಾರಿ ಆಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನೈಸರ್ಗಿಕ ಸಂಪನ್ಮೂಲ ವಿಭಾಗದ ಡಾ.ಟಿ.ಆರ್. ರೂಪಾ, ಬೆಳೆ ಸಂರಕ್ಷಣಾ ವಿಭಾಗದ ಡಾ.ಎಂ.ಸಿ ಕೀರ್ತಿ, ಹಣ್ಣಿನ ಬೆಳೆಗಳ ವಿಭಾಗದ ಡಾ. ಬಿ.ಎಲ್ ಮಂಜುನಾಥ್ ಸೇರಿದಂತೆ ವಿವಿಧ ವಿಜ್ಞಾನಿಗಳು ರೈತರ ಜೊತೆ ಸಂವಾದ ನಡೆಸಿದರು. ಫಲ-ಪುಷ್ಪ ಪ್ರದರ್ಶನ ವೀಕ್ಷಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು. ಇದೇ ವೇಳೆ ಪಿಎಂ ಕಿಸಾನ್ ಸಮ್ಮಾನ್ ಯೋಜನೆಯ 24ನೇ ಕಂತನ್ನು ಬಿಡುಗಡೆ ಮಾಡಲಾಯಿತು.

ಕಳೆದ ವರ್ಷ ರಾಜ್ಯಕ್ಕೆ 12,939 ದಶಲಕ್ಷ ಡಾಲರ್ ವಿದೇಶಿ ಬಂಡವಾಳ ಹರಿವು

ಬೆಂಗಳೂರು, ಅ.30: ಕಳೆದ ಹಣಕಾಸು ಸಾಲಿನಲ್ಲಿ ರಾಜ್ಯಕ್ಕೆ 12,939 ದಶಲಕ್ಷ ಡಾಲರ್ ವಿದೇಶಿ ನೇರ ಬಂಡವಾಳ ಬಂದಿದ್ದು, ದೇಶದಲ್ಲಿ ದ್ವಿತೀಯ ಸ್ಥಾನದಲ್ಲಿದ್ದೇವೆ. ಕೇಂದ್ರ ಸರಕಾರವು 38 ರಾಷ್ಟ್ರಗಳ ಜತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ. ಇದರಿಂದ ಹಲವು ವಲಯಗಳಲ್ಲಿ ರಫ್ತಿಗೆ ಯಥೇಚ್ಛ ಅವಕಾಶಗಳು ಸೃಷ್ಟಿಯಾಗುತ್ತಿವೆ. ಇದನ್ನು ಪರಿಣಾಮಕಾರಿ ಬಳಸಿಕೊಳ್ಳುವ ಮೂಲಕ ನಾವು ಒಂದು ಟ್ರಿಲಿಯನ್ ಡಾಲರ್ ಮೌಲ್ಯದ ಆರ್ಥಿಕತೆಯನ್ನು ಸೃಷ್ಟಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ಇಲ್ಲಿನ ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯ ಹಾಗೂ ರಾಜ್ಯದ ವಿಶ್ವೇಶ್ವರಯ್ಯ ರಫ್ತು ಉತ್ತೇಜನ ಸಂಸ್ಥೆ ಮತ್ತು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟಗಳ ಸಹಯೋಗದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳ ಪ್ರಯೋಜನ ಕುರಿತು ಶುಕ್ರವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೇಂದ್ರ ಸರಕಾರವು ಇತ್ತೀಚಿಗೆ ಸಂಯುಕ್ತ ಅರಬ್ ಸಂಸ್ಥಾನ, ಆಸ್ಟ್ರೇಲಿಯಾ, ಯುನೈಟೆಡ್ ಕಿಂಗ್ಡಮ್, ಓಮಾನ್, ಯೂರೋಪಿಯನ್ ಒಕ್ಕೂಟ, ನ್ಯೂಜಿಲೆಂಡ್ ಸೇರಿದಂತೆ 38 ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ. ಸದ್ಯದಲ್ಲೇ ಅಮೆರಿಕದ ಜತೆಯೂ ಇಂತಹ ಒಪ್ಪಂದ ಅಂತಿಮರೂಪ ಪಡೆಯುವ ನಿರೀಕ್ಷೆ ಇದೆ. ಇದರಿಂದ ಸಹಜವಾಗಿಯೇ ನಮ್ಮ ಜಿಡಿಪಿ ವ್ಯಾಪ್ತಿ ಹಿಗ್ಗಲಿದ್ದು, ರಾಜ್ಯದ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕ್ ಉತ್ಪನ್ನಗಳು, ಕೃಷಿ ಮತ್ತು ಆಹಾರೋತ್ಪನ್ನಗಳು, ಜವಳಿ ಮತ್ತು ಸಿದ್ಧ ಉಡುಪು, ಸಾಗರೋತ್ಪನ್ನಗಳು, ಎಂಜಿನಿಯರಿಂಗ್ ಸಾಧನಗಳು ಮತ್ತು ಔಷಧ ಹಾಗೂ ಸಸ್ಯಾಧಾರಿತ ಉತ್ಪನ್ನಗಳ ರಫ್ತಿಗೆ ಒಳ್ಳೆಯ ಅವಕಾಶಗಳು ಸೃಷ್ಟಿಯಾಗಿವೆ ಎಂದು ಅವರು ವಿವರಿಸಿದ್ದಾರೆ.

ರಾಜ್ಯವು ಐಟಿ, ಬಿಟಿ, ಸ್ಟಾರ್ಟಪ್, ಏರೋಸ್ಪೇಸ್, ಇವಿ, ಜವಳಿ, ಪರಿಸರ ಸ್ನೇಹಿ ಇಂಧನ, ಸೆಮಿಕಂಡಕ್ಟರ್ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಮರ್ಥ ನೀತಿಗಳನ್ನು ರೂಪಿಸಿದೆ. ಮರ್ಕಂಡೈಸ್ ರಫ್ತಿನಲ್ಲಿ ಕರ್ನಾಟಕವು 4ನೇ ಸ್ಥಾನದಲ್ಲಿದೆ. ಹೂಡಿಕೆ ಒಡಂಬಡಿಕೆಗಳಲ್ಲಿ ಹೆಚ್ಚಿನವನ್ನು ನೈಜ ಅರ್ಥದಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಅವರು ನುಡಿದಿದ್ದಾರೆ.

200ಕ್ಕೂ ಹೆಚ್ಚು ಉದ್ಯಮಿಗಳು, ರಫ್ತುದಾರರು ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ರಾಜ್ಯ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ , ಭಾರತ ವ್ಯಾಪಾರ ಉತ್ತೇಜನಾ ಸಂಘದ ಸಲಹೆಗಾರ್ತಿ ಡಾ.ತಮನ್ನಾ ಚತುರ್ವೇದಿ, ಜಂಟಿ ನಿರ್ದೇಶಕಿ ಸೋಮಾ ಚೌಧರಿ ಉಪ ಮಹಾನಿರ್ದೇಶಕ ಅರ್ಜುನ್ ಉಪಾಧ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಾಫ್ಟ್‌ವೇರ್ ರಫ್ತಿನಲ್ಲಿ ಕರ್ನಾಟಕ ಪಾಲು ಶೇ.40

ದೇಶದ ಒಟ್ಟು ಸಾಫ್ಟ್ವೇರ್ ಸಂಬಂಧಿತ ಸೇವೆಗಳ ರಫ್ತಿನ ಪಾಲಿನಲ್ಲಿ ರಾಜ್ಯವು ಶೇ.40ರಷ್ಟು ಪಾಲು ಹೊಂದಿದೆ. ಜಾಗತಿಕ ಮಟ್ಟದ ಕಂಪನಿಗಳಾದ ಫಾಕ್ಸ್‌ಕಾನ್, ಲ್ಯಾಮ್ ರೀಸರ್ಚ್, ಅಪ್ಲೈಡ್ ಮೆಟೀರಿಯಲ್ಸ್, ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಮುಂತಾದವು ನಮ್ಮಲ್ಲಿ ಹೂಡಿಕೆ ಮಾಡಿವೆ., ಇದರಿಂದಾಗಿ ಸ್ಥಳೀಯ ಪೂರೈಕೆದಾರರಿಗೂ ಸದವಕಾಶಗಳು ಸೃಷ್ಟಿಯಾಗುತ್ತಿವೆ. ಈಗ ಮುಕ್ತ ವ್ಯಾಪಾರ ಒಪ್ಪಂದಗಳ ಮೂಲಕ ನಾವು ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ತಲುಪಬೇಕಾಗಿದೆ ಎಂದು ಎಂ.ಬಿ. ಪಾಟೀಲ್ ಪ್ರತಿಪಾದಿಸಿದ್ದಾರೆ.

ಪಕ್ಷಿ ಪ್ರಭೇದ ಗುರುತಿಸಲು ನ.2ರವರೆಗೆ ಪಕ್ಷಿಗಣತಿ ಸಮಗ್ರ ಮಾಹಿತಿ: ಸಚಿವ ರಾಮಲಿಂಗಾರೆಡ್ಡಿ ಸೂಚನೆ

ಬೆಂಗಳೂರು, ಅ.30: ದೇಶಾದ್ಯಂತ ನವೆಂಬರ್ 2ರಿಂದ ಪಕ್ಷಿಗಳ ಗಣತಿಕಾರ್ಯ ನಡೆಯಲಿದೆ. ಬರ್ಡ್ ಕೌಂಟ್ ಇಂಡಿಯಾ (ಬಿಸಿಐ) ಹಾಗೂ ಕೆಬಿಎಂಎನ್ (ಕೆಬಿಎಂಎನ್) ಸಹಭಾಗಿತ್ವದಲ್ಲಿ ಈ ಗಣತಿ ಕಾರ್ಯ ನಡೆಯಲಿದೆ. ಪಕ್ಷಿ ವೀಕ್ಷಕರ ಗುಂಪುಗಳು, ಸಂಶೋಧಕರು ಹಾಗೂ ಸಂರಕ್ಷಣಾ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪರಿಸರ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ರಾಜ್ಯದಲ್ಲಿ ಎಷ್ಟು ಪಕ್ಷಿಗಳಿವೆ ಹಾಗೂ ಯಾವೆಲ್ಲ ಪ್ರಭೇದದ ಪಕ್ಷಿಗಳು ಕಂಡುಬರುತ್ತವೆ ಎಂಬುದನ್ನು ಗುರುತಿಸುವುದು ಈ ಗಣತಿಯ ಪ್ರಮುಖ ಉದ್ದೇಶವಾಗಿದೆ. ಗಣತಿ ಪೂರ್ಣಗೊಳ್ಳುವ ಮುನ್ನ ರಾಜ್ಯದಲ್ಲಿರುವ ಪಕ್ಷಿಗಳ ನಿಖರ ಸಂಖ್ಯೆಯನ್ನು ಹೇಳಲು ಸಾಧ್ಯವಿಲ್ಲ. ಸದ್ಯಕ್ಕೆ ಅಂದಾಜಿನ ಆಧಾರದ ಮೇಲೆ ಮಾತ್ರ ಮಾಹಿತಿ ನೀಡಬಹುದು ಎಂದು ಸ್ಪಷ್ಟಪಡಿಸಿದರು. ಇಂದಿನಿಂದ ಆರಂಭವಾಗಿರುವ ಗಣತಿ ಕಾರ್ಯ ನವೆಂಬರ್ 2ರವರೆಗೆ ಮುಂದುವರಿಯಲಿದೆ. ಈ ಅವಧಿಯಲ್ಲಿ ಪಕ್ಷಿಗಳ ಸಂಖ್ಯೆ, ಅವುಗಳ ಪ್ರಭೇದಗಳು ಸೇರಿದಂತೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ಗಣತಿ ಪೂರ್ಣಗೊಂಡ ಬಳಿಕ ಸಂಗ್ರಹಿಸಿದ ಮಾಹಿತಿಯನ್ನು ಅಧಿಕೃತವಾಗಿ ಹಂಚಿಕೊಳ್ಳಲಾಗುವುದು ಎಂದು ತಿಳಿಸಿದರು.

ರಾಜ್ಯದ ಪರಿಸರ ವ್ಯವಸ್ಥೆಯಲ್ಲಿ ಪಕ್ಷಿಗಳು ಮಹತ್ವದ ಪಾತ್ರ ವಹಿಸುತ್ತವೆ. ಪಕ್ಷಿಗಳ ಪ್ರಭೇದ ಹಾಗೂ ಅವುಗಳ ಅಸ್ತಿತ್ವದ ಕುರಿತು ಮಾಹಿತಿ ಸಂಗ್ರಹಿಸುವುದರಿಂದ ಜೀವವೈವಿಧ್ಯದ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಮತ್ತು ಪಕ್ಷಿಗಳ ಸಂರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನೆರವಾಗಲಿದೆ.ರಾಜ್ಯೋತ್ಸವದ ಸಂದರ್ಭದಲ್ಲಿ ನಾಡಿನ ನೈಸರ್ಗಿಕ ಸಂಪತ್ತು ಹಾಗೂ ಪರಿಸರದ ಮಹತ್ವವನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ಈ ಪಕ್ಷಿ ಗಣತಿ ಕಾರ್ಯಕ್ರಮ ಮಹತ್ವ ಪಡೆದಿದೆ.

ಪರಿಸರಸ್ನೇಹಿ ಪಟಾಕಿ ಬಳಸಲು ಸೂಚನೆ

ದೀಪಾವಳಿಯ ಸಂದರ್ಭದಲ್ಲಿ ಪರಿಸರಸ್ನೇಹಿ ಪಟಾಕಿಗಳನ್ನು ಬಳಸಬೇಕು ಮತ್ತು ಸುಪ್ರೀಂಕೋರ್ಟ್‌ನ ನಿರ್ದೇಶಗಳನ್ನು ಪಾಲಿಸಬೇಕೆಂದು ಪರಿಸರ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಸೂಚಿಸಿದ್ದಾರೆ. ಸುಪ್ರೀಂಕೋರ್ಟ್‌ನ ನಿರ್ದೇಶನದ ಪ್ರಕಾರ ರಾತ್ರಿ 8ರಿಂದ 10ಗಂಟೆ ನಡುವೆ ಮಾತ್ರ ಪಟಾಕಿ ಸಿಡಿಸಬೇಕು. ಹಸಿರು ಪಟಾಕಿಗಳನ್ನೇ ತಯಾರಿಸಬೇಕು, ಮಾರಾಟ ಮಾಡಬೇಕು ಮತ್ತು ಬಳಸಬೇಕು ಎಂದು ಸೂಚಿಸಿದರು. ಈ ಬಗ್ಗೆ ಮುಂಜಾಗ್ರತೆ ವಹಿಸುವಂತೆ ಅಪಾರ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದು ಅವರು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪೊಲೀಸರಿಗೆ ನಿರ್ದೇಶಗಳನ್ನು ನೀಡಲಿದ್ದಾರೆ. ಪರಿಸರ ರಕ್ಷಣೆ, ಪ್ರಾಣಿ ಪಕ್ಷಿಗಳಿಗೆ ಹಾನಿಯಾಗುವುದು, ತಡೆಯುವುದು ಸೇರಿ ಸುಮಾರು 10 ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿರುವುದಾಗಿ ಹೇಳಿದರು.

ಕುಡಿಯುವ ನೀರಿನ ಘಟಕಗಳಲ್ಲಿ ಲೋಪ: 2 ಬಂದ್ 20ಕ್ಕೂ ಹೆಚ್ಚು ಘಟಕಗಳಿಗೆ ನೋಟಿಸ್- ಸಚಿವ ಖಾದರ್

ಬೆಂಗಳೂರು, ಅ.30: ಕುಡಿಯುವ ನೀರಿನ ಘಟಕಗಳಲ್ಲಿ ಗುಣಮಟ್ಟದ ಲೋಪ ಕಂಡುಬಂದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಪರಿಶೀಲನೆ ನಡೆಸಿದ್ದು, 20ಕ್ಕೂ ಹೆಚ್ಚು ಘಟಕಗಳಿಗೆ ನೋಟಿಸ್ ನೀಡಲಾಗಿದೆ. ಗುಣಮಟ್ಟದ ನಿಯಮಗಳನ್ನು ಉಲ್ಲಂಘಿಸಿದ ಎರಡು ಘಟಕಗಳನ್ನು ಬಂದ್ ಮಾಡಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರಿನ ಘಟಕಗಳ ಮೇಲೆ ಇತ್ತೀಚೆಗೆ ಪರಿಶೀಲನೆ ನಡೆಸಲಾಗಿದೆ. ಕೆಲವು ಘಟಕಗಳಲ್ಲಿ ಗುಣಮಟ್ಟದ ಲೋಪಗಳು ಕಂಡುಬಂದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವುದು ಘಟಕಗಳ ಜವಾಬ್ದಾರಿ. ಕೇವಲ ನೀರು ಪೂರೈಸಿ ಹಣ ಸಂಪಾದಿಸುವುದಷ್ಟೇ ಉದ್ದೇಶವಾಗಬಾರದು. ಈ ಕ್ರಮ ಇತರ ಘಟಕಗಳಿಗೂ ಎಚ್ಚರಿಕೆಯ ಗಂಟೆಯಾಗಬೇಕು ಎಂದರು.

ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಸಿಹಿ ತಯಾರಿಕಾ ಘಟಕಗಳ ಮೇಲೂ ಆರೋಗ್ಯ ಇಲಾಖೆ ನಿಗಾ ಇರಿಸಿದೆ. ಹಬ್ಬದ ಸಂದರ್ಭದಲ್ಲಿ ದೊಡ್ಡ ಕಂಪನಿಗಳು ಹೆಚ್ಚಿನ ಪ್ರಮಾಣದಲ್ಲಿ ಸಿಹಿ ತಯಾರಿಸುತ್ತವೆ. ಈ ವೇಳೆ ಅವಧಿ ಮೀರಿದ ಆಹಾರ ಪದಾರ್ಥಗಳನ್ನು ಬಳಸುವ ಸಾಧ್ಯತೆಗಳಿದ್ದು, ಇತ್ತೀಚೆಗೆ ದಾಳಿ ನಡೆಸಿ ಪರಿಶೀಲನೆ ಮಾಡಲಾಗಿದೆ. ಇದೀಗ ದೀಪಾವಳಿ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

ಸಿಹಿ ತಯಾರಕರು ಜನರ ಆರೋಗ್ಯದ ಹಿತದೃಷ್ಟಿಯಿಂದ ಗುಣಮಟ್ಟದ ಸಿಹಿ ಪದಾರ್ಥಗಳನ್ನು ತಯಾರಿಸಬೇಕು. ಸಿಹಿ ಪದಾರ್ಥಗಳ ಮೇಲೆ ಬಳಸುವ ಸಿಲ್ವರ್ ಪೇಪರ್ ಸೇರಿದಂತೆ ಪ್ರತಿಯೊಂದು ಪದಾರ್ಥದ ಗುಣಮಟ್ಟದ ಬಗ್ಗೆಯೂ ಜಾಗ್ರತೆ ವಹಿಸಬೇಕು. ಆರೋಗ್ಯಕ್ಕೆ ಹಾನಿಕಾರಕವಾದ ವಸ್ತುಗಳನ್ನು ಬಳಸಬಾರದು ಎಂದು ಖಾದರ್ ಎಚ್ಚರಿಕೆ ನೀಡಿದರು.

ಸಿಎಂ-ಮಾಜಿ ಸಿಎಂ ಒಟ್ಟಾಗಿದ್ದಾರೆ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿತಾದ ಸ್ಟಿಂಗ್ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಖಾದರ್, ಸಿದ್ದರಾಮಯ್ಯ ಹೆಸರಿಗೆ ಕಳಂಕ ತರುವ ಅಥವಾ ಕಪ್ಪುಚುಕ್ಕೆ ಮೂಡಿಸುವ ಪ್ರಯತ್ನ ಯಶಸ್ವಿಯಾಗುವುದಿಲ್ಲ.ಜನರಲ್ಲಿ ಸಿದ್ದರಾಮಯ್ಯ ಬಗ್ಗೆ ಗೌರವವಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಡುವೆ ವೈಮನಸ್ಸು ಮೂಡಿಸಲು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಒಟ್ಟಾಗಿದ್ದಾರೆ ಎಂದರು.

ವೀರಶೈವ-ಲಿಂಗಾಯತ ಮಹಾಸಭಾದ ಅಧಿಕೃತ ವೆಬ್‌ಸೈಟ್‌ಗೆ ಚಾಲನೆ

ಮಹಾಸಭಾಗೆ 10 ಲಕ್ಷ ಸದಸ್ಯತ್ವದ ಗುರಿ: ಸಚಿವ ಖಂಡ್ರೆ



ಬೆಂಗಳೂರು, ಅ.30: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಸದಸ್ಯರ ಸಂಖ್ಯೆಯನ್ನು 10 ಲಕ್ಷಕ್ಕೆ ಹೆಚ್ಚಿಸುವ ಸಂಕಲ್ಪ ಮಾಡಲಾಗಿದೆ ಎಂದು ಸಭಾದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಮಹಾಸಭಾದ ಅಧಿಕೃತ ಅಂತರ್ಜಾಲ ತಾಣ www.aivlm.orgಗೆ ಚಾಲನೆ ನೀಡಿ ಮಾತನಾಡಿದ ಅವರು, 1904ರಲ್ಲಿ ಶ್ರೀ ಹಾನಗಲ್ ಕುಮಾರಸ್ವಾಮಿಗಳು ಸ್ಥಾಪಿಸಿದ ಮಹಾಸಭಾದಲ್ಲಿ ಕೇವಲ ಸಾವಿರದ ಸಂಖ್ಯೆಯಲ್ಲಿ ಸದಸ್ಯರಿದ್ದರು, ತಮ್ಮ ಪೂಜ್ಯ ತಂದೆ ಲಿಂಗೈಕ್ಯ ಡಾ. ಭೀಮಣ್ಣ ಖಂಡ್ರೆ ಅವರು ಸದಸ್ಯರ ಸಂಖ್ಯೆಯನ್ನು ಲಕ್ಷ ದಾಟಿಸಿದರು ಎಂದರು.

ಈಗ ಸದಸ್ಯತ್ವವನ್ನು 10 ಲಕ್ಷ ಮಾಡಲು ನಿರ್ಣಯಿಸಲಾಗಿದ್ದು, ಇಂದಿನ ಯುಗಮಾನದ ಅಗತ್ಯಕ್ಕೆ ಅನುಗುಣವಾಗಿ ಅಂತರ್ಜಾಲ ತಾಣ ಅಭಿವೃದ್ಧಿ ಪಡಿಸಲಾಗಿದೆ. ಸಮುದಾಯದ ಯುವಜನರು ಹೆಚ್ಚು ಹೆಚ್ಚಾಗಿ ಸದಸ್ಯರಾಗುವಂತೆ ಪ್ರೋತ್ಸಾಹಿಸಲು, ಆನ್‌ಲೈನ್ ಮೂಲಕವೂ ಸದಸ್ಯತ್ವ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ವಚನಗಳ ಸಂಗ್ರಹವನ್ನು ಯಜ್ಞದಂತೆ ಮಾಡಿದ ಫ.ಗು. ಹಳಕಟ್ಟಿಯವರು, ನಡೆದಾಡುವ ದೇವರು ಸಿದ್ಧಗಂಗಾಮಠದ ಡಾ. ಶಿವಕುಮಾರ ಸ್ವಾಮೀಜಿ ಅವರಂತಹ ಮಹಾಮಹಿಮರು ಅಧ್ಯಕ್ಷರಾಗಿ ಮುನ್ನಡೆಸಿದ ಮಹಾಸಭಾದ ಸದಸ್ಯತ್ವ ಸಂಖ್ಯೆಯನ್ನು 10 ಲಕ್ಷ ಮಾಡಲು ಮಹಾಸಭಾದ ಪ್ರತಿಯೊಬ್ಬ ಸದಸ್ಯರೂ, ಸಮಾಜದ ಮುಖಂಡರು ಸಂಕಲ್ಪ ಮಾಡಬೇಕು ಎಂದು ಈಶ್ವರ ಖಂಡ್ರೆ ಕರೆ ನೀಡಿದರು.

ಸಂಘಟನೆಯಲ್ಲಿ ಬಲವಿದೆ. ವಿಘಟನೆಯಲ್ಲಿ ದೌರ್ಬಲ್ಯವಿದೆ ಎಂದ ಅವರು, ವೀರಶೈವ ಲಿಂಗಾಯತರನ್ನು ಬೇರೆ ಮಾಡಲು ಹಲವು ಶಕ್ತಿಗಳು ಪ್ರಯತ್ನಿಸುತ್ತಿದ್ದು, ನಾವು ಎಚ್ಚರದಿಂದ ಇರಬೇಕು. ವೀರಶೈವ ಲಿಂಗಾಯತರು ಎಂದೆಂದೂ ಒಂದೇ ಎಂದು ಸಾರಬೇಕು. ವಿಭಜಿಸುವ ಶಕ್ತಿಗಳನ್ನು ಮಣಿಸಬೇಕು ಎಂದರು.

ಶಿವಾನಂದ ಕೌಜಲಗಿ ಅವರಿಗೆ ಶ್ರದ್ಧಾಂಜಲಿ: ಇದೇ ಸಂದರ್ಭದಲ್ಲಿ ಲಿಂಗೈಕ್ಯರಾದ ಮಾಜಿ ಸಚಿವ, ಮಾಜಿ ಸಂಸದ ಶಿವಾನಂದ ಕೌಜಲಗಿ ಅವರಿಗೆ ಮಹಾಸಭಾ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈಶ್ವರ ಖಂಡ್ರೆ ಮಾತನಾಡಿ, ಶಾಸಕರಾಗಿ, ಸಂಸದರಾಗಿ, ಲೋಕೋಪಯೋಗಿ ಇಲಾಖೆಯ ಸಚಿವರಾಗಿ, ಕೆ.ಎಲ್.ಇ. ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಕೌಜಲಗಿ ಅವರು ನೀಡಿರುವ ಕೊಡುಗೆ ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಗಣೇಶ್ ಹುಕ್ಕೇರಿ, ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ, ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಪಾಟೀಲ್ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು.

ಭಾರತೀಯ ನೌಕಾಪಡೆಗೆ 8 ಅತ್ಯಾಧುನಿಕ ಯುದ್ಧನೌಕೆಗಳ ಸೇರ್ಪಡೆಗೆ ಅನುಮೋದನೆ

40 ಸಾವಿರ ಕೋಟಿ ರೂ. ವೆಚ್ಚದ ಯೋಜನೆಗೆ ಭದ್ರತಾ ಸಂಪುಟ ಸಮಿತಿ ಒಪ್ಪಿಗೆ | 2030ರ ವೇಳೆಗೆ ಮೊದಲ ಯುದ್ಧನೌಕೆ ಹಸ್ತಾಂತರ ಗುರಿ

ನವದೆಹಲಿ, ಅ.30: ಭಾರತೀಯ ನೌಕಾಪಡೆಯ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಭಾರತೀಯ ನೌಕಾಪಡೆಗಾಗಿ 8 ಅತ್ಯಾಧುನಿಕ ಮುಂದಿನ ತಲೆಮಾರಿನ ಯುದ್ಧನೌಕೆಗಳನ್ನು (ನೆಕ್ಸ್ಟ್ ಜನರೇಷನ್ ಕಾರ್ವೆಟ್‌ಗಳು) ನಿರ್ಮಿಸುವ 40 ಸಾವಿರ ಕೋಟಿಗೂ ಅಧಿಕ ಮೊತ್ತದ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಭದ್ರತಾ ಸಂಪುಟ ಸಮಿತಿ ಅನುಮೋದನೆ ನೀಡಿದೆ.

ಅ.28ರಂದು ನಡೆದ ಸಮಿತಿ ಸಭೆಯಲ್ಲಿ ಈ ಮಹತ್ವದ ಯೋಜನೆಗೆ ಒಪ್ಪಿಗೆ ನೀಡಲಾಗಿದೆ. ಯುದ್ಧನೌಕೆಗಳ ನಿರ್ಮಾಣದ ಗುತ್ತಿಗೆಯನ್ನು ಕೋಲ್ಕತ್ತಾದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆಂಡ್ ಎಂಜಿನಿಯರ್ಸ್ (ಜಿಆರ್‌ಎಸ್‌ಇ) ಹಾಗೂ ಗೋವಾ ಶಿಪ್‌ಯಾರ್ಡ್ (ಜಿಎಸ್‌ಎಲ್) ಸಂಸ್ಥೆಗಳಿಗೆ ನೀಡಲಾಗುತ್ತದೆ. ಮುಂದಿನ ಕೆಲವು ದಿನಗಳಲ್ಲಿ ಎರಡೂ ಸಂಸ್ಥೆಗಳೊಂದಿಗೆ ಅಧಿಕೃತ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ.

ಸುಧಾರಿತ ತಂತ್ರಜ್ಞಾನ, ಸ್ಟೆಲ್ತ್ ವಿನ್ಯಾಸ

ಹೊಸದಾಗಿ ನಿರ್ಮಾಣವಾಗಲಿರುವ 8 ಯುದ್ಧನೌಕೆಗಳು ತಲಾ ಸುಮಾರು 2,000 ಟನ್ ತೂಕ ಹೊಂದಿರಲಿವೆ.

ಗಂಟೆಗೆ ಸುಮಾರು 56 ಕಿಲೋಮೀಟರ್ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿರುವ ಈ ನೌಕೆಗಳನ್ನು ಭಾರತೀಯ ನೌಕಾಪಡೆಯೇ ರೂಪಿಸಿರುವ ನೂತನ ವಿನ್ಯಾಸದ ಆಧಾರದಲ್ಲಿ ನಿರ್ಮಿಸಲಾಗುತ್ತದೆ. ಶತ್ರುಗಳ ರೇಡಾರ್ ಕಣ್ಣಿಗೆ ಸುಲಭವಾಗಿ ಸಿಗದಂತೆ ಸ್ಟೆಲ್ತ್ ತಂತ್ರಜ್ಞಾನವನ್ನು ಅಳವಡಿಸಲಾಗುತ್ತದೆ.

ಈ ಯುದ್ಧನೌಕೆಗಳು ಬಹುಮುಖ ಕಾರ್ಯಾಚರಣೆಗಳಿಗೆ ಬಳಕೆಯಾಗಲಿದ್ದು, ಶತ್ರುಗಳ ಯುದ್ಧನೌಕೆಗಳ ವಿರುದ್ಧ ದಾಳಿ, ಜಲಾಂತರ್ಗಾಮಿ ನೌಕೆಗಳನ್ನು ಪತ್ತೆಹಚ್ಚಿ ನಾಶಪಡಿಸುವುದು ಹಾಗೂ ವೈಮಾನಿಕ ದಾಳಿಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿರಲಿವೆ. ಕರಾವಳಿ ಭದ್ರತೆ, ಸಮುದ್ರ ಗಸ್ತು, ಕಣ್ಗಾವಲು, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿಯೂ ಇವು ಪ್ರಮುಖ ಪಾತ್ರ ವಹಿಸಲಿವೆ.

70%ಕ್ಕೂ ಅಧಿಕ ಸ್ವದೇಶಿ ಉತ್ಪನ್ನಗಳ ಬಳಕೆ

ಈ ಯೋಜನೆಯಲ್ಲಿ ಶೇ.70ಕ್ಕೂ ಅಧಿಕ ಸ್ವದೇಶಿ ಬಿಡಿಭಾಗಗಳು ಮತ್ತು ತಂತ್ರಜ್ಞಾನವನ್ನು ಬಳಸಲು ಉದ್ದೇಶಿಸಲಾಗಿದೆ. ಇದರಿಂದ ದೇಶೀಯ ರಕ್ಷಣಾ ತಯಾರಿಕೆ ವಲಯಕ್ಕೆ ಉತ್ತೇಜನ ದೊರೆಯುವುದರ ಜತೆಗೆ ಆತ್ಮನಿರ್ಭರ ಭಾರತ ಅಭಿಯಾನಕ್ಕೂ ಬಲ ಸಿಗಲಿದೆ. ಜಿಆರ್‌ಎಸ್‌ಇ ಮತ್ತು ಗೋವಾ ಶಿಪ್‌ಯಾರ್ಡ್ ಸಂಸ್ಥೆಗಳಿಗೆ ದೀರ್ಘಾವಧಿಯ ಉದ್ಯೋಗಾವಕಾಶ ಹಾಗೂ ಸಾವಿರಾರು ನೇರ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ.

ಯೋಜನೆಯಡಿ ಮೊದಲ ಯುದ್ಧನೌಕೆಯ ನಿರ್ಮಾಣ ಕಾರ್ಯ ಮುಂದಿನ ಒಂದು ವರ್ಷದೊಳಗೆ ಆರಂಭವಾಗುವ ಸಾಧ್ಯತೆಯಿದೆ. 2030ರ ವೇಳೆಗೆ ಮೊದಲ ಯುದ್ಧನೌಕೆಯನ್ನು ನೌಕಾಪಡೆಗೆ ಹಸ್ತಾಂತರಿಸುವ ಗುರಿ ಹೊಂದಲಾಗಿದೆ. ಮುಂದಿನ ನಾಲ್ಕರಿಂದ ಐದು ವರ್ಷಗಳಲ್ಲಿ ಉಳಿದ ಯುದ್ಧನೌಕೆಗಳ ಹಸ್ತಾಂತರ ಪ್ರಕ್ರಿಯೆ ಆರಂಭವಾಗುವ ನಿರೀಕ್ಷೆಯಿದೆ.

ಚೀನಾ ಸೈನಿಕರು ಭಾರತದ ಗಡಿ ದಾಟಿದ್ದು ಅತಿಕ್ರಮಣವಲ್ಲ: ಬಿಜೆಪಿ ಸಿಎಂ

ತವಾಂಗ್, ಅ.30: ಅರುಣಾಚಲ ಪ್ರದೇಶದ ಭಾರತದ ಗಡಿಯಲ್ಲಿ ಚೀನಾ ಸೈನಿಕರು ಒಳನುಗ್ಗಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಸಿಎಂ ಪೇಮಾ ಖಂಡು, ಇಂತಹ ಘಟನೆಗಳನ್ನು ಒಳನುಸುಳುವಿಕೆ ಎಂದು ಕರೆಯಲಾಗದು, ಬದಲಾಗಿ ಇದೊಂದು ಗಡಿ ಉಲ್ಲಂಘನೆ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿರುವ ಪೇಮಾ ಖಂಡು ಅವರು, ಚೀನಾ ಮೆಕ್ಮಹಾನ್ ರೇಖೆಯನ್ನು ಪರಿಗಣಿಸುವುದಿಲ್ಲ. ಅರುಣಾಚಲ ಪ್ರದೇಶವು ಟಿಬೆಟ್ ಮತ್ತು ಚೀನಾದೊಂದಿಗೆ 1,200 ಕಿ.ಮೀ ಉದ್ದದ ಸುದೀರ್ಘ ಗಡಿಯನ್ನು ಹಂಚಿಕೊಂಡಿದೆ. ನಮ್ಮ ಸೈನಿಕರು ಆ ಕಡೆಗೆ ಹೋಗುತ್ತಾರೆ, ಅವರ ಗಸ್ತು ತಂಡಗಳು ಕೆಲವೊಮ್ಮೆ ನಮ್ಮ ಕಡೆಗೆ ಬರುತ್ತವೆ. ಇದೊಂದು ಗಡಿ ಉಲ್ಲಂಘನೆ ಅಷ್ಟೇ, ಒಳನುಸುಳುವಿಕೆ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಗಡಿ ಉಲ್ಲಂಘನೆ ಖಂಡಿತವಾಗಿ ನಡೆದಿದೆ ಎಂದಿರುವ ಅವರು, ಇದು ಆಗಾಗ್ಗೆ ನಡೆಯುತ್ತಲೇ ಇರುತ್ತದೆ. ಹೊಸ ವಿಷಯವಲ್ಲ. ಅಲ್ಲದೆ, ಸದ್ಯ ಪರಿಸ್ಥಿತಿ ಸಹಜವಾಗಿದೆ. ಅಲ್ಲದೆ, ಈ ಪ್ರದೇಶದಲ್ಲಿನ ಗಡಿಯು ನಿಖರವಾಗಿ ವ್ಯಾಖ್ಯಾನಿಸಲ್ಪಟ್ಟಿಲ್ಲ. ನಮ್ಮ ಸಶಸ್ತ್ರ ಪಡೆಗಳು ಗಡಿಯನ್ನು ಚೆನ್ನಾಗಿ ಕಾಯುತ್ತಿವೆ. ಕಳವಳಕಾರಿ ವಿಷಯವಲ್ಲ. ಇಂತಹ ಮುಖಾಮುಖಿ ಘಟನೆಗಳು ರಾಜ್ಯದ ಪ್ರವಾಸೋದ್ಯಮದ ಮೇಲೆ ಯಾವುದೇ ಪರಿಣಾಮ ಬೀರಲ್ಲ ಎಂದು ತಿಳಿಸಿದ್ದಾರೆ.

ಇದೇ ವೇಳೆ ಮಾತನಾಡಿರುವ ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಇದು ನರೇಂದ್ರ ಮೋದಿಯವರ ಭಾರತ. ಗಡಿಗಳು ಸುರಕ್ಷಿತವಾಗಿವೆ ಎಂದು ಖಚಿತವಾಗಿ ನಂಬಬಹುದು. ಆತಂಕಪಡುವಂತಹ ವಿಷಯವೇನೂ ಇಲ್ಲ. ದುರುದ್ದೇಶದಿಂದ ಸೃಷ್ಟಿಸಲಾಗುತ್ತಿರುವ ಇಂತಹ ಸುಳ್ಳು ನಿರೂಪಣೆಗಳನ್ನು ತಗ್ಗಿಸಲು ನಾವೆಲ್ಲರೂ ನಮ್ಮಿಂದಾದ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದ್ದಾರೆ.

ಇತ್ತೀಚೆಗೆ, ಇಂಡೋ–ಟಿಬೆಟಿಯನ್ ಗಡಿ ಪೊಲೀಸ್ ಮಹಾನಿರ್ದೇಶಕ ಶತ್ರುಜೀತ್ ಕಪೂರ್ ಅವರು, ಅಲ್ವಾರ್ನಲ್ಲಿ ಅರುಣಾಚಲ ಪ್ರದೇಶದ ಹಲವಾರು ಸ್ಥಳಗಳಲ್ಲಿ ಭಾರತ ಮತ್ತು ಚೀನಾದ ಸೈನಿಕರು ಮುಖಾಮುಖಿಯಾಗಿದ್ದು, ಇನ್ನೂ ಕೆಲವು ಕಡೆ ಮುಖಾಮುಖಿ ಮುಂದುವರೆದಿದೆ ಎಂದು ಹೇಳಿದ್ದರು.

2027ರ ಚುನಾವಣೆಯಲ್ಲಿ ಗೆದ್ದರೆ ಉತ್ತರ ಪ್ರದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ: ಅಮಿತ್ ಶಾ ಘೋಷಣೆ

ಲಖನೌ, ಅ.30: 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ತರಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ಲಖನೌದಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತರ ಪ್ರದೇಶದಲ್ಲಿ ಬಿಜೆಪಿ ಸರ್ಕಾರವನ್ನು ಮೂರನೇ ಬಾರಿಗೆ ಅಧಿಕಾರಕ್ಕೆ ತರುವಂತೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಕರೆ ನೀಡಿದರು. ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಯಾರಿಂದಲೂ ಕೆಳಗಿಳಿಸಲು ಸಾಧ್ಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

1990ರ ಅಕ್ಟೋಬರ್ 30ರಂದು ಅಯೋಧ್ಯೆಯಲ್ಲಿ ರಾಮಭಕ್ತರ ಮೇಲೆ ಗುಂಡಿನ ದಾಳಿ ನಡೆದ ಘಟನೆಯನ್ನು ಪ್ರಸ್ತಾಪಿಸಿದ ಅಮಿತ್ ಶಾ, ಅಂದು ರಾಮಭಕ್ತರ ಮೇಲೆ ಗುಂಡು ಹಾರಿಸಿದವರು ಇಂದು ಮತ್ತೆ ಸರ್ಕಾರ ರಚಿಸುವ ಕನಸು ಕಾಣುತ್ತಿದ್ದಾರೆ ಎಂದು ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ರಾಮಭಕ್ತರ ಮೇಲೆ ಗುಂಡು ಹಾರಿಸಿದವರಿಗೆ ಜನರು ಮೂರನೇ ತಲೆಮಾರಿನವರೆಗೂ ಕ್ಷಮಿಸುವುದಿಲ್ಲ ಎಂದು ಟೀಕಿಸಿದರು.

ವಿವಾದಿತ ಕಟ್ಟಡ ಧ್ವಂಸಗೊಂಡ ಸಂದರ್ಭದಲ್ಲಿ ಸರ್ಕಾರದ ಬಗ್ಗೆ ಚಿಂತಿಸದೆ ನಿರ್ಧಾರ ಕೈಗೊಂಡಿದ್ದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರನ್ನು ಇದೇ ವೇಳೆ ಸ್ಮರಿಸಿದರು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಮೂಲಕ ಬಿಜೆಪಿ ತನ್ನ ಭರವಸೆಯನ್ನು ಈಡೇರಿಸಿದೆ ಎಂದು ಹೇಳಿದರು.

ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಚುನಾವಣೆಯಲ್ಲಿ ಸೋತ ಬಳಿಕ ಅಂಪೈರ್ ಮೇಲೆ ಆರೋಪ ಮಾಡುತ್ತಿರುವಂತೆ ಮತಗಳ್ಳತನದ ಆರೋಪ ಮಾಡುತ್ತಿವೆ ಎಂದು ಟೀಕಿಸಿದ ಅವರು, ಮತಗಳ್ಳತನದ ಆರೋಪಗಳ ಕುರಿತು ಸಂಸತ್ತಿನಲ್ಲಿ ಚರ್ಚಿಸಲು ಬಿಜೆಪಿ ಸಿದ್ಧವಿದೆ. ವಿಶೇಷ ಅಧಿವೇಶನ ಕರೆದು ಪ್ರತಿಯೊಂದು ಆರೋಪಕ್ಕೂ ಉತ್ತರ ನೀಡಲು ಸಿದ್ಧ ಎಂದು ಸವಾಲು ಹಾಕಿದರು.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಆಡಳಿತವನ್ನು ಶ್ಲಾಘಿಸಿದ ಅಮಿತ್ ಶಾ, ಕಠಿಣ ಆಡಳಿತದ ಮೂಲಕ ಉತ್ತರ ಪ್ರದೇಶವನ್ನು ಮಾಫಿಯಾಗಳಿಂದ ಮುಕ್ತಗೊಳಿಸಿದ್ದಾರೆ ಎಂದು ಹೇಳಿದರು. ಪಕ್ಷದ ಕಾರ್ಯಕರ್ತರು ಅರ್ಜುನನಂತೆ ಗುರಿಯ ಮೇಲೆ ಗಮನ ಕೇಂದ್ರೀಕರಿಸಿ 2027ರ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಕರೆ ನೀಡಿದರು.

2014ರಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಕೇವಲ 44 ಶಾಸಕರಿದ್ದರು. ಬಳಿಕ ಸಂಘಟನೆಯನ್ನು ಬಲಪಡಿಸಿ ಶೇ.41ರಷ್ಟು ಮತಗಳೊಂದಿಗೆ 73 ಲೋಕಸಭಾ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು. 2017ರ ವಿಧಾನಸಭಾ ಚುನಾವಣೆಯಲ್ಲಿ ಶೇ.40ರಷ್ಟು ಮತಗಳೊಂದಿಗೆ 312 ಸ್ಥಾನಗಳನ್ನು ಗೆದ್ದಿದ್ದೇವೆ ಎಂದು ಪಕ್ಷದ ಹಿಂದಿನ ಚುನಾವಣಾ ಸಾಧನೆಗಳನ್ನು ಸ್ಮರಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಪಂಕಜ್ ಚೌಧರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಉಪಮುಖ್ಯಮಂತ್ರಿಗಳಾದ ಬ್ರಜೇಶ್ ಪಾಠಕ್ ಮತ್ತು ಕೇಶವ ಪ್ರಸಾದ್ ಮೌರ್ಯ, ವಿನೋದ್ ತಾವ್ಡೆ, ಸ್ಮೃತಿ ಇರಾನಿ, ಜಿತಿನ್ ಪ್ರಸಾದ್ ಸೇರಿದಂತೆ ಹಲವು ಸಚಿವರು, ಸಂಸದರು, ಶಾಸಕರು ಹಾಗೂ ಪಕ್ಷದ ಹಿರಿಯ ಮುಖಂಡರು ಭಾಗವಹಿಸಿದ್ದರು.

ನ್ಯಾಯಾಂಗದ ವಿರುದ್ಧ ಅವಹೇಳನಕಾರಿ ಹೇಳಿಕೆ ಆರೋಪ ಸೌರವ್‌ದಾಸ್‌ಗೆ ಮದ್ರಾಸ್ ಹೈಕೋರ್ಟ್ ನೋಟಿಸ್

ಮುಂಬೈ, ಅ.30: ನ್ಯಾಯಾಂಗದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪದ ಹಿನ್ನೆಲೆಯಲ್ಲಿ ಸಿಜೆಪಿ ವಕ್ತಾರ ಹಾಗೂ ಪತ್ರಕರ್ತ ಸೌರವ್‌ದಾಸ್ ಅವರಿಗೆ ಮದ್ರಾಸ್ ಹೈಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.

ಚೆನ್ನೈನ ಜಮೀನ್ ಪಲ್ಲಾವರಂ ನಿವಾಸಿ ಆರ್. ಗಣೇಶ್ ಕುಮಾರ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ ಮತ್ತು ನ್ಯಾಯಮೂರ್ತಿ ಜಿ. ಅರುಳ್ ಮುರುಗನ್ ಅವರನ್ನೊಳಗೊಂಡ ಪೀಠವು ದಾಸ್‌ಗೆ ಆರು ವಾರಗಳೊಳಗೆ ಉತ್ತರಿಸುವಂತೆ ನೋಟಿಸ್ ಜಾರಿ ಮಾಡಿದೆ. ಭಾರತದ ಮುಖ್ಯ ನ್ಯಾಯಮೂರ್ತಿ ಸೇರಿದಂತೆ ಸುಪ್ರೀಂ ಕೋರ್ಟ್‌ನ ಇತರ ನ್ಯಾಯಮೂರ್ತಿಗಳ ವಿರುದ್ಧ ಸೌರವ್ ದಾಸ್ ಪದೇಪದೇ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದಾರೆ. ಸೌರವ್ ದಾಸ್ ಮತ್ತು ಅವರ ಕುಟುಂಬದ ಸದಸ್ಯರ ಹಿನ್ನೆಲೆಯ ಕುರಿತು ಸಮಗ್ರ, ನಿಷ್ಪಕ್ಷಪಾತ ಹಾಗೂ ಸೂಕ್ತ ತನಿಖೆ ನಡೆಸುವಂತೆ ಕೇಂದ್ರ ಗೃಹ ಸಚಿವಾಲಯ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಅಲ್ಲದೆ, ಪುದುಚೇರಿಯಲ್ಲಿ ವಾಸಿಸುತ್ತಿದ್ದಾರೆ ಎನ್ನಲಾದ ದಾಸ್ ಅವರ ತಾಯಿ ಮತ್ತು ಜೈವಿಕ ತಂದೆಯ ಹಿನ್ನೆಲೆಯ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ತನಿಖೆಯಲ್ಲಿ ಅಗತ್ಯ ಆಧಾರಗಳು ಕಂಡುಬಂದರೆ ಸೌರವ್ ದಾಸ್ ಅವರ ಪಾಸ್ಪೋರ್ಟ್ ಮತ್ತು ಆಧಾರ್ ಕಾರ್ಡ್ ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂಬುದು ಅರ್ಜಿಯ ಮತ್ತೊಂದು ಪ್ರಮುಖ ಬೇಡಿಕೆಯಾಗಿದೆ. ಜೊತೆಗೆ, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಎಕ್ಸ್ ಮತ್ತು ಇನ್ಸ್ಟಾಗ್ರಾಂನಲ್ಲಿರುವ ದಾಸ್ ಅವರ ಖಾತೆಗಳನ್ನು ನಿರ್ಬಂಧಿಸಬೇಕು. ನ್ಯಾಯಾಂಗವನ್ನು ಅವಹೇಳನ ಮಾಡುವಂತಹ ಹೇಳಿಕೆಗಳನ್ನು ಅವರು ಮತ್ತಷ್ಟು ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದೂ ಅರ್ಜಿಯಲ್ಲಿ ಕೋರಲಾಗಿದೆ. ಚೆನ್ನೈನ ಪ್ರಾದೇಶಿಕ ಪಾಸ್ಪೋರ್ಟ್ ಅಧಿಕಾರಿ, ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ, ಕೇಂದ್ರ ಗೃಹ, ವಿದೇಶಾಂಗ, ಕಾನೂನು ಮತ್ತು ನ್ಯಾಯ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಗಳು ಸೇರಿದಂತೆ ಹಲವು ಅಧಿಕಾರಿಗಳು ಮತ್ತು ಎಕ್ಸ್ ಹಾಗೂ ಇನ್ಸ್ಟಾಗ್ರಾಂನ ಕುಂದುಕೊರತೆ ಪರಿಹಾರ ಅಧಿಕಾರಿಗಳನ್ನು ಅರ್ಜಿಯಲ್ಲಿ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿದಾರರ ಪರ ವಕೀಲ ಬಿ. ಜಗನ್ನಾಥ್ ವಾದ ಮಂಡಿಸಿ, ತಮ್ಮ ಕಕ್ಷಿದಾರರು ಈ ಸಂಬಂಧ ಅಕ್ಟೋಬರ್ 7ರಂದು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಸೌರವ್ ದಾಸ್ ಅವರ ಹೇಳಿಕೆಗಳ ಕುರಿತು ಅಧಿಕೃತ ಪರಿಶೀಲನೆ ಅಗತ್ಯವಿದೆ. ಈ ಹಿಂದೆ ಸಲ್ಲಿಸಿದ್ದ ದೂರಿನ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಹೈಕೋರ್ಟ್ ಮೊರೆ ಹೋಗಬೇಕಾಯಿತು ಎಂದು ಅರ್ಜಿದಾರರ ಪರ ವಕೀಲರು ವಾದಿಸಿದ್ದಾರೆ.

ಟೈಗರ್ ಶ್ರಾಫ್ ಕಾರಿನ ಮೇಲೆ ಗುಂಡಿನ ದಾಳಿ ಹರಿಯಾಣದಲ್ಲಿ 12ನೇ ಆರೋಪಿ ಬಂಧನ

ಮುಂಬೈ, ಅ.30: ಬಾಲಿವುಡ್ ನಟ ಟೈಗರ್ ಶ್ರಾಫ್ ಕಾರಿನ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಕ್ರೈಂ ಬ್ರಾಂಚ್ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಹರಿಯಾಣದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ಪ್ರಕರಣದ 12ನೇ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ಬಂಧಿತ ಆರೋಪಿಯನ್ನು ಅಮನ್ ಎಂದು ಗುರುತಿಸಲಾಗಿದೆ. ಸೋನಿಪತ್ ಜಿಲ್ಲೆಯ ರೋಹ್ನಾ ಗ್ರಾಮದ ನಿವಾಸಿಯಾಗಿರುವ ಅಮನ್, ಈಗಾಗಲೇ ಬಂಧನಕ್ಕೊಳಗಾಗಿರುವ ಕುನಾಲ್ ಜಮಿನ್‌ಸಿಂಗ್ ಎಂಬಾತನ ನಿಕಟ ಸಂಪರ್ಕ ಹೊಂದಿದ್ದ ಎನ್ನಲಾಗಿದೆ.

ಪ್ರಕರಣದ ತನಿಖೆ ವೇಳೆ ಅಮನ್‌ನ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದು ಪೊಲೀಸರ ಗಮನಕ್ಕೆ ಬಂದಿತ್ತು. ಅನಿಲ್ ಪಂಡಿತ್ ಎಂಬಾತ ಅಮನ್ ಖಾತೆಗೆ ಹಣ ಜಮೆ ಮಾಡಿದ್ದು, ಆ ಹಣವನ್ನು ಅಮನ್ ಹಿಂಪಡೆದು ಕುನಾಲ್‌ಗೆ ನೀಡಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ. ಈ ಹಣವನ್ನು ಗುಂಡಿನ ದಾಳಿಗೆ ಬಳಸಲಾದ ಪಿಸ್ತೂಲ್ ಖರೀದಿಸಲು ಬಳಸಿರಬಹುದು ಎಂಬ ಅನುಮಾನವೂ ವ್ಯಕ್ತವಾಗಿದೆ.

ಅಕ್ಟೋಬರ್ 18ರಂದು ಮುಂಬೈನ ಜುಹು ಪ್ರದೇಶದಲ್ಲಿ ಟೈಗರ್ ಶ್ರಾಫ್ ಅವರ ಕಾರಿನ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದರು. ಬೈಕ್‌ನಲ್ಲಿ ಬಂದಿದ್ದ ಇಬ್ಬರು ದುಷ್ಕರ್ಮಿಗಳು ಹಲವು ಸುತ್ತು ಗುಂಡು ಹಾರಿಸಿ ಸ್ಥಳದಿಂದ ಪರಾರಿಯಾಗಿದ್ದರು. ಘಟನೆಯಲ್ಲಿ ನಟ ಟೈಗರ್ ಶ್ರಾಫ್ ಅಪಾಯದಿಂದ ಪಾರಾಗಿದ್ದರೂ, ಅವರ ಕಾರು ಚಾಲಕ ಹಾಗೂ ಮತ್ತೊಬ್ಬ ವ್ಯಕ್ತಿಗೆ ಗುಂಡೇಟಿನಿಂದ ಗಾಯಗಳಾಗಿದ್ದವು.

ಈ ಪ್ರಕರಣದಲ್ಲಿ ಈ ಹಿಂದೆ 11 ಮಂದಿಯನ್ನು ಬಂಧಿಸಲಾಗಿತ್ತು. ಇದೀಗ ಅಮನ್ ಬಂಧನದೊಂದಿಗೆ ಬಂಧಿತರ ಸಂಖ್ಯೆ 12ಕ್ಕೆ ಏರಿಕೆಯಾಗಿದೆ. ಪ್ರಕರಣದ ಹಿಂದೆ ಸಂಘಟಿತ ಅಪರಾಧ ಜಾಲದ ಕೈವಾಡವಿರುವ ಶಂಕೆಯ ಹಿನ್ನೆಲೆಯಲ್ಲಿ ಆರೋಪಿಗಳ ವಿರುದ್ಧ ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಎಂಸಿಒಸಿಎ) ಅಡಿ ಪ್ರಕರಣ ದಾಖಲಿಸಲಾಗಿದೆ.

ಈಗಾಗಲೇ ಬಂಧಿತ 11 ಆರೋಪಿಗಳನ್ನು ನವೆಂಬರ್ 6ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ವಿಶೇಷ ನ್ಯಾಯಾಲಯ ಆದೇಶಿಸಿದೆ. ಪರಾರಿಯಾಗಿರುವ ಅನಿಲ್ ಪಂಡಿತ್ ಸೇರಿದಂತೆ ಪ್ರಕರಣದ ಇತರ ಆರೋಪಿಗಳ ಸಂಪರ್ಕ ಹಾಗೂ ಹಣಕಾಸಿನ ವ್ಯವಹಾರ ಬಗ್ಗೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಜಾಮಿಯಾ ವಿದ್ಯಾರ್ಥಿಗಳ ಬೇಡಿಕೆಗೆ ಮಣಿದ ವಿವಿ ಆಡಳಿತ

ಮುಂದಿನ ವರ್ಷದ ಮೇ 15ರೊಳಗೆ ವಿದ್ಯಾರ್ಥಿ ಸಂಘ ಚುನಾವಣೆ ನಡೆಸಲು ಒಪ್ಪಿಗೆ

ನವದೆಹಲಿ, ಅ.30: 18 ದಿನಗಳ ಉಪವಾಸ ಸತ್ಯಾಗ್ರಹ ಮತ್ತು ಹೋರಾಟದ ನಂತರ, ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ದೊಡ್ಡ ಗೆಲುವು ಸಾಧಿಸಿದ್ದಾರೆ. ಕಳೆದ ಅನೇಕ ವರ್ಷಗಳಿಂದ ರದ್ದಾಗಿದ್ದ ವಿದ್ಯಾರ್ಥಿ ಸಂಘವನ್ನು ಮತ್ತೆ ಶುರು ಮಾಡಬೇಕು ಎಂದು ಒತ್ತಾಯಿಸಿ ವಿದ್ಯಾರ್ಥಿಗಳು ಭಾರಿ ಪ್ರತಿಭಟನೆ ನಡೆಸುತ್ತಿದ್ದರು. ಈಗ ಕೊನೆಗೂ ವಿದ್ಯಾರ್ಥಿಗಳ ಹೋರಾಟಕ್ಕೆ ಮಣಿದಿರುವ ವಿಶ್ವವಿದ್ಯಾಲಯದ ಆಡಳಿತ ಮಂಡಳಿ, ವಿದ್ಯಾರ್ಥಿ ಸಂಘದ ಚುನಾವಣೆ ನಡೆಸಲು ಖಚಿತ ಸಮಯವನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ.

ಜಾಮಿಯಾ ವಿಶ್ವವಿದ್ಯಾಲಯದಲ್ಲಿ 2006 ರಿಂದ ಅಂದರೆ ಕಳೆದ 18–20 ವರ್ಷಗಳಿಂದ ಯಾವುದೇ ವಿದ್ಯಾರ್ಥಿ ಸಂಘದ ಚುನಾವಣೆ ನಡೆದಿರಲಿಲ್ಲ. ಇದರಿಂದಾಗಿ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳಿಗೆ ಏನಾದರೂ ಸಮಸ್ಯೆಗಳಾದರೆ ಅಥವಾ ಶೈಕ್ಷಣಿಕ ತೊಂದರೆಗಳಾದರೆ ಆಡಳಿತ ಮಂಡಳಿ ಮುಂದೆ ಪ್ರಶ್ನೆ ಮಾಡಲು ಅವರ ಪರವಾಗಿ ಯಾರೂ ಇರಲಿಲ್ಲ. ಇತ್ತೀಚೆಗೆ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲೂ ವಿದ್ಯಾರ್ಥಿಗಳ ಹೋರಾಟದ ನಂತರ ಚುನಾವಣೆ ನಡೆಸಲು ಒಪ್ಪಿಕೊಳ್ಳಲಾಗಿತ್ತು. ಇದನ್ನೇ ನೋಡಿ ಪ್ರೇರಣೆಗೊಂಡ ಜಾಮಿಯಾ ವಿದ್ಯಾರ್ಥಿಗಳು, ಅ.12 ರಿಂದ ಉಪವಾಸ ಸತ್ಯಾಗ್ರಹ ಶುರು ಮಾಡಿದ್ದರು. ಪ್ರತಿಭಟನೆಯ ಭಾಗವಾಗಿ ವಿದ್ಯಾರ್ಥಿಗಳು ಕಾಲೇಜಿನ ಆನ್ಲೈನ್ ಕ್ಲಾಸ್ಗಳನ್ನು ಬಹಿಷ್ಕರಿಸಿದ್ದರು, ಕ್ಯಾಂಪಸ್ನಲ್ಲಿ ಇಂಕಿಲಾಬಿ ಮೇಳ ಎಂಬ ಕಾರ್ಯಕ್ರಮ ನಡೆಸಿ, ವಿಶ್ವವಿದ್ಯಾಲಯವನ್ನು ಸಂಪೂರ್ಣವಾಗಿ ತೆರೆಯಬೇಕು ಮತ್ತು ಭದ್ರತಾ ಅಧಿಕಾರಿಗಳನ್ನು ಬದಲಾಯಿಸಬೇಕು ಎಂದು ಪಟ್ಟು ಹಿಡಿದಿದ್ದರು.

ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಅ.29ರಂದು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಫೀಸ್‌ನಿಂದ ಅಧಿಕೃತ ಆದೇಶ ಹೊರಬಿದ್ದಿದೆ. ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ ವಿದ್ಯಾರ್ಥಿ ಸಂಘದ ಸಂವಿಧಾನವನ್ನು ಮೇ 15, 2027ರೊಳಗೆ ಅನುಮೋದಿಸಿ ಜಾರಿಗೆ ತರಲಾಗುವುದು.

ಜುಲೈ 16, 2027 ರಂದು ಆರಂಭವಾಗುವ ಮುಂದಿನ ಶೈಕ್ಷಣಿಕ ವರ್ಷದ ಮೊದಲ ವಾರದ ಒಳಗಾಗಿ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಡೆಸಲಾಗುವುದು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕಾಗಿ ವಿದ್ಯಾರ್ಥಿಗಳಿಗೆ ನೀಡಿದ್ದ ಎಲ್ಲ ನೋಟಿಸ್‌ಗಳು, ಸಸ್ಪೆನ್ಷನ್ ಮತ್ತು ಕ್ಯಾಂಪಸ್ ಬ್ಯಾನ್‌ಗಳನ್ನು ತಕ್ಷಣದಿಂದಲೇ ರದ್ದು ಮಾಡಲಾಗಿದೆ. ನವೆಂಬರ್ 2, ಸೋಮವಾರದಿಂದ ಎಲ್ಲಾ ಕಾಲೇಜು ತರಗತಿಗಳು ಮತ್ತು ಪರೀಕ್ಷೆಗಳು ಮಾಮೂಲಿಯಂತೆ ಆಫ್‌ಲೈನ್‌ನಲ್ಲೇ ನಡೆಯಲಿದ್ದು, ಎಲ್ಲರೂ ಕಡ್ಡಾಯವಾಗಿ ಹಾಜರಾಗಬೇಕು ಎಂದಿದೆ.

ಆಡಳಿತ ಮಂಡಳಿಯು ಈ ನಿಶ್ಚಿತ ಭರವಸೆ ನೀಡಿದ ಬೆನ್ನಲ್ಲೇ, ವಿದ್ಯಾರ್ಥಿಗಳಿಗೆ ತಕ್ಷಣವೇ ಉಪವಾಸ ಸತ್ಯಾಗ್ರಹ ಮತ್ತು ಪ್ರತಿಭಟನೆಯನ್ನು ಕೊನೆಗೊಳಿಸಲು ನಿರ್ದೇಶಿಸಿದೆ.

ಫಾರ್ಮ್ 7 ಕೊಟ್ಟು ಮುಸ್ಲಿಂ ಮತದಾರರ ಹೆಸರು ಡಿಲೀಟ್ ಮಾಡಿಸಿದ ಬಿಜೆಪಿ ಬಿಎಲ್‌ಎಗಳು!



ನವದೆಹಲಿ, ಅ.30: ದೆಹಲಿಯಲ್ಲಿ ಸುದೀರ್ಘ ಕಾಲದಿಂದ ವಾಸಿಸುತ್ತಿರುವ ಮುಸ್ಲಿಂ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಬಿಜೆಪಿಯ ಬೂತ್ ಮಟ್ಟದ ಏಜೆಂಟ್‌ಗಳು (ಬಿಎಲ್‌ಎ–2) ಫಾರ್ಮ್ 7 ಸಲ್ಲಿಸಿರುವುದು ತೀವ್ರ ವಿವಾದಕ್ಕೆ ಕಾರಣವಾಗಿದೆ.

ದೆಹಲಿಯಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಲಾಭ ಪಡೆದು, ಅರ್ಹ ಮತದಾರರನ್ನು ಅನುಪಸ್ಥಿತ/ಸ್ಥಳಾಂತರ ಅಥವಾ ಮೃತ ಎಂದು ಸುಳ್ಳು ಮಾಹಿತಿ ನೀಡಿ ಪಟ್ಟಿಯಿಂದ ತೆಗೆದುಹಾಕಲು ಯತ್ನಿಸಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ದೆಹಲಿಯ ಮುಸ್ತಫಾಬಾದ್ ವಿಧಾನಸಭಾ ಕ್ಷೇತ್ರದ ದಯಾಳಪುರ ನಿವಾಸಿ ಸಜೀದ್ ಹುಸೇನ್ ಸೇರಿದಂತೆ ಅನೇಕ ಸ್ಥಳೀಯರು ಕಳೆದ ಎರಡು ದಶಕಗಳಿಂದಲೂ ಒಂದೇ ವಿಳಾಸದಲ್ಲಿ ವಾಸಿಸುತ್ತಿದ್ದಾರೆ. ಆದರೆ, ಚುನಾವಣಾ ಆಯೋಗದ ವೆಬ್ಸೈಟ್ ದಾಖಲೆಗಳ ಪ್ರಕಾರ, ಇವರ ಕುಟುಂಬದ ಸದಸ್ಯರು ವಲಸೆ ಹೋಗಿದ್ದಾರೆ, ಮರಣ ಹೊಂದಿದ್ದಾರೆ ಎಂಬ ಸುಳ್ಳು ಕಾರಣಗಳನ್ನು ನೀಡಿ, ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಫಾರ್ಮ್ 7 ಸಲ್ಲಿಸಲಾಗಿದೆ. ಮತಗಟ್ಟೆ ಸಂಖ್ಯೆ 129ರ ಒಂದೇ ಪ್ರದೇಶದ ಸುಮಾರು 28 ಮುಸ್ಲಿಂ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಈ ರೀತಿ ಅರ್ಜಿ ಸಲ್ಲಿಸಲಾಗಿತ್ತು. ತನಿಖೆ ಮತ್ತು ಸ್ಥಳೀಯ ಪರಿಶೀಲನೆಯ ವೇಳೆ ಈ 28 ಜನರೂ ತಮ್ಮ ಸ್ವಂತ ಮನೆಗಳಲ್ಲೇ ವಾಸವಾಗಿರುವುದು ಮತ್ತು ಅವರೆಲ್ಲರ ಬಳಿ ಅಧಿಕೃತ ಗುರುತಿನ ಚೀಟಿಗಳಿರುವುದು ದೃಢಪಟ್ಟಿದೆ.

ಕೇಂದ್ರ ಚುನಾವಣಾ ಆಯೋಗದ ದಾಖಲೆಗಳ ಪ್ರಕಾರ, ಬಿಜೆಪಿ ನಿಯೋಜಿತ ಬಿಎಲ್‌ಎ –2 ಚಂದ್ರಶೇಖರ್ ನೈನ್ವಾಲ್ ಎಂಬುವವರ ಹೆಸರಿನಲ್ಲಿ ಈ 28 ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಈ ಅರ್ಜಿದಾರರನ್ನು ತಾವು ಎಂದಿಗೂ ನೋಡಿಲ್ಲ ಹಾಗೂ ಅವರ ಹೆಸರು ಕೇಳಿಲ್ಲ ಎಂದು ಸಂತ್ರಸ್ತ ಕುಟುಂಬಗಳು ತಿಳಿಸಿವೆ. ಚುನಾವಣಾ ಆಯೋಗದ ನಿಯಮಾವಳಿಗಳ ಪ್ರಕಾರ ಒಬ್ಬ ವ್ಯಕ್ತಿ ಅಥವಾ ಏಜೆಂಟ್ ಗರಿಷ್ಠ 10 ಫಾರ್ಮ್ 7 ಮಾತ್ರ ಸಲ್ಲಿಸಲು ಅವಕಾಶವಿದೆ. ಆದರೆ, ಮುಸ್ತಫಾಬಾದ್ ಕ್ಷೇತ್ರದಲ್ಲಿ 10ಕ್ಕೂ ಹೆಚ್ಚು ಬಿಎಲ್‌ಎಗಳು ತಲಾ 30ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಶಶಿ ಎಂಬಾತ 42 ಅರ್ಜಿಗಳನ್ನು ಸಲ್ಲಿಸಿದ್ದಾನೆ. ಮುಸ್ತಫಾಬಾದ್ ಒಂದರಲ್ಲೇ ಆಗಸ್ಟ್ 31ರ ನಂತರ ಸಲ್ಲಿಕೆಯಾದ 597 ಫಾರ್ಮ್ 7ಗಳಲ್ಲಿ ಶೇ. 96ರಷ್ಟು (572 ಅರ್ಜಿಗಳು) ಬಿಜೆಪಿ ಬಿಎಲ್‌ಎಗಳಿಂದಲೇ ಸಲ್ಲಿಕೆಯಾಗಿದೆ ಎಂಬುದು ದಾಖಲೆಗಳಿಂದ ತಿಳಿದುಬಂದಿದೆ.

ದೀಪಾವಳಿ ಹಬ್ಬದ ವ್ಯಾಪಾರಕ್ಕೆ ಇಂಡಿಯಾ ಒಕ್ಕೂಟದ ರ್‍ಯಾಲಿ ಆತಂಕ

ನವದೆಹಲಿ, ಅ.30: ಚುನಾವಣಾ ಅಕ್ರಮಗಳು ಮತ್ತು ಮತಗಳ್ಳತನದ ಆರೋಪಗಳನ್ನು ಮುಂದಿಟ್ಟುಕೊಂಡು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ಇಂಡಿಯಾ ಒಕ್ಕೂಟ ನ.1ರಂದು ಹಮ್ಮಿಕೊಂಡಿರುವ ರ್‍ಯಾಲಿಯನ್ನು ಮುಂದೂಡುವಂತೆ ದೆಹಲಿಯ ವ್ಯಾಪಾರಿಗಳ ಸಂಘಟನೆ ಚೇಂಬರ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿ (ಸಿಟಿಐ) ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಮನವಿ ಮಾಡಿದೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ರ್‍ಯಾಲಿ ನಡೆಯುವುದರಿಂದ ದೆಹಲಿಯ ಸುಮಾರು 20 ಪ್ರಮುಖ ಮಾರುಕಟ್ಟೆಗಳಲ್ಲಿ 10 ಸಾವಿರದಿಂದ 12 ಸಾವಿರ ಕೋಟಿ ವಹಿವಾಟಿಗೆ ಅಡ್ಡಿಯಾಗುವ ಆತಂಕವಿದೆ. ನವೆಂಬರ್ 1ರ ರ್‍ಯಾಲಿಯನ್ನು ದೀಪಾವಳಿ ನಂತರ ನವೆಂಬರ್ 10 ಅಥವಾ 11ರ ಬಳಿಕ ಆಯೋಜಿಸುವಂತೆ ಮನವಿ ಮಾಡಿದ್ದಾರೆ. ಒಂದು ವೇಳೆ ನಿಗದಿತ ದಿನಾಂಕದಂದೇ ರ್‍ಯಾಲಿ ನಡೆಸುವುದು ಅನಿವಾರ್ಯವಾದರೆ, ಹೆಚ್ಚಿನ ವಾಹನಗಳ ನಿಲುಗಡೆಗೆ ಅವಕಾಶವಿರುವ ಬುರಾರಿ ಮೈದಾನಕ್ಕೆ ಸ್ಥಳಾಂತರಿಸುವಂತೆಯೂ ಸಿಟಿಐ ಅಧ್ಯಕ್ಷ ಬ್ರಿಜೇಶ್ ಗೋಯಲ್ ಅವರು ಪತ್ರದಲ್ಲಿ ಸಲಹೆ ನೀಡಿದ್ದಾರೆ.

10 ಲಕ್ಷ ಜನ ನಿರೀಕ್ಷೆ, 15ರಿಂದ 20 ಸಾವಿರ ವಾಹನಗಳು ನಿರೀಕ್ಷೆ

ರ್‍ಯಾಲಿಯಲ್ಲಿ 10 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದ್ದು, 15 ಸಾವಿರದಿಂದ 20 ಸಾವಿರ ವಾಹನಗಳು ದೆಹಲಿಗೆ ಆಗಮಿಸುವ ಸಾಧ್ಯತೆಯಿದೆ ಎಂದು ವ್ಯಾಪಾರಿಗಳ ಸಂಘಟನೆ ಆತಂಕ ವ್ಯಕ್ತಪಡಿಸಿದೆ. ರಾಮಲೀಲಾ ಮೈದಾನದಲ್ಲಿ 200 ದೊಡ್ಡ ಬಸ್‌ಗಳನ್ನು ನಿಲುಗಡೆ ಮಾಡಲು ಕೂಡ ಸಾಕಷ್ಟು ಸ್ಥಳಾವಕಾಶವಿಲ್ಲ. ಹೀಗಾಗಿ ವಾಹನಗಳು ಪ್ರಮುಖ ರಸ್ತೆಗಳಲ್ಲಿ ಸಂಚರಿಸುವುದರಿಂದ ಸಂಚಾರ ದಟ್ಟಣೆ ಉಂಟಾಗಿ ವ್ಯಾಪಾರ ವಹಿವಾಟಿಗೆ ಹೊಡೆತ ಬೀಳಬಹುದು ಎಂದು ಹೇಳಿದೆ.

20 ಪ್ರಮುಖ ಮಾರುಕಟ್ಟೆಗಳ ಮೇಲೆ ಪರಿಣಾಮದ ಆತಂಕ

ರಾಮಲೀಲಾ ಮೈದಾನದ ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಚಾಂದಿನಿ ಚೌಕ್, ಸದರ್ ಬಜಾರ್, ಖಾರಿ ಬಾವಲಿ, ಕನಾಟ್ ಪ್ಲೇಸ್, ಪಾಲಿಕಾ ಬಜಾರ್, ಭಗೀರಥ್ ಪ್ಯಾಲೇಸ್, ಕಾಶ್ಮೀರಿ ಗೇಟ್, ಕರೋಲ್ ಬಾಗ್, ಚಾವಡಿ ಬಜಾರ್, ದರಿಬಾ ಕಲಾನ್ ಸೇರಿದಂತೆ ಸುಮಾರು 20 ಪ್ರಮುಖ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಗಳಿವೆ.

ಈ ಮಾರುಕಟ್ಟೆಗಳಲ್ಲಿ ಪ್ರತಿದಿನ 10 ಸಾವಿರದಿಂದ 12 ಸಾವಿರ ಕೋಟಿ ವಹಿವಾಟು ನಡೆಯುತ್ತದೆ ಎಂದು ಸಿಟಿಐ ಅಂದಾಜಿಸಿದೆ. ದೆಹಲಿಯ 56 ಕೈಗಾರಿಕಾ ಪ್ರದೇಶಗಳಿಂದ ಪ್ರತಿದಿನ ಸುಮಾರು 5 ಸಾವಿರ ಟ್ರಕ್‌ಗಳು ಮತ್ತು ಟೆಂಪೋಗಳ ಮೂಲಕ ಸರಕುಗಳು ಮಾರುಕಟ್ಟೆಗಳಿಗೆ ಬರುತ್ತವೆ. ಅಲ್ಲಿಂದ ಸುಮಾರು 3 ಸಾವಿರ ವಾಹನಗಳ ಮೂಲಕ ದೆಹಲಿ–ಎನ್‌ಸಿಆರ್ ಪ್ರದೇಶದ ನಗರಗಳು ಹಾಗೂ ಇತರ ರಾಜ್ಯಗಳಿಗೆ ಸರಕುಗಳನ್ನು ಸಾಗಿಸಲಾಗುತ್ತದೆ. ರ್‍ಯಾಲಿಯಿಂದ ರಸ್ತೆ ಸಂಚಾರಕ್ಕೆ ಅಡ್ಡಿಯಾದರೆ ಸರಕುಗಳ ಸಾಗಣೆ ಮತ್ತು ಗ್ರಾಹಕರ ಓಡಾಟಕ್ಕೂ ತೊಂದರೆಯಾಗಲಿದೆ ಎಂದು ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಇಂದಿನಿಂದಲೇ ಸಂಚಾರ ವ್ಯತ್ಯಯದ ಸಾಧ್ಯತೆ

ರ್‍ಯಾಲಿಯಲ್ಲಿ ಪಾಲ್ಗೊಳ್ಳುವವರ ವಾಹನಗಳು ಅಕ್ಟೋಬರ್ 31ರ ಮಧ್ಯಾಹ್ನದಿಂದಲೇ ಸಿಂಘು, ಟಿಕ್ರಿ, ಘಾಜಿಪುರ ಮತ್ತು ಬದರ್ಪುರ ಗಡಿಗಳ ಮೂಲಕ ದೆಹಲಿಗೆ ಪ್ರವೇಶಿಸುವ ಸಾಧ್ಯತೆಯಿದೆ. ಬಳಿಕ ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸುವುದರಿಂದ ಸರಕು ಸಾಗಣೆ ವಾಹನಗಳ ಸಂಚಾರಕ್ಕೂ ಅಡ್ಡಿಯಾಗಬಹುದು ಎಂದು ವ್ಯಾಪಾರಿಗಳು ತಿಳಿಸಿದ್ದಾರೆ. ಈಗಾಗಲೇ ಕೆಲವು ಸರಕು ಸಾಗಣೆದಾರರು ಅಕ್ಟೋಬರ್ 31ರಿಂದ ಮಾರುಕಟ್ಟೆಗಳಿಗೆ ವಾಹನ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ ಎಂದು ಸಿಟಿಐ ಹೇಳಿದೆ.

ನವೆಂಬರ್ 6ರಂದು ಧನ್ತೇರಸ್ ಹಾಗೂ ನವೆಂಬರ್ 8ರಂದು ದೀಪಾವಳಿ ಇರುವುದರಿಂದ ಈ ಸಮಯದಲ್ಲಿ ವ್ಯಾಪಾರ ವಹಿವಾಟು ಅತ್ಯಂತ ಮಹತ್ವದ್ದಾಗಿದೆ. ಹಬ್ಬದ ಖರೀದಿ ಮತ್ತು ಸರಕುಗಳ ಪೂರೈಕೆಗೆ ಅಡ್ಡಿಯಾಗದಂತೆ ರ?ಯಾಲಿಯ ದಿನಾಂಕ ಬದಲಿಸುವಂತೆ ವ್ಯಾಪಾರಿಗಳು ಮನವಿ ಮಾಡಿದ್ದಾರೆ.

ರ್‍ಯಾಲಿಗೆ ವಿರೋಧವಲ್ಲ, ಜೀವನೋಪಾಯದ ರಕ್ಷಣೆ ಉದ್ದೇಶ: ರಾಜಕೀಯ ರ್‍ಯಾಲಿಯನ್ನು ವಿರೋಧಿಸುವುದು ತಮ್ಮ ಉದ್ದೇಶವಲ್ಲ. ಹಬ್ಬದ ಸಂದರ್ಭದಲ್ಲಿ ವ್ಯಾಪಾರಿಗಳ ಜೀವನೋಪಾಯಕ್ಕೆ ಧಕ್ಕೆಯಾಗಬಾರದು ಎಂಬ ಕಾರಣಕ್ಕೆ ಮನವಿ ಮಾಡುತ್ತಿದ್ದೇವೆ ಎಂದು ಅಖಿಲ ಅಧ್ಯಕ್ಷ ಬ್ರಿಜೇಶ್ ಗೋಯಲ್ ತಿಳಿಸಿದ್ದಾರೆ.

ಸ್ಟಿಂಗ್ ಆಪರೇಷನ್: ವೀಡಿಯೋ ಮಾಡಿದ ಮೂಲಪುರುಷರ ಮೇಲೆ ಕ್ರಮ ಕೈಗೊಳ್ಳದ ಪೊಲೀಸರು

ಬೆಂಗಳೂರು, ಅ.30: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತೇಜೋವಧೆ ಪ್ರಕರಣ ಕಟ್ಟುಕಥೆ ಎನ್ನುವ ಪೊಲೀಸರ ತನಿಖಾ ವರದಿ ಬುಡ ಬಿಟ್ಟು ಕೊಂಬೆ ಅಲ್ಲಾಡಿಸಿದಂತಿದೆ ಕಂಡು ಬಂದಿದೆ. ಪ್ರಕರಣದ ತನಿಖೆ ನಡೆಸಿದ ಸಿಸಿಬಿಯ ಅಪರಾಧ ವಿಭಾಗದ ಪೊಲೀಸರು ಯಾವುದೋ ಒತ್ತಡಕ್ಕೆ ಮಣಿದು, ಮತ್ತ್ಯಾರನ್ನೋ ಮೆಚ್ಚಿಸಲು ಈ ತೀರ್ಮಾನಕ್ಕೆ ಬಂದಿದ್ದಾರೆ ಎನ್ನುವಂತಿದೆ ಅವರ ತನಿಖೆ.

ಪೊಲೀಸರ ತನಿಖಾ ವರದಿಯನ್ನು ಗಮನಿಸಿದರೆ ಆತುರದಲ್ಲಿ ಈ ನಿರ್ಧಾರ ಕೈಗೊಂಡಿದ್ದಾರೆಂಬುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಸಿದ್ದರಾಮಯ್ಯನವರ ವಿರುದ್ಧ ಕಥೆ ಕಟ್ಟಿ ವಿಡಿಯೋದಲ್ಲಿ ಮಾತನಾಡಿದ ಮತ್ತು ವಿಡಿಯೋ ಮಾಡಿದ ವ್ಯಕ್ತಿಗಳ ವಿರುದ್ಧ ಏಕೆ ಕಾನೂನು ಕ್ರಮ ಕೈಗೊಂಡಿಲ್ಲ ಎನ್ನುವ ಪ್ರಶ್ನೆ ಎದುರಾಗುವುದು ಸಾಮಾನ್ಯ.

ಆ ವಿಡಿಯೋದಲ್ಲಿರುವ ಬಹುತೇಕ ವ್ಯಕ್ತಿಗಳು ರಾಜರೋಷವಾಗಿ ಓಡಾಡುತ್ತಿದ್ದಾರೆ. ವಿಡಿಯೋದಲ್ಲಿ ಕಾಣಿಸಿಕೊಂಡಿರುವ ಸಂತ್ರಸ್ತ ಮಹಿಳೆಯನ್ನೂ ಸಹ ಪತ್ತೆಮಾಡಿ ಆಕೆಯ ಹೇಳಿಕೆಯನ್ನು ಪಡೆದುಕೊಳ್ಳಲಾಗಿದೆ. ಆಕೆ ಸುಳ್ಳು ಹೇಳಿದ್ದಾರೆ ಎನ್ನುವುದಾದರೆ ಅವರ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ ಎನ್ನುವ ಅನುಮಾನ ಕಾಡುವುದು ಸಹಜ. ಜೊತೆಗೆ ವಿಡಿಯೋ ಸೂತ್ರಧಾರಿ ಕೃಪಾಆಳ್ವ ಅವರು ವಿದೇಶಕ್ಕೆ ಪರಾರಿಯಾಗಿದ್ದು, ಇದಕ್ಕೆ ಪೊಲೀಸರು ಯಾಕೆ ನೆರವಾದರು ಎನ್ನುವ ಸಂದೇಹ ಸಾರ್ವಜನಿಕ ವಲಯದಲ್ಲಿದೆ. ಮಾಧ್ಯಮ ಸಂಸ್ಥೆಯೊಂದರ ಮುಖ್ಯಸ್ಥ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದು, ಪೊಲೀಸರು ಯಾಕೆ ಜಾಮೀನು ಅರ್ಜಿಗೆ ಪ್ರಬಲ ವಿರೋಧ ವ್ಯಕ್ತಪಡಿಸಲಿಲ್ಲ ಎನ್ನುವ ಪ್ರಶ್ನೆಯೂ ಸಹ ಸಹಜವಾಗಿಯೇ ಎದ್ದು ಕಾಣುತ್ತದೆ. ಸಿದ್ದರಾಮಯ್ಯ ಕುರಿತ ವಿಡಿಯೋದಲ್ಲಿರುವ ವ್ಯಕ್ತಿಗಳನ್ನು ಬಂಧಿಸಿದರೇ ಪರಿಸ್ಥಿತಿಯೇ ಬೇರೆಯೇ ಆಗುತ್ತದೆ ಎಂಬ ಕಾರಣಕ್ಕೆ ಪೊಲೀಸರು ಕಟ್ಟುಕಥೆ ಎಂಬ ಕಥೆ ಹೇಳಿ ಕೈ ತೊಳೆದುಕೊಳ್ಳುವ ಪ್ರಯತ್ನ ಮಾಡಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ವಿಡಿಯೋಗಳನ್ನು ಯುಟ್ಯೂಬ್‌ಗಳಲ್ಲಿ ಅಪ್‌ಲೋಡ್ ಮಾಡಿದ ವ್ಯಕ್ತಿಗಳ ವಿರುದ್ಧ ಮಾತ್ರ ತೀವ್ರ ಕಾರ್ಯಾಚರಣೆ ಕೈಗೊಂಡಿರುವ ಪೊಲೀಸರು ಬುಡಬಿಟ್ಟು ಕೊಂಬೆ ಅಲ್ಲಾಡಿಸುವುದನ್ನು ಬಿಟ್ಟು ಮೊದಲು ವಿಡಿಯೋದಲ್ಲಿರುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಂಡು ವಿಡಿಯೋ ಹರಿಬಿಟ್ಟ ವ್ಯಕ್ತಿಗಳ ವಿರುದ್ಧವೂ ಸಹ ನಿರ್ದಾಕ್ಷಣ್ಯವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಸಿದ್ದರಾಮಯ್ಯ ಅವರು ಈ ಪ್ರಕರಣದಲ್ಲಿ ಸಂಪೂರ್ಣ ನಿರಪರಾಧಿ ಇರಬಹುದು. ಆದರೆ ಬೆಂಗಳೂರು ನಗರ ಪೊಲೀಸರು ಈ ಪ್ರಕರಣದಲ್ಲಿ ನಡೆದುಕೊಂಡ ರೀತಿ ಹಲವಾರು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಸಿಸಿಬಿಯ ಸೈಬರ್ ಕ್ರೈಂ ಠಾಣೆ ಮೊಕದ್ದಮೆ ಸಂಖ್ಯೆ 56/2026 ರ ತನಿಖೆಯಲ್ಲಿ ಈವರೆಗೆ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳು ಮತ್ತು ದಾಖಲಿಸಲಾದ ಹೇಳಿಕೆಗಳ ಆಧಾರದಲ್ಲಿ ವಿಡಿಯೋದಲ್ಲಿ ಬಿಂಬಿಸಿರುವಂತೆ ಆರೋಪಗಳು ಕಟ್ಟು ಕಥೆಯ ಭಾಗವಾಗಿದೆ ಎಂದು ತಿಳಿದು ಬಂದಿದೆ.

ಉದ್ದೇಶಪೂರ್ವಕವಾಗಿ ಸೃಷ್ಟಿಸಲಾದ ನಿರೂಪಣೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ವಿಡಿಯೋದಲ್ಲಿ ಚಿತ್ರಿಸಿರುವ ರೀತಿಯಲ್ಲಿ ಯಾವುದೇ ಘಟನೆ ನಡೆದಿರುವ ಬಗ್ಗೆ ಈವರೆಗಿನ ತನಿಖೆಯಲ್ಲಿ ದಾಖಲಿಸಲಾದ ಹೇಳಿಕೆಗಳು ಹಾಗೂ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳು ದೃಢಪಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ವಿಡಿಯೋದಲ್ಲಿ ಕಾಣಿಸಿಕೊಂಡಿರುವ ಎಲ್ಲಾ ವ್ಯಕ್ತಿಗಳನ್ನು ಗುರುತಿಸಲಾಗಿದ್ದು, ಅವರ ವಿಚಾರಣೆಯನ್ನು ಸಮಗ್ರವಾಗಿ ನಡೆಸಲಾಗಿದೆ. ಕೆಲವರನ್ನು ಒಂದಕ್ಕಿಂತ ಹೆಚ್ಚು ಬಾರಿ ವಿಚಾರಣೆಗೊಳಪಡಿಸಲಾಗಿದೆ. ಅವರ ಹೇಳಿಕೆಗಳು ಹಾಗೂ ಈವರೆಗೆ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ, ವಿಡಿಯೋದಲ್ಲಿ ಉಲ್ಲೇಖಿಸಲಾದ ಅಥವಾ ಸೂಚ್ಯವಾಗಿ ಆರೋಪಿಸಲಾದ ವ್ಯಕ್ತಿಗಳ ವಿರುದ್ಧದ ಆರೋಪಗಳು ಸುಳ್ಳು ಹಾಗೂ ಕಟ್ಟುಕಥೆಯಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಸ್ಟಿಂಗ್ ಆಪರೇಷನ್: ಮತ್ತೊಮ್ಮೆ ಸಿದ್ದರಾಮಯ್ಯ ಹೇಳಿಕೆ ಪಡೆಯಲು ಸಿಸಿಬಿ ಚಿಂತನೆ

ಸ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ತನಿಖೆ ಮತ್ತೊಂದು ಹಂತಕ್ಕೆ ತಲುಪಿದೆ. ಈ ವಿಡಿಯೋ ಬಳಸಿ ತಮ್ಮನ್ನು ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವತಃ ಆರೋಪಿಸಿದ್ದರು. ಈ ಕುರಿತು ತನಿಖೆ ನಡೆಸಿದ ಸಿಸಿಬಿ ಅಧಿಕಾರಿಗಳು ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ನೀಡಿದ್ದರು. ಆದರೂ ಪೊಲೀಸ್ ಅಧಿಕಾರಿಗಳು ಈಗ ಮತ್ತೊಮ್ಮೆ ಅವರ ಹೇಳಿಕೆ ಪಡೆಯುವ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಸ್ಟಿಂಗ್ ಮಾಡಿದ ತಂಡದಿಂದ ನಿಜವಾಗಿಯೂ ಬ್ಲ್ಯಾಕ್‌ಮೇಲ್ ಯತ್ನ ನಡೆದಿದೆಯೇ ಎಂಬ ಶಂಕೆ ಮೂಡಿದ್ದು, ಸೈಬರ್ ಪೊಲೀಸರು ಈ ದಿಕ್ಕಿನಲ್ಲಿ ಮುಂದಿನ ಹೆಜ್ಜೆ ಇಡಲು ನಿರ್ಧರಿಸಿದ್ದಾರೆ. 2011ರಲ್ಲಿ ನಡೆದ ಸಂಭಾಷಣೆಯ ವಿಡಿಯೋ 2023ರಲ್ಲಿ ಹೊರಬಂದಿತ್ತು. ಅಂದಿನಿಂದ ಈವರೆಗೆ ಸುಮಾರು ಎರಡೂವರೆ ವರ್ಷಗಳ ಕಾಲ ಯಾಕೆ ಮೌನವಾಗಿದ್ದರು, ಈ ಅವಧಿಯಲ್ಲಿ ಹಣದ ಬೇಡಿಕೆ ಇಟ್ಟಿದ್ದರಾ, ರಾಜಕೀಯ ಬೆದರಿಕೆ ಹಾಕಲಾಗಿತ್ತಾ, ವಿಡಿಯೋ ಬಗ್ಗೆ ಯಾರೊಂದಿಗಾದರೂ ಮಾತುಕತೆ ನಡೆದಿತ್ತಾ ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕಲು ತನಿಖೆ ನಡೆಯುತ್ತಿದೆ. ಈಗಾಗಲೇ ಅನುಮಾನದಲ್ಲಿರುವ ಎಲ್ಲರ ವಿಚಾರಣೆ ಮುಗಿದಿದೆ. ದೂರು ದಾಖಲಾದ ಬಳಿಕ ಒಮ್ಮೆ ಸಿದ್ದರಾಮಯ್ಯ ಅವರ ಹೇಳಿಕೆ ಪಡೆಯಲಾಗಿತ್ತು. ಆದರೆ ಆಗ ಅವರು ಯಾವುದೇ ಹೆಸರನ್ನು ಪ್ರಸ್ತಾಪಿಸಿರಲಿಲ್ಲ. ಹೀಗಾಗಿ ಮರು ಹೇಳಿಕೆ ದಾಖಲಿಸಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಕೇಂದ್ರ ಕಾರಾಗೃಹದ ವಿಸ್ತರಣೆ, ಭದ್ರತೆಗಾಗಿ ಭೂಸ್ವಾಧೀನ ಕ್ರಮ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು, ಅ.30: ಪರಪ್ಪನ ಅಗ್ರಹಾರದಲ್ಲಿ, ಅತಿಯಾದ ಜನಸಂದಣಿಯಿರುವ ಕಾರಣ ಕೇಂದ್ರ ಕಾರಾಗೃಹದ ವಿಸ್ತರಣೆ ಮತ್ತು ಭದ್ರತೆಗಾಗಿ (ಇದರಲ್ಲಿ ಬಫರ್ ವಲಯ ಮತ್ತು ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣವೂ ಸೇರಿದೆ) ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವನ್ನು ಕರ್ನಾಟಕ ಹೈಕೋರ್ಟ್ ಎತ್ತಿಹಿಡಿದಿದೆ.

ಕಾರಾಗೃಹ ಮೂಲಸೌಕರ್ಯಗಳ ಸ್ಥಾಪನೆ ಮತ್ತು ವಿಸ್ತರಣೆಯು ರಾಜ್ಯದ ಪ್ರಮುಖ ಜವಾಬ್ದಾರಿಯಾಗಿದೆ. ಇದು ಕೇವಲ ಕೈದಿಗಳಿಗೆ ವಸತಿ ಕಲ್ಪಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ, ಕೈದಿಗಳ ಸುರಕ್ಷತೆ (ಕಸ್ಟೋಡಿಯಲ್ ಸೆಕ್ಯುರಿಟಿ), ಪರಿಣಾಮಕಾರಿ ಕಾರಾಗೃಹ ಆಡಳಿತ, ಕೈದಿಗಳ ಪ್ರತ್ಯೇಕೀಕರಣ, ಸೂಕ್ತ ಪೂರಕ ಸೌಲಭ್ಯಗಳು ಮತ್ತು ಸುರಕ್ಷಿತ ವಾತಾವರಣವನ್ನು ಕಾಪಾಡುವಂತಹ ವ್ಯಾಪಕ ಅಂಶಗಳನ್ನು ಒಳಗೊಂಡಿದೆ. ಈ ಉದ್ದೇಶಗಳಿಗಾಗಿ ಹೆಚ್ಚುವರಿ ಭೂಮಿಯ ಅಗತ್ಯವಿದೆ. ಕೇವಲ ಕಾರಾಗೃಹದ ಆವರಣದಲ್ಲಿರುವ ಈಗಿನ ಕಟ್ಟಡಗಳಿಗೆ ಮಾತ್ರ ಸೀಮಿತವಾಗಿ ಯೋಚಿಸಬಾರದು. ಬದಲಾಗಿ, ಸಂಸ್ಥೆಯ ಒಟ್ಟಾರೆ ಕಾರ್ಯನಿರ್ವಹಣೆಯ ಅವಶ್ಯಕತೆಗಳು ಮತ್ತು ದೀರ್ಘಕಾಲೀನ ಕಾರ್ಯಾಚರಣೆಯ ಅಗತ್ಯಗಳ ಹಿನ್ನೆಲೆಯಲ್ಲಿ ಇದನ್ನು ಪರಿಗಣಿಸಬೇಕು" ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಮಾರ್ಚ್ 25, 2013 ರಂದು ವಿಶೇಷ ಭೂಸ್ವಾಧೀನ ಅಧಿಕಾರಿ ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಿರುವಂತೆ, ಅಧಿಸೂಚನೆ ಹೊರಡಿಸಲಾದ ಈ ಭೂಮಿಯಲ್ಲಿ ಈಗಾಗಲೇ ನಿರ್ಮಿಸಲಾಗಿರುವ ಆರ್‌ಸಿಸಿ ಕಟ್ಟಡಗಳು, ವಸತಿ ಬಡಾವಣೆಗಳು, ಎಂಜಿನಿಯರಿಂಗ್ ಕಾರ್ಯಾಗಾರಗಳು ಮತ್ತು ಅಭಿವೃದ್ಧಿಪಡಿಸಿದ ನಿವೇಶನಗಳ ವಿಷಯದಲ್ಲಿ, ಕಾನೂನುಬದ್ಧವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ನ್ಯಾಯಾಲಯ ನಿರ್ದೇಶಿಸಿದೆ.

ನ್ಯಾಯಮೂರ್ತಿ ಡಿ.ಕೆ. ಸಿಂಗ್ ಮತ್ತು ನ್ಯಾಯಮೂರ್ತಿ ಎಚ್. ಶಾಂತಿ ಭೂಷಣ್ ಅವರಿದ್ದ ವಿಭಾಗೀಯ ಪೀಠವು ಬುಧವಾರ (ಅಕ್ಟೋಬರ್ 28) ಈ ಆದೇಶವನ್ನು ನೀಡಿದೆ.

ಭೂಮಾಲೀಕರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆಯಲ್ಲಿ, ಏಕಸದಸ್ಯ ಪೀಠವು ಭೂಮಾಲೀಕರ ಪರವಾಗಿ ಮೇ 2, 2025 \ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಗಳನ್ನು ಪುರಸ್ಕರಿಸುವ ಮೂಲಕ ನ್ಯಾಯಾಲಯವು ಈ ಆದೇಶವನ್ನು ಹೊರಡಿಸಿದೆ.

ಅರ್ಜಿದಾರರು ಬೆಂಗಳೂರು ದಕ್ಷಿಣ ತಾಲೂಕಿನ ಬೇಗೂರು ಹೋಬಳಿಯಲ್ಲಿರುವ ನಾಗನಾಥಪುರ ಗ್ರಾಮದಲ್ಲಿ, ವಿವಿಧ ಸರ್ವೆ ನಂಬರ್‌ಗಳನ್ನು ಹೊಂದಿರುವ 19 ಎಕರೆ 18 ಗುಂಟೆ ಜಮೀನನ್ನು ಹೊಂದಿದ್ದರು. ರಾಜ್ಯ ಸರ್ಕಾರವು 2013ರಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿತ್ತು. ಇದನ್ನು ಅದೇ ವರ್ಷ ಏಕಸದಸ್ಯ ಪೀಠದ ಮುಂದೆ ಪ್ರಶ್ನಿಸಲಾಯಿತು ಮತ್ತು ಸದರಿ ಆದೇಶದ ಮೂಲಕ ಏಕಸದಸ್ಯ ಪೀಠವು ಅದನ್ನು ರದ್ದುಗೊಳಿಸಿತು. ಆದ್ದರಿಂದ, ರಾಜ್ಯ ಸರ್ಕಾರವು ಮೇಲ್ಮನವಿಗಳನ್ನು ಸಲ್ಲಿಸಿದೆ.

ಕೆಪಿಎಸ್‌ಸಿ ನೇಮಕಾತಿ ಹಗರಣದ ತನಿಖೆ

ಎಸ್‌ಐಟಿಗೆ ಪೊಲೀಸ್ ಠಾಣೆ ಸ್ಥಾನಮಾನ

ಬೆಂಗಳೂರು, ಅ.30: ಕೆಪಿಎಸ್‌ಸಿ ನೇಮಕಾತಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊಕದ್ದಮೆ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಇದಕ್ಕೆ ಪೊಲೀಸ್ ಠಾಣೆ ಸ್ಥಾನಮಾನ ನೀಡಿ ಸರ್ಕಾರ ಆದೇಶಿಸಿದೆ. ಎಸ್‌ಐಟಿ ರಚನೆ ಬಗ್ಗೆ ಹೈಕೋರ್ಟ್ ಗರಂ ಆಗಿತ್ತು. ವಿಶೇಷ ತನಿಖಾ ತಂಡ ರಚಿಸಿ ಸಕ್ಷಮ ಪೊಲೀಸ್ ಠಾಣೆ ರೂಪಿಸುವಲ್ಲಿ ರಾಜ್ಯ ಸರ್ಕಾರದ ವಿಳಂಬದ ಕ್ರಮವನ್ನು ಹೈಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತ್ತು. ಇದ ರಿಂದಾಗಿ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿದ್ದು, ಇದಕ್ಕೆ ಪೊಲೀಸ್ ಠಾಣೆ ಸ್ಥಾನಮಾನ ನೀಡಲಾಗಿದೆ. ಎಸ್‌ಐಟಿ ಮುಖ್ಯಸ್ಥರ ನೇಮಕಾತಿಯನ್ನು ಸೋಮವಾರದಂದು ಅಂತಿಮ ಗೊಳಿಸಲಾಗುತ್ತದೆ.

ಎಸ್‌ಐಟಿ ಮುಖ್ಯಸ್ಥ ಸ್ಥಾನಕ್ಕೆ ಮತ್ತು ಇನ್ನೊಬ್ಬ ಸದಸ್ಯರ ಸ್ಥಾನಕ್ಕೆ ಆರ್. ಹಿತೇಂದ್ರ, ಬಿ.ಕೆ. ಸಿಂಗ್, ಎಸ್. ಮುರುಗನ್ ಮತ್ತು ಸೌಮೆಂದು ಮುಖರ್ಜಿ ಸೇರಿದಂತೆ ನಾಲ್ಕು ಎಡಿಜಿಪಿ ಮಟ್ಟದ ಅಧಿಕಾರಿಗಳ ಹೆಸರುಗಳನ್ನು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಸಲ್ಲಿಸಿದೆ ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಯ ಕೀ–ಆನ್ಸರ್ ಸೋರಿಕೆ, ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಶಿವಶಂಕರಪ್ಪ ಎಸ್. ಸಾಹುಕಾರ್, ಸದಸ್ಯೆ ಬಿ.ವಿ. ಗೀತಾ, ಪರೀಕ್ಷಾ ನಿಯಂತ್ರಕರಾಗಿದ್ದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಹಾಗೂ ಮಧ್ಯವರ್ತಿ ಬಸವರಾಜ ಕಣ್ಣಾಳೆ ಅವರ ಬಂಧನ ಸೇರಿದಂತೆ ಹಲವು ಅಕ್ರಮಗಳ ತನಿಖೆಯನ್ನು ಈ ಎಸ್‌ಐಟಿ ಮುಂದುವರಿಸಲಿದೆ.

ಮಾಫಿ ಸಾಕ್ಷಿ ಪ್ರದೋಶ್‌ಗೆ ನ್ಯಾಯಾಲಯದಲ್ಲಿ ಹಿನ್ನಡೆ: ಪಿತೃಕಾರ್ಯಕ್ಕೆ ಮಧ್ಯಂತರ ಜಾಮೀನು ಕೋರಿದ್ದ ಅರ್ಜಿ ವಜಾ

ಬೆಂಗಳೂರು, ಅ.30: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿರುವ ಆರೋಪಿ ಪ್ರದೋಶ್‌ಗೆ ನ್ಯಾಯಾಲಯದಿಂದ ಹಿನ್ನಡೆಯಾಗಿದೆ. ತನ್ನ ತಂದೆಯ 2ನೇ ವರ್ಷದ ಪಿತೃ ಕಾರ್ಯ ನೆರವೇರಿಸಲು ಮೂರು ವಾರಗಳ ಮಧ್ಯಂತರ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಬೆಂಗಳೂರಿನ 59ನೇ ಸಿಸಿಹೆಚ್ ನ್ಯಾಯಾಲಯ ವಜಾಗೊಳಿಸಿದೆ. ನ್ಯಾಯಾಧೀಶರಾದ ಮಡಿವಾಳಪ್ಪ ಸಾಂಬ್ರಾಣಿ ಅವರು ಈ ಆದೇಶ ಹೊರಡಿಸಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಧ್ಯಂತರ ಜಾಮೀನು ಕೋರಿ ಆರೋಪಿ ಪ್ರದೋಷ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಬೆಂಗಳೂರಿನ 59ನೇ ಸಿಸಿಹೆಚ್ ನ್ಯಾಯಾಲಯವು ಈ ಆದೇಶ ಹೊರಡಿಸಿದ್ದು, ನ್ಯಾಯಾಧೀಶರಾದ ಮಡಿವಾಳಪ್ಪ ಸಾಂಬ್ರಾಣಿ ಅವರು ಅರ್ಜಿಯನ್ನು ವಜಾಗೊಳಿಸಿದ್ದಾರೆ.

ಪ್ರದೋಷ್, ತನ್ನ ತಂದೆಯ 2ನೇ ವರ್ಷದ ಪಿತೃ ಕಾರ್ಯದಲ್ಲಿ ಭಾಗವಹಿಸಬೇಕಿರುವ ಹಿನ್ನೆಲೆಯಲ್ಲಿ ಮೂರು ವಾರಗಳ ಕಾಲ ಮಧ್ಯಂತರ ಜಾಮೀನು ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ಪ್ರದೋಷ್ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಗೆ ನಟ ದರ್ಶನ್ ಪರ ವಕೀಲ ಹಷ್ಮತ್ ಪಾಷಾ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ವ್ಯಕ್ತಿಯೊಬ್ಬರು ಮೃತಪಟ್ಟ ಸಂದರ್ಭದಲ್ಲಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವ ಬಗ್ಗೆ ಕಾನೂನಿನಲ್ಲಿ ಅವಕಾಶವಿದೆ. ಆದರೆ, ಪ್ರತಿವರ್ಷ ನಡೆಯುವ ಪಿತೃ ಕಾರ್ಯದಲ್ಲಿ ಭಾಗವಹಿಸಲು ಮಧ್ಯಂತರ ಜಾಮೀನು ನೀಡುವ ಬಗ್ಗೆ ಯಾವುದೇ ಕಾನೂನು ಇಲ್ಲ ಎಂದು ವಾದಿಸಿದ್ದರು. ಇನ್ನು ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರದೋಷ್ ಮಾಫಿ ಸಾಕ್ಷಿಯಾಗಿದ್ದು, ಆತನ ವಿರುದ್ಧದ ವಿಚಾರಣೆ ಪೂರ್ಣಗೊಂಡಿಲ್ಲ. ಇಂತಹ ಸಂದರ್ಭದಲ್ಲಿ ಮಧ್ಯಂತರ ಜಾಮೀನು ನೀಡುವುದು ಸೂಕ್ತವಲ್ಲ ಎಂಬ ಆಕ್ಷೇಪವೂ ವಿಚಾರಣೆ ವೇಳೆ ವ್ಯಕ್ತವಾಗಿತ್ತು. ಈ ಎಲ್ಲ ಬೆಳವಣಿಗೆಗಳ ನಡುವೆ ಪ್ರದೋಷ್ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ನಟ ಧನ್ವೀರ್ ಗೌಡ ವಿರುದ್ಧ ಎಫ್‌ಐಆರ್ ದಾಖಲು

ನಟ ಧನ್ವೀರ್ ಗೌಡ ಅವರ ಸುತ್ತ ವಿವಾದಗಳ ಸರಣಿ ಮುಂದುವರಿದಿದೆ. ನಟನ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಈ ಹಿನ್ನೆಲೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ್ದಾರೆ. ಚಾಮರಾಜಪೇಟೆ, ರಾಜರಾಜೇಶ್ವರಿ ನಗರ ಹಾಗೂ ಬಸವೇಶ್ವರ ನಗರ ಪೊಲೀಸ್ ಠಾಣೆಗಳ ಪೊಲೀಸರು ವಿಚಾರಣೆಗೆ ಹಾಜರಾಗುವಂತೆ ಧನ್ವೀರ್ ಗೌಡ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಜೀವ ಬೆದರಿಕೆ ಹಾಕಿರುವುದು, ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಸೇರಿದಂತೆ ವಿವಿಧ ಆರೋಪಗಳ ಹಿನ್ನೆಲೆಯಲ್ಲಿ ರಾಜರಾಜೇಶ್ವರಿ ನಗರ ಮತ್ತು ಬಸವೇಶ್ವರ ನಗರ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರ ಮ್ಯಾನೇಜರ್ ನಾಗರಾಜ್ ನೀಡಿದ ದೂರಿನ ಆಧಾರದ ಮೇಲೆ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಒಂದು ಎಫ್‌ಐಆರ್ ದಾಖಲಾಗಿದೆ. ಮತ್ತೊಂದೆಡೆ, ನಿರ್ಮಾಪಕ ಭೋಜರಾಜ್ ರೈ ನೀಡಿದ ದೂರಿನ ಮೇರೆಗೆ ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ. ಒಟ್ಟಿನಲ್ಲಿ, ಧನ್ವೀರ್ ಗೌಡ ವಿರುದ್ಧ ದಾಖಲಾಗಿರುವ ಪ್ರತ್ಯೇಕ ಪ್ರಕರಣಗಳ ವಿಚಾರವಾಗಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿರುವುದು ಇದೀಗ ಚರ್ಚೆಗೆ ಗ್ರಾಸವಾಗಿದೆ.

71ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭ

ದೂರದರ್ಶನ ಚಂದನ ವಾಹಿನಿಯಲ್ಲಿ ನೇರ ಪ್ರಸಾರ

ಬೆಂಗಳೂರು, ಅ.30: 71ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವು ನವೆಂಬರ್ 1 ರಂದು ಬೆಳಿಗ್ಗೆ 9:00 ಗಂಟೆಗೆ ಬೆಂಗಳೂರಿನ ಕಂಠೀರವ ಹೊರಾಂಗಣ ಕ್ರೀಡಾಂಗಣ ದಲ್ಲಿ ವೈಭವದಿಂದ ನಡೆಯಲಿದೆ.

ಸಿಎಂ ಡಿ.ಕೆ.ಶಿವಕುಮಾರ್ ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಅಧಿಕೃತ ಚಾಲನೆ ನೀಡಲಿದ್ದಾರೆ.

ವಿದ್ಯಾರ್ಥಿಗಳ ಸಾಂಸ್ಕೃತಿಕ ವೈಭವ:

ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ (ಪಿಯು) ಕಾಲೇಜುಗಳ 25,000 ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಕಲಾತಂಡಗಳ ಪ್ರದರ್ಶನ: ಪೊಲೀಸ್ ಬ್ಯಾಂಡ್, ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ವಿವಿಧ ಜಾನಪದ ಕಲಾ ನೃತ್ಯ ತಂಡಗಳಿಂದ ಆಕರ್ಷಕ ಕಾರ್ಯಕ್ರಮಗಳು ಮೂಡಿಬರಲಿವೆ.

ಈ ಸಮಸ್ತ ರಾಜ್ಯೋತ್ಸವ ಸಂಭ್ರಮದ ನೇರಪ್ರಸಾರವು ನವೆಂಬರ್ 1 ರ ಬೆಳಿಗ್ಗೆ 9:00 ಗಂಟೆಯಿಂದ ಕಾರ್ಯಕ್ರಮ ಮುಕ್ತಾಯದವರೆಗೆ ದೂರದರ್ಶನ 'ಚಂದನ' ವಾಹಿನಿ ಹಾಗೂ ದೂರದರ್ಶನ ಚಂದನ ವಾಹಿನಿಯ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿರಲಿದೆ.

ಕರ್ತವ್ಯ ಆಪ್ ಮೂಲಕವೇ ಮುಟ್ಟಿನ ರಜೆ ಪಡೆಯಲು ಅವಕಾಶ

ಬೆಂಗಳೂರು, ಅ.30: ರಾಜ್ಯದ ಮಹಿಳಾ ಸರ್ಕಾರಿ ನೌಕರರಿಗೆ ಕರ್ನಾಟಕ ಸರ್ಕಾರ ಭರ್ಜರಿ ಸಿಹಿ ಸುದ್ದಿ ನೀಡಿದೆ. ಮುಟ್ಟಿನ ದಿನಗಳಲ್ಲಿ ಕಚೇರಿಗೆ ಬಂದು ಅನುಭವಿಸುವ ಕಷ್ಟ, ಸುಸ್ತು ಹಾಗೂ ಮಾನಸಿಕ ಕಿರಿಕಿರಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈಗಾಗಲೇ ಪ್ರತಿ ತಿಂಗಳು ಒಂದು ದಿನದ 'ಮುಟ್ಟಿನ ರಜೆ ಘೋಷಿಸಿತ್ತು. ಆದರೆ, ಈ ರಜೆ ಪಡೆಯಲು ಮೇಲಧಿಕಾರಿಗಳ ಅನುಮತಿಗಾಗಿ ಕಾಯಬೇಕಾದ ಕಿರಿಕಿರಿ ಇತ್ತು. ಈಗ ಈ ಜಂಜಾಟಕ್ಕೆ ರಾಜ್ಯ ಸರ್ಕಾರ ತಿಲಾಂಜಲಿ ಹಾಡಿದೆ.

ಮಹಿಳಾ ನೌಕರರು ಇನ್ಮುಂದೆ ತಮ್ಮ 'ಕರ್ತವ್ಯ' ಆಪ್ ಮೂಲಕ ರಜೆ ಕೋರಿದರೆ, ಅಧಿಕಾರಿಗಳ ಅನುಮತಿಗೂ ಕಾಯದೆ ಸ್ವಯಂ ಚಾಲಿತವಾಗಿ ರಜೆ ಮಂಜೂರಾಗಲಿದೆ. ಈ ಸಂಬಂಧ ಪ್ರಜಾಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಮಹತ್ವದ ಸುತ್ತೋಲೆ ಹೊರಡಿಸಿದ್ದಾರೆ.

ಸರ್ಕಾರ, ಮಹಿಳೆಯರಿಗೆ ಮುಟ್ಟಿನ ರಜೆ ಘೋಷಿಸಿದ್ದರೂ, ಕೆಲ ಕಚೇರಿಗಳಲ್ಲಿ ರಜೆ ಮಂಜೂರು ಮಾಡುವ ಅಧಿಕಾರಿಗಳು ಅನಗತ್ಯ ತಗಾದೆ ತೆಗೆಯುತ್ತಿದ್ದರು.

"ಹಿಂದೆ ಇಂಥ ನಿಯಮ ಇರಲಿಲ್ಲ, ಈಗ್ಯಾಕೆ ಬೇಕು" ಎಂದು ಪ್ರಶ್ನಿಸುವುದು, ಅರ್ಜಿಗಳನ್ನು ಕ್ಲಿಯರ್ ಮಾಡದೆ ತಡೆಹಿಡಿಯುವುದು ಅಥವಾ ಮೆಡಿಕಲ್ ಸರ್ಟಿಫಿಕೇಟ್ ಕೇಳಿ ನೌಕರರನ್ನು ಸತಾಯಿಸುವುದು ಸರ್ಕಾರದ ಗಮನಕ್ಕೆ ಬಂದಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಅಧಿಕಾರಿಗಳ ಮೂಗುದಾರಕ್ಕೆ ಕತ್ತರಿ ಹಾಕಿದೆ.

ಯಾವುದೇ ವೈದ್ಯಕೀಯ ಪ್ರಮಾಣ ಪತ್ರದ ಅಗತ್ಯವಿಲ್ಲದೆ, ನಿಗದಿತ ನಿಯಮ ಪಾಲಿಸಿ ಅರ್ಜಿ ಸಲ್ಲಿಸಿದರೆ ಅದನ್ನು ತಿರಸ್ಕರಿಸುವ ಯಾವುದೇ ವಿವೇಚನಾಧಿಕಾರ ಅಧಿಕಾರಿಗಳಿಗೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ನ.1 ರಂದು ಗಂಗಾವಳಿಯಲ್ಲಿ ಶಿವಗಂಗಾ ನಿಶ್ಚಿತಾರ್ಥ

ಕಾರವಾರ : ಪೌರಾಣಿಕ ಹಿನ್ನೆಲೆಯುಳ್ಳ ಗಂಗೆ ಹಾಗೂ ಶಿವನ ವಿವಾಹ ಕಾರ್ಯವು ಪ್ರತಿವರ್ಷ ನಡೆಯುತ್ತ ಬಂದಿದ್ದು, ನ.1 ರಂದು ಬೆಳಗ್ಗೆ 10 ಗಂಟೆಯಿಂದ ಗೋಕರ್ಣ ಸಮೀಪದ ಗಂಗಾವಳಿಯಲ್ಲಿ ನಡೆಯುವ ಶಿವಗಂಗಾ ನಿಶ್ಚಿತಾರ್ಥದ ನಿಮಿತ್ತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಕಲಬುರಗಿಯ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಸ್.ಕೆ.ಮೇಲ್ಕಾರ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಗಂಗಾಷ್ಟಮಿಯಂದು ನಿಶ್ಚಿತಾರ್ಥ ನಡೆದು ನಂತರ ದೀಪಾವಳಿ ಬಲಿ ಪಾಡ್ಯಮಿಯಂದು ಶಿವ ಗಂಗಾ ವಿವಾಹ ಸಾಂಪ್ರದಾಯಿಕ ವಿಶಿಷ್ಟ ಕಾರ್ಯಕ್ರಮ ಜರುಗಲಿದೆ. ಈ ಸಂದರ್ಭದಲ್ಲಿ ಸಭಾ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ಮತ್ತು ಗಂಗಾ ಮಾತಾ ದೇವಾಲಯ ಸಮಿತಿಯಿಂದ ಶಿವಗಂಗಾ ಕಲ್ಯಾಣೋತ್ಸವ ಪ್ರಯುಕ್ತ ಜಾನಪದ ಯಕ್ಷಗಾನ ಸಾಂಸ್ಕೃತಿಕ ಹಾಗೂ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿಧಾನಸಭೆ ಉಪಾಧ್ಯಕ್ಷ ಮಂಕಾಳ ವೈದ್ಯ, ಶಾಸಕ ದಿನಕರ ಶೆಟ್ಟಿ ಸೇರಿ ಹಲವರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಡಾ.ಟಿ.ಡಿ.ರಾಜು, ಗಂಗಾಮಾತಾ ದೇವಸ್ಥಾನ ಸಮಿತಿಯ ಕಾರ್ಯದರ್ಶಿ ಪಾಂಡುರಂಗ ಅಂಬಿಗ, ಎಸ್. ಕೆ.ಹರಿಕಾಂತ, ಮೀನುಗಾರರ ಮುಖಂಡರಾದ ಡಾ.ಹರಿಹರ ಹರಿಕಾಂತ, ಬಾಬು ಅಂಬಿಗ ಇತರರಿದ್ದರು.

ಮತಾಂತರ ನಿಷೇಧ ಕಾಯ್ದೆ ರದ್ದು, ದ್ವೇಷಭಾಷಣ ಕಾನೂನು ಬಿಗಿಗೊಳಿಸಲು ಒತ್ತಾಯ

ನ.9ರಂದು ಫ್ರೀಡಂ ಪಾರ್ಕ್‌ನಲ್ಲಿ ಹಕ್ಕೊತ್ತಾಯ ಸಮಾವೇಶ: ಆರ್ಚ್ ಬಿಷಪ್ ಡಾ. ಪೀಟರ್ ಮಚಾಡೊ

ಬೆಂಗಳೂರು, ಅ.30: ಮುಂದಿನ ಚಳಿಗಾಲದ ವಿಧಾನಮಂಡಲ ಅಧಿವೇಶನದಲ್ಲಿ ಸಂವಿಧಾನ ವಿರೋಧಿ ಮತಾಂತರ ನಿಷೇಧ ಕಾಯ್ದೆ ರದ್ದುಗೊಳಿಸಬೇಕು. ದ್ವೇಷ ಭಾಷಣ ಕಾನೂನು ಮತ್ತಷ್ಟು ಬಿಗಿಗೊಳಿಸಬೇಕು ಸೇರಿ ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ನ.9ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಬೃಹತ್ ಹಕ್ಕೊತ್ತಾಯ ಸಮಾವೇಶ ನಡೆಸಲಾಗುವುದು ಎಂದು ಬೆಂಗಳೂರಿನ ಆರ್ಚ್ ಬಿಷಪ್ ಡಾ.ಪೀಟರ್ ಮಚಾಡೊ ತಿಳಿಸಿದ್ದಾರೆ.

ನಗರದ ಪಾಲನಾ ಭವನದ ಸಭಾಂಗಣ ದಲ್ಲಿ ಕರ್ನಾಟಕ ರಾಜ್ಯ ಮುಸ್ಲಿಮ್ ಒಕ್ಕೂಟ, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ, ದಲಿತ ಸಂಘರ್ಷ ಸಮಿತಿ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರೊಂದಿಗೆ ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ–2022 (ಮತಾಂತರ ನಿಷೇಧ ಕಾಯ್ದೆ) ಸಂವಿಧಾನ ವಿರೋಧಿ. ಇದನ್ನು ಹಿಂಪಡೆಯಲಾಗುವುದು ಎಂದು ಸ್ವತಃ ಕಾಂಗ್ರೆಸ್ ಪಕ್ಷ ಭರವಸೆ ನೀಡಿತ್ತು. ಜತೆಗೆ, ವಿಧಾನ ಪರಿಷತ್ತಿನಲ್ಲಿ ತಮ್ಮ ಬಲ ಹೆಚ್ಚಾದರೆ ಕಡ್ಡಾಯವಾಗಿ ಕಾಯ್ದೆ ರದ್ದುಗೊಳಿಸುತ್ತೇವೆ ಎಂದಿದ್ದರು. ಅದರಂತೆ ಈಗ ಚಳಿಗಾಲಯದ ವಿಧಾನ ಮಂಡಲ ಅಧಿವೇಶನದಲ್ಲಿ ಈ ಕಾಯ್ದೆ ವಾಪಸ್ಸು ಪಡೆಯಬೇಕು ಎಂದು ಒತ್ತಾಯಿಸಿದರು.

ಇದು ಕೇವಲ ಧಾರ್ಮಿಕ ಮತಾಂತರವನ್ನು ನಿಯಂತ್ರಿಸುವ ಕಾನೂನು ಮಾತ್ರವಲ್ಲ. ಬದಲಾಗಿ ಮತಾಂತರ ನಿಷೇಧ ಕಾಯ್ದೆಯಿಂದ ಸಮಾಜದಲ್ಲಿನ ಶಾಂತಿ, ಸುವ್ಯವಸ್ಥೆ ಹಾಗೂ ಸೌಹಾರ್ದಕ್ಕೆ ಧಕ್ಕೆ ಉಂಟಾಗುತ್ತಿದೆ. ಈ ಕಾಯ್ದೆಯನ್ನು ದುರುಪಯೋಗಪಡಿಸಿಕೊಂಡು ಕ್ರೈಸ್ತರ ಪ್ರಾರ್ಥನಾ ಸಭೆಗಳು, ಪಾದ್ರಿಗಳ ಮೇಲೆ ದಾಳಿ ಮಾಡಿ, ಕಿರುಕುಳ ನೀಡಲಾಗುತ್ತಿದೆ. ಕೆಲವೊಂದು ಕಡೆಗಳಲ್ಲಿ ದೌರ್ಜನ್ಯದ ವಿರುದ್ಧ ದೂರು ಸಲ್ಲಿಕೆ ಮಾಡಿದರೂ ಪೊಲೀಸರು ಸ್ವೀಕಾರ ಮಾಡುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮುಸ್ಲಿಮ್ ಒಕ್ಕೂಟದ ಸಂಚಾಲಕ ಸುಹೇಲ್ ಅಹ್ಮದ್ ಮರೂರ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮುನ್ನವೇ ತನ್ನ ಪ್ರಣಾಳಿಕೆಯಲ್ಲಿ ಹಲವು ಭರವಸೆಗಳನ್ನು ಘೋಷಣೆ ಮಾಡಿತ್ತು. ಆದರೆ, ಮೂರು ವರ್ಷ ಕಳೆದರೂ ಅಲ್ಪಸಂಖ್ಯಾತ, ದೀನ ದಲಿತರ ಬೇಡಿಕೆಗಳಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ. ಅದರಲ್ಲೂ 'ಮುಸ್ಲಿಮ್ ಮೀಸಲಾತಿ 2ಬಿ' ಸೇರಿದಂತೆ ಇನ್ನಿತರೆ ಘೋಷಣೆಗಳು ಬಾಕಿ ಉಳಿದಿವೆ. ಈ ನಿಟ್ಟಿನಲ್ಲಿ ನ.9ರಂದು ನಡೆಯುವ ಬೃಹತ್ ಹಕ್ಕೊತ್ತಾಯ ಸಮಾವೇಶದಲ್ಲಿ ಪ್ರತಿಯೊಬ್ಬರು ಪಾಲ್ಗೊಳ್ಳಬೇಕು ಎಂದು ಅವರು ಕರೆ ನೀಡಿದರು.

ಪ್ರಮುಖ ಹಕ್ಕೊತ್ತಾಯ– ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ–2022 (ಮತಾಂತರ ನಿಷೇಧ ಕಾಯ್ದೆ) ಹಿಂಪಡೆಯಬೇಕು. ಮುಸ್ಲಿಮ್ 2ಬಿ ಮೀಸಲಾತಿ ಮರುಸ್ಥಾಪನೆ ಆಗಬೇಕು. ದ್ವೇಷ ಭಾಷಣ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು., ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳಿಗೆ ಕಡಿವಾಣ ಹಾಕಬೇಕು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಮುಸ್ಲಿಮ್ ಒಕ್ಕೂಟದ ಸಂಚಾಲಕ ಮುಹಮ್ಮದ್ ಯಾಹ್ಯಾ ದಾಮುದಿ, ಯುವ ಹೋರಾಟಗಾರಾದ ಸರೋವರ್ ಬೆಂಕಿಕೆರೆ, ಐಶ್ವರ್ಯಾ ಉಪಸ್ಥಿತರಿದ್ದರು.

ಯೋಗ ಕೇವಲ ವ್ಯಾಯಾಮವಲ್ಲ, ವ್ಯಕ್ತಿತ್ವ ವಿಕಸನದ ಮಾರ್ಗ

ವಸುಧೈವ ಕುಟುಂಬಕಂ–ಭಾರತದ ಪವಿತ್ರ ಸಂದೇಶ ಯೋಗದ ಮೂಲಕ ಸಾಬೀತು: ಆಚಾರ್ಯ ಮಹಾಮಂಡಲೇಶ್ವರ



ಬೆಂಗಳೂರು, ಅ.30: ಇಡೀ ಜಗತ್ತು ಒಂದೇ ಕುಟುಂಬ ಅಂದರೆ 'ವಸುಧೈವ ಕುಟುಂಬಕಮ್' ಎಂಬ ಭಾರತದ ಪವಿತ್ರ ಸಂದೇಶ ಇಂದು ಯೋಗದ ಮೂಲಕ ಸಾಬೀತಾಗುತ್ತಿದೆ, ಯೋಗವು ಕೇವಲ ವ್ಯಾಯಾಮವಲ್ಲ, ಅದು ಮಾನವನ ಸಂಪೂರ್ಣ ವ್ಯಕ್ತಿತ್ವವನ್ನು ವಿಕಸನಗೊಳಿಸುವ ಮಾರ್ಗವಾಗಿದೆ ಎಂದು ಆಚಾರ್ಯ ಮಹಾ ಮಂಡಲೇಶ್ವರ ಜಗದ್ಗುರು ಹೇಳಿದರು.

ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಚಾಂಪಿಯನ್ ಶಿಪ್ ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಒಳ್ಳೆಯ ವಿಷಯಗಳು ಎಲ್ಲಿಂದ ಬಂದರೂ, ಯಾರೇ ಹೇಳಿದರೂ ಅದನ್ನು ಸ್ವೀಕರಿಸಬೇಕು. 'ಸುಭಾಷಿತಂ ಬಾಲ ಮುಕಾಡಪಿ ಗ್ರಾಹ್ಯಮ್' ಅಂದರೆ ಮಗುವಿನಿಂದ ಬಂದ ಒಳ್ಳೆಯ ಮಾತನ್ನೂ ಸ್ವೀಕರಿಸಬೇಕು ಅದೇ ರೀತಿ ಇಂದು ಯೋಗವನ್ನು ಇಡೀವಿಶ್ವ ಒಪ್ಪಿ ಕೊಂಡಿದೆ. ಜಗತ್ತು ಒಂದೇ ಕುಟುಂಬ ಅಂದರೆ 'ವಸುಧೈವ ಕುಟುಂಬಕಮ್' ಎಂಬ ಭಾರತದ ಪವಿತ್ರ ಸಂದೇಶವನ್ನು ನಾವೆಲ್ಲರೂ ಭೇದಭಾವ ಮತ್ತು ಸಂಕುಚಿತ ಮನೋಭಾವವನ್ನು ತೊರೆದು ಭಕ್ತಿ ಹಾಗೂ ಪ್ರೀತಿಯಿಂದ ಎಲ್ಲರನ್ನು ಅಪ್ಪಿಕೊಳ್ಳಬೇಕು ಎಂದರು.

ಪ್ರಸ್ತುತ ಕೇವಲ ಔಷಧ ಮತ್ತು ಮಾತ್ರೆಗಳಿಂದ 100 ವರ್ಷ ರೋಗಮುಕ್ತ ಹಾಗೂ ಆರೋಗ್ಯಕರ ಜೀವನ ನಡೆಸಲು ಸಾಧ್ಯವಿಲ್ಲ. ರೋಗಗ್ರಸ್ತ ದೇಹದಿಂದ ನರಳುವ ಬದಲು ಋಷಿಮುನಿಗಳು ನಮಗೆ ಕೊಡುಗೆಯಾಗಿ ನೀಡಿದ ಯೋಗವನ್ನು ಅಳವಡಿಸಿಕೊಳ್ಳಬೇಕು. ತಲೆನೋವು, ಹೊಟ್ಟೆನೋವು, ಟೆನ್ಷನ್, ಬಿಪಿ, ಶುಗರ್ ಮುಂತಾದ ಪ್ರತಿಯೊಂದು ಸಮಸ್ಯೆಗೆ ಯೋಗದಲ್ಲಿ ಪರಿಹಾರವಿದೆ.

ವಿವಿಧ ರಾಜ್ಯಗಳ ಮಕ್ಕಳ ಸಾಂಸ್ಕೃತಿಕ ಸಮ್ಮಿಲನ:

ಕರ್ನಾಟಕ, ಉತ್ತರ ಪ್ರದೇಶ, ತಮಿಳುನಾಡು, ಕೇರಳ, ಅಸ್ಸಾಂ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಹಾಗೂ ಬೆಂಗಳೂರಿನಿಂದ ಬಂದಿದ್ದ ವಿದ್ಯಾರ್ಥಿಗಳು ನೀಡಿದ ಯೋಗ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ವಾಮೀಜಿಯವರು ಶ್ಲಾಘಿಸಿ, ಎಲ್ಲರಿಗೂ ಹೃತ್ಪೂರ್ವಕ ಸ್ವಾಗತ ಕೋರಿದರು.

ಈ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಯುಎಇ ಯೋಗ ಸಮಿತಿ ಉಪಾಧ್ಯಕ್ಷರು ಅಹ್ಮದ್ ಇಬ್ರಾಹಿಂ, NYSF ಅಧ್ಯಕ್ಷ ಶಶಿಕಾಂತ್ ಜೈನ್, ಉಪಾಧ್ಯಕ್ಷ ರಮೇಶ್ ಸಿ. ಲೋಹನ್, ರಾಜೇಶ್ವರಿ ವಿದ್ಯಾಶಾಲೆ ಆಡಳಿತಾಧಿಕಾರಿ ಗೋಪಾಲನ್, ನಿವೃತ ಎಸಿಪಿ ಎನ್ ನಾರಾಯಣ ಸ್ವಾಮಿ, ಗೌತಮ್ ಸರ್ಕಾರ್, ನರಸಿಂಹರಾಜು, ಅವಿನಾಶ್ ಸೇರಿ 15 ರಾಜ್ಯಗಳ ಯೋಗಪಟುಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಬೆಂಗಳೂರು, ಇಡೀ ಜಗತ್ತು ಒಂದೇ ಕುಟುಂಬ ಅಂದರೆ 'ವಸುಧೈವ ಕುಟುಂಬಕಮ್' ಎಂಬ ಭಾರತದ ಪವಿತ್ರ ಸಂದೇಶ ಇಂದು ಯೋಗದ ಮೂಲಕ ಸಾಬೀತಾಗುತ್ತಿದೆ.

ಯೋಗವು ಕೇವಲ ವ್ಯಾಯಾಮವಲ್ಲ, ಅದು ಮಾನವನ ಸಂಪೂರ್ಣ ವ್ಯಕ್ತಿತ್ವವನ್ನು ವಿಕಸನಗೊಳಿಸುವ ಮಾರ್ಗವಾಗಿದೆ ಎಂದು ಆಚಾರ್ಯ ಮಹಾ ಮಂಡಲೇಶ್ವರ ಜಗದ್ಗುರು ಹೇಳಿದರು.

ನೂತನ ಆಧಾರ್ ಸೇವಾ ಕೇಂದ್ರಕ್ಕೆ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಭೇಟಿ

ವಿಜಯಪುರ, ಅ.30– ನಗರದ ಬಿ.ಎಲ್.ಡಿ.ಇ ಆಸ್ಪತ್ರೆ ಎದುರು ನೂತನವಾಗಿ ಆರಂಭಗೊಂಡ ಆಧಾರ್ ಸೇವಾ ಕೇಂದ್ರಕ್ಕೆ ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಅವರು ಭೇಟಿ ನೀಡಿದರು. ನೂತನ ಆಧಾರ್ ಸೇವಾ ಕೇಂದ್ರದ ಸ್ಥಿತಿಗತಿಗಳ ಬಗ್ಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಚರ್ಚಿಸಿದರು.

ಬಳಿಕ ಅಬ್ದುಲ್ ಹಮೀದ್ ಮುಶ್ರೀಫ್ ಅವರು ಮಾತನಾಡುತ್ತಾ ನಗರದಲ್ಲಿ ಇದೊಂದು ಹೈಟೆಕ್ ಆಧಾರ ಸೇವಾ ಕೇಂದ್ರವಾಗಿದ್ದು, ಜನರು ಇದರ ಸದುಪಯೋಗಪಡಿಸಿ ಕೊಳ್ಳಬೇಕು ಎಂದು ಹೇಳಿದರು.

ಈ ಕೇಂದ್ರದಲ್ಲಿ ಸರ್ವರ್ ಸೇರಿದಂತೆ ಯಾವುದೇ ಸಮಸ್ಯೆಗಳಿಲ್ಲದೆ ಅತ್ಯುತ್ತಮ ಆಧಾರ ಸೇವೆ ಲಭ್ಯವಿದ್ದು, ಈ ಕೇಂದ್ರದಲ್ಲಿ 8 ಕೌಂಟರ್‌ಗಳನ್ನು ತೆರೆಯಲಾಗಿದ್ದು, ನಿಗದಿತ ಅವಧಿಯಲ್ಲೇ ಹೊಸ ಆಧಾರ ಕಾರ್ಡ್ ಮಾಡುವುದು, ಹೆಸರು, ಫೋಟೋ ಮತ್ತಿತರೆ ಯಾವುದೇ ತಿದ್ದುಪಡಿ ಮಾಡಿಕೊಡಲಾಗುತ್ತದೆ ಎಂದರು.

ಇನ್ನು ಈ ಕೇಂದ್ರದಲ್ಲಿ ವಿಕಲಚೇತನರಿಗಾಗಿ ಪ್ರತ್ಯೇಕ ಕೌಂಟರ್, ವ್ಹೀಲ್ ಚೇರ್ ಸೌಲಭ್ಯ ಸಹ ಕಲ್ಪಿಸಲಾಗಿದೆ. ಆಸ್ಪತ್ರೆಯಲ್ಲಿರುವ ರೋಗಿಗಳ ಅನುಕೂಲಕ್ಕಾಗಿ ರೋಗಿಗಳ ಹತ್ತಿರ ಹೋಗಿ ಸೇವೆ ನೀಡುತ್ತಾರೆ. ಸಾರ್ವಜನಿಕರು ಸಹ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಸಾರ್ವಜನಿಕರಿಗೆ ತಿಳಿಸಿದರು.

ಕಲಬುರಗಿ ನಗರ ಸೈಬರ್ ಅಪರಾಧ: 58 ಕೋಟಿ ವಂಚನೆ

ಕಲಬುರಗಿ, ಅ. 30: ನಗರದಲ್ಲಿ ಸೈಬರ್ ಕ್ರೈಮ್‌ಗಳಿಂದ ಸುಮಾರು 58 ಕೋಟಿ ರೂ. ಹಾಗೂ ಸಾಮಾನ್ಯ ಅಪರಾಧಗಳಲ್ಲಿ ಸುಮಾರು 2 ಕೋಟಿ ರೂ.ನಷ್ಟವಾಗಿದೆ. ಹೀಗಾಗಿ ನಾಗರಿಕರು ಸೈಬರ್ ಅಪರಾಧಗಳ ಬಗ್ಗೆ ತಿಳಿದುಕೊಂಡು ಸದಾ ಜಾಗರೂಕರಾಗಿ ಇರಬೇಕು ಎಂದು ಸಿಪಿಐ ರಾಘವೇಂದ್ರ ಭಜಂತ್ರಿ ಅವರು ಹೇಳಿದರು.

ಕಲ್ಯಾಣ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತ ನಿವೃತ್ತ ನೌಕರರೊಬ್ಬರು 1.8 ಕೋಟಿ ರೂ.ಕಳೆದುಕೊಂಡಿರುವುದನ್ನು ಉದಾಹರಣೆ ನೀಡಿದ ಅವರು, ವ್ಯಾಪಾರಸ್ಥರು, ಸರ್ಕಾರಿ ನೌಕರರು ಹಾಗೂ ನಿವೃತ್ತರು ಇಂತಹ ವಂಚನೆಗಳಿಗೆ ಒಳಗಾಗುತ್ತಿದ್ದಾರೆ. ಆನ್?ಲೈನ್? ವಂಚಕರನ್ನು ಪತ್ತೆ ಹಚ್ಚುವುದು ಹಾಗೂ ಹಣ ಮರಳಿ ಪಡೆಯುವುದು ಕಷ್ಟವಾಗಿದ್ದರಿಂದ ಮುನ್ನೆಚ್ಚರಿಕೆ ಅಗತ್ಯ ಎಂದರು.

ಹೆಚ್ಚಿನ ಲಾಭದ ಆಮಿಷವೊಡ್ಡುವ ನಕಲಿ ಹೂಡಿಕೆ ಆಪ್, ವಾಟ್ಸ್‌ಆಪ್ ಮತ್ತು ಟೆಲಿಗ್ರಾಂ ಗ್ರೂಪ್, ನಕಲಿ ಉದ್ಯೋಗ ಹಾಗೂ ಮನೆಯಿಂದಲೇ ಕೆಲಸದ ಆಫರ್‌ಗಳ ಬಗ್ಗೆ ಎಚ್ಚರ ವಹಿಸಬೇಕು. ಹೂಡಿಕೆ ಆರಂಭದಲ್ಲಿ ಲಾಭ ಬಂದಂತೆ ತೋರಿಸಿ ನಂತರ ಹಣ ಪಡೆಯಲು ತೆರಿಗೆ ಅಥವಾ ಶುಲ್ಕದ ಹೆಸರಿನಲ್ಲಿ ಮತ್ತೆ ಮತ್ತೆ ಹಣ ಕೇಳುತ್ತಾರೆ. ಇಂತಹ ಆಮಿಷಗಳಿಗೆ ಒಳಗಾಗಬಾರದು. ಒಟಿಪಿ, ಪಿನ್ ಅಥವಾ ಪಾಸ್‌ವರ್ಡ್ ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ಸಲಹೆ ನೀಡಿದರು.

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಪೊಲೀಸ್ ಇತರ ಇಲಾಖೆ ಅಧಿಕಾರಿಗಳಂತೆ ಕರೆ ಮಾಡಿ ಸುಳ್ಳು ಆರೋಪ ಹೊರಿಸಿ ಹಣ ಕೇಳುವ ಪರಿಪಾಠ ಬೆಳೆದಿದೆ. ಭಾರತದಲ್ಲಿ ಡಿಜಿಟಲ್ ಅರೆಸ್ಟ್ ಎಂಬ ಕಾನೂನು ವ್ಯವಸ್ಥೆಯೇ ಇಲ್ಲ. ಇಂತಹ ಕರೆಗಳಿಗೆ ಹೆದರಿ ಹಣ ಕಳುಹಿಸಬಾರದು ಕಳೆದುಕೊಳ್ಳಬಾರದು ಎಂದು ಮನವಿ ಮಾಡಿದರು.

ಸೈಬರ್ ವಂಚನೆಯಿಂದ ಹಣ ಕಳೆದುಕೊಂಡರೆ ತಣ ಬ್ಯಾಂಕ್‌ಗೆ ಮಾಹಿತಿ ನೀಡಿ 1930ಕ್ಕೆ ಕರೆ ಮಾಡಬೇಕು ಅಥವಾ ದೂರು ದಾಖಲಿಸಬೇಕು. ಬೇಗ ದೂರು ನೀಡಿದಷ್ಟು ಹಣದ ವರ್ಗಾವಣೆ ತಡೆಗೆ ಪ್ರಯತ್ನಿಸಲು ಸಾಧ್ಯವಾಗಲಿದೆ. ವ್ಯವಹಾರದ ಸಂಖ್ಯೆ, ಯುಟಿಆರ್ ಸಂಖ್ಯೆ, ಸ್ಕ್ರೀನ್‌ಶಾಟ್, ಮೊಬೈಲ್ ಸಂಖ್ಯೆ ಹಾಗೂ ಸಂದೇಶ ಸ್ವಾವಾಗಿ ಉಳಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಬರಗಾಲ ಪರಿಹಾರ ಕೇಂದ್ರ-ರಾಜ್ಯ ತಲಾ 25 ಸಾವಿರ ನೀಡುವಂತೆ ಆಗ್ರಹಿಸಿ ರೈತ ಸಂಘಗಳ ಹೋರಾಟ

ರಾಯಚೂರು, ಅ. 30: ತೀವ್ರ ಬರಗಾಲದಿಂದ ಬೆಳೆ ನಷ್ಟ ಅನುಭವಿಸಿರುವ ಜಿಲ್ಲೆಯ ರೈತರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಲಾ 25 ಸಾವಿರ ಪರಿಹಾರ ನೀಡಬೇಕು ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತಸಂಘ (ಕೆಪಿಆರ್‌ಎಸ್) ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಕಾರ್ಯಕರ್ತರು ಇಲ್ಲಿಯ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎರಡೂ ಸಂಘಟನೆಗಳ ನೇತೃತ್ವದಲ್ಲಿ ದೇವದುರ್ಗ, ಸಿಂಧನೂರು, ಲಿಂಗಸೂಗೂರು ಮತ್ತು ಮಸ್ಕಿ ತಾಲ್ಲೂಕುಗಳಿಂದ ಅ.24ರಂದು ಆರಂಭಿಸಿದ ಪಾದಯಾತ್ರೆ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಅಲ್ಲಿ ನೂರಾರು ರೈತರು ಹಾಗೂ ಕೃಷಿ ಕೂಲಿಕಾರರು ಪ್ರತಿಭಟನೆ ನಡೆಸಿದರು.

ಡಿಸಿ ಕಚೇರಿಗೆ ನುಗ್ಗಲು ಯತ್ನ

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತ ಸಂಘಟನೆಗಳ ಕಾರ್ಯಕರ್ತರು ರಾಯಚೂರು ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ನುಗ್ಗಲು ಪ್ರಯತ್ನಿಸಿದಾಗ ಪೊಲೀಸರು ತಡೆದರು. ನಾಲ್ಕು ತಾಲ್ಲೂಕುಗಳ ರೈತರು ಹಾಗೂ ಕೃಷಿ ಕಾರ್ಮಿಕರು ಕೆಂಪು ಧ್ವಜ ಹಿಡಿದು ಡಿಸಿ ಕಚೇರಿಯತ್ತ ಬರುತ್ತಿದ್ದಂತೆಯೇ ಪೊಲೀಸರು ಮಾರ್ಗ ಮಧ್ಯದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿದರು. ಹೀಗಾಗಿ ರೈತರು ಆಕ್ರೋಶ ವ್ಯಕ್ತಪಡಿಸಿ ಘೋಷಣೆ ಕೂಗಿದರು. ರೈತರ ಪ್ರತಿಭಟನೆ ಹಿನ್ನೆಲೆಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸದ ದಿನಗಳನ್ನು 200ಕ್ಕೆ ಹೆಚ್ಚಿಸಿ, ದಿನಗೂಲಿಯನ್ನು ?700ಕ್ಕೆ ನಿಗದಿಪಡಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು. ಜಿಲ್ಲೆಯಲ್ಲಿ ಸಮರ್ಪಕ ಮಳೆಯಾಗದ ಕಾರಣ ಕೃಷಿ ಚಟುವಟಿಕೆ ಸ್ಥಗಿತಗೊಂಡಿದ್ದು, ಶೇ 80ರಷ್ಟು ಕೂಲಿಕಾರರು ಮತ್ತು ಸಣ್ಣ ರೈತರು ಮಹಾನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿ ಎದುರಾಗಿದೆ. ಕೃಷಿಗಾಗಿ ಸಾಲ ಮಾಡಿದ ರೈತರು ಸಾಲದ ಸುಳಿಗೆ ಸಿಲುಕಿದ್ದು, ಕೃಷಿ ಕೂಲಿಕಾರರು ಕೆಲಸವಿಲ್ಲದೆ ಜೀವನ ನಿರ್ವಹಣೆಗೆ ಪರದಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ತೀವ್ರವಾಗಿದೆ ಎಂದು ದೂರಿದರು.

ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಸಿಗುತ್ತಿಲ್ಲ. ಕೆಲಸ ಮಾಡಿದರೂ ಎರಡು–ಮೂರು ತಿಂಗಳಿಂದ ಕೂಲಿ ಪಾವತಿಯಾಗಿಲ್ಲ. ಹಲವು ಗ್ರಾಮಗಳಲ್ಲಿ ವರ್ಷಗಳಿಂದ ಗುಡಿಸಲುಗಳಲ್ಲಿ ವಾಸಿಸುತ್ತಿರುವ ವರಿಗೆ ಹಕ್ಕುಪತ್ರ ನೀಡಿಲ್ಲ. ಮನೆ, ನಿವೇಶನಗಳಿಲ್ಲದ ಅರ್ಹ ಬಡ ಕುಟುಂಬಗಳಿಗೆ ನಿವೇಶನ ಒದಗಿಸಬೇಕು ಎಂದು ಆಗ್ರಹಿಸಿದರು.

ಬರ ಪರಿಹಾರ, ರೈತರ ಸಾಲ ಮನ್ನಾ, ಪಂಪ್‌ಸೆಟ್‌ಗಳಿಗೆ ಏಳು ಗಂಟೆ ನಿರಂತರ ವಿದ್ಯುತ್, ಕಾಲುವೆಗಳಿಗೆ ನೀರು ಹರಿಸುವುದು, ಮೇವು ಕೇಂದ್ರಗಳ ಸ್ಥಾಪನೆ, ಬಾಕಿ ಮಾಸಾಶನ ಬಿಡುಗಡೆ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಬೀದಿ ಬದಿ ವ್ಯಾಪಾರಸ್ಥರಿಗೆ ತಳ್ಳು ಗಾಡಿ ವಿತರಿಸಿದ ಶಾಸಕ ನಾರಾ ಭರತ್ ರೆಡ್ಡಿ

ಬಳ್ಳಾರಿ, ಅ.30: ಗಡಿಗಿ ಚೆನ್ನಪ್ಪ ವೃತ್ತದಿಂದ ಈಡಿಗ ಹಾಸ್ಟೆಲ್‌ವರೆಗಿನ ರಸ್ತೆ ಅಭಿವೃದ್ಧಿ ವೇಳೆ ಇಲ್ಲಿನ ಬೀದಿ ಬದಿ ವ್ಯಾಪಾರಿಗಳಿಗೆ ತಳ್ಳುವಗಾಡಿ ವಿತರಿಸುವುದಾಗಿ ಭರವಸೆ ನೀಡಿದ್ದೆ, ಕೊಟ್ಟಮಾತಿನಂತೆ 9 ಜನ ವ್ಯಾಪಾರಸ್ಥರಿಗೆ ಟಚ್ ಫಾರ್ ಲೈಫ್ ಫೌಂಡೇಶನ್ ವತಿಯಿಂದ ಉಚಿತವಾಗಿ ತಳ್ಳು ಗಾಡಿ ನೀಡಿರುವೆ ಎಂದು ಶಾಸಕ ನಾರಾ ಭರತ್ ರೆಡ್ಡಿ ತಿಳಿಸಿದ್ದಾರೆ.

ಬಳ್ಳಾರಿಯ ಗಡಿಗಿ ಚೆನ್ನಪ್ಪ ವೃತ್ತದ ಬಳಿ ಶುಕ್ರವಾರ ಬೆಳಿಗ್ಗೆ ಗಾಡಿಗಳನ್ನು ವಿತರಿಸಿ ಮಾತನಾಡಿದರು.

ಈ ಸಂದರ್ಭ ಹಾಜರಿದ್ದ ಪಾಲಿಕೆಯ ಸದಸ್ಯ ನೂರ್ ಮೊಹಮ್ಮದ್ ಮಾತನಾಡಿ; ಭಾಡಿಗೆ ಕೊಟ್ಟು ತಳ್ಳುವಗಾಡಿ ತರುತ್ತಿದ್ದ ಬಡ ಬೀದಿಬದಿ ವ್ಯಾಪಾರಸ್ಥರಿಗೆ ತೊಂದರೆ ಇತ್ತು, ಇದನ್ನು ಅರಿತು ಶಾಸಕರು ಬೀದಿಬದಿ ವ್ಯಾಪಾರಸ್ಥರಿಗೆ ತಳ್ಳುವಗಾಡಿಗಳನ್ನು ಉಚಿತವಾಗಿ ನೀಡಿರುವುದು ಅಭಿನಂದನಾರ್ಹ ಎಂದರು.

ಹಾಸನಾಂಬ ದೇವಿ ಜಾತ್ರೆ: ದುಬಾರಿ ಬೆಲೆಗೆ ಲಾಡು ಮಾರುತ್ತಿದ್ದವರ ವಿರುದ್ಧ ಸಚಿವ ಶಿವಲಿಂಗೇಗೌಡ ಗರಂ

ಹಾಸನ, ಅ.30: ಹಾಸನಾಂಬ ಜಾತ್ರೆಯಲ್ಲಿ 100 ರೂ.ಗೆ 2 ಲಾಡು ಪ್ರಸಾದ ಮಾರಾಟ ಮಾಡುತ್ತಿದ್ದವರ ವಿರುದ್ಧ ಸಚಿವ ಕೆ.ಎಂ ಶಿವಲಿಂಗೇಗೌಡ ಗರಂ ಆಗಿದ್ದಾರೆ. ವರ್ಷಕ್ಕೊಮ್ಮೆ ಮಾತ್ರ ಬಾಗಿಲು ತೆರೆಯುವ ಚಾರಿತ್ರಿಕ ಪ್ರಸಿದ್ಧ ಹಾಸನಾಂಬೆ ದೇವಾಲಯದ ಲಾಡು ಪ್ರಸಾದದ ದರ ಹೆಚ್ಚಳಕ್ಕೆ ಸಚಿವ ಕೆ.ಎಮ್. ಶಿವಲಿಂಗೇಗೌಡ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಸಾದದ ದರವನ್ನು 100 ರೂಪಾಯಿಗೆ ನಿಗದಿಪಡಿಸಿದ್ದ ಜಿಲ್ಲಾಡಳಿತ ಹಾಗೂ ದೇವಾಲಯದ ಅಧಿಕಾರಿಗಳ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿರುವ ಸಚಿವರು, ತಕ್ಷಣವೇ ದರವನ್ನು 60 ರೂಪಾಯಿಗೆ ಇಳಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವಂತೆ ಖಡಕ್ ಸೂಚನೆ ನೀಡಿದ್ದಾರೆ.

60 ರೂ.ಗೆ 2 ಲಾಡು ಕೊಡ್ಬೇಕು, ನಾನೇ ಸರ್ಕಾರ, ನಾನು ಹೇಳಿದ ಮೇಲೆ ಫೈನಲ್ ಎಂದು ತೀವ್ರ ಆಕ್ರೋಶ ಹೊರಹಾಕಿದ್ದಾರೆ. ದೇವಾಲಯದ ಸುತ್ತಮುತ್ತ ಪರಿಶೀಲನೆ ನಡೆಸುವಾಗ 100 ರೂ.ಗೆ ಲಾಡು ಮಾರಾಟ ಮಾಡುವ ವಿಚಾರ ಗೊತ್ತಾಗಿದೆ.

ಈ ವೇಳೆ, ಟೆಂಡರ್ ಪಡೆದ ಇಸ್ಕಾನ್ ಸಂಸ್ಥೆಗೆ ಕರೆ ಮಾಡಿ, 'ನಾನು ಮಿನಿಸ್ಟರ್ ಮಾತನಾಡುತ್ತಿದ್ದೇನೆ. 60 ರೂ.ಗೆ ಎರಡು ಲಾಡುಗಳನ್ನು ಮಾರಾಟ ಮಾಡಬೇಕು. 1000 ರೂ. 300 ರೂ. ವಿಶೇಷ ದರ್ಶನದ ಟಿಕೆಟ್ ಪಡೆದು ದರ್ಶನ ಮಾಡಿದವರಿಗೆ ಉಚಿತವಾಗಿ ಲಾಡು ನೀಡಬೇಕು' ಎಂದು ಖಡಕ್ ಸೂಚನೆ ನೀಡಿದ್ದಾರೆ.

ಹಾಸನಾಂಬೆ ದರ್ಶನಕ್ಕೆ ಲಕ್ಷಾಂತರ ಭಕ್ತಾದಿಗಳು ಆಗಮಿಸುವ ಹಿನ್ನೆಲೆಯಲ್ಲಿ ದೇವಾಲಯದ ಆದಾಯದ ದೃಷ್ಟಿಯಿಂದ ಲಾಡು ಪ್ರಸಾದವನ್ನು 100 ರೂಪಾಯಿಗೆ ಮಾರಾಟ ಮಾಡಲು ಅಧಿಕಾರಿಗಳು ಯೋಜನೆ ರೂಪಿಸಿದ್ದರು.

ಲಾಡು ಪ್ರಸಾದ ಮಾರಾಟ ಮಾಡಿ ದೇವಾಲಯದ ಆದಾಯವನ್ನು ಹೆಚ್ಚಿಸುವ ಯಾವುದೇ ಅಗತ್ಯವಿಲ್ಲ' ಎಂದು ಗರಂ ಆದ ಸಚಿವರು, ತಕ್ಷಣವೇ ದರ ಬದಲಾವಣೆ ಮಾಡುವಂತೆ ಆದೇಶಿಸಿದರು.

ಕರ್ತವ್ಯದಲ್ಲಿ ಪ್ರಾಮಾಣಿಕತೆ, ನೈತಿಕತೆ ಅಳವಡಿಸಿಕೊಳ್ಳಿ

ಸರ್ಕಾರಿ ಅಧಿಕಾರಿಗಳಿಗೆ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಕಿವಿಮಾತು

ಮೈಸೂರು, ಅ.30: ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ಕರ್ತವ್ಯದಲ್ಲಿ ಪ್ರಾಮಾಣಿಕತೆ ಮತ್ತು ನೈತಿಕತೆ ಅಳವಡಿಸಿಕೊಳ್ಳಬೇಕು. ಮಾನವೀಯ ಮೌಲ್ಯಗಳನ್ನು ದೈನಂದಿನ ಕೆಲಸ ಮತ್ತು ಸಾರ್ವಜನಿಕ ಸೇವೆಯೊಂದಿಗೆ ಬೆಸೆಯಬೇಕು' ಎಂದು ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಜಾಗೃತಿ ಸಪ್ತಾಹ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಲಂಚ ಸ್ವೀಕರಿಸದಿರುವುದು ಮತ್ತು ಲಂಚ ನೀಡದಿರುವುದು ಮಾತ್ರ ಪ್ರಾಮಾಣಿಕತೆಯ ಸಂಪೂರ್ಣ ಅರ್ಥವಲ್ಲ. ನಿಗದಿತ ಸಮಯಕ್ಕೆ ಕಚೇರಿಗೆ ಬಂದು ಕೆಲಸ ನಿರ್ವಹಿಸುವುದಷ್ಟೇ ಕರ್ತವ್ಯವೂ ಅಲ್ಲ. ಇವುಗಳಿಗಿಂತ ಮಿಗಿಲಾಗಿ ಮಾನವೀಯ ಮೌಲ್ಯಗಳು ನಮ್ಮಲ್ಲಿರಬೇಕು. ಅಶಕ್ತರಿಗೆ ನೆರವಾಗಬೇಕು ಎಂದರು.

ಲೋಕಾಯುಕ್ತ ಸಂಸ್ಥೆ ಸ್ಥಾಪನೆಯಾಗಿ ನಾಲ್ಕು ದಶಕಗಳು ಕಳೆದಿದ್ದರೂ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ. ಇದು ಕಳವಳಕಾರಿಯಾದುದು. ಭ್ರಷ್ಟಾಚಾರದಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿ 3ನೇ ಸ್ಥಾನದಲ್ಲಿದೆ ಎಂಬುದು ಆತಂಕಕಾರಿ ಸಂಗತಿ. ಈ ಪರಿಸ್ಥಿತಿಯಿಂದ ಹೊರಬರಲು ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆ ಹೆಚ್ಚಾಗಬೇಕು ಎಂದು ಆಶಿಸಿದರು.

ಸಮೃದ್ಧಿಗಾಗಿ ಪ್ರಾಮಾಣಿಕತೆ:

ಪ್ರತಿ ವರ್ಷ ಅಕ್ಟೋಬರ್ ಕೊನೆಯ ವಾರದಿಂದ ನವೆಂಬರ್ ಮೊದಲ ವಾರದವರೆಗೆ ಜಾಗೃತಿ ಸಪ್ತಾಹ ಆಚರಿಸಲಾಗುತ್ತದೆ. ಈ ಬಾರಿಯ ಧ್ಯೇಯವಾಕ್ಯ 'ಸಮೃದ್ಧಿಗಾಗಿ ಪ್ರಾಮಾಣಿಕತೆ' ಎಂಬುದಾಗಿದೆ. ಪ್ರಾಮಾಣಿಕತೆ ಎಂದರೆ ಕೇವಲ ವೈಯಕ್ತಿಕ ನಿಷ್ಠೆಯಲ್ಲ.

ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಶ್ರದ್ಧೆಯಿಂದ ನಿರ್ವಹಿಸುವುದೂ ಪ್ರಾಮಾಣಿಕತೆಯ ಭಾಗ. ಅಗತ್ಯವಿದ್ದಾಗ ಹೆಚ್ಚುವರಿ ಸಮಯವನ್ನು ಕೆಲಸಕ್ಕಾಗಿ ಮೀಸಲಿಟ್ಟು ಕರ್ತವ್ಯ ಪೂರ್ಣಗೊಳಿಸುವುದು ನಿಜವಾದ ಮೌಲ್ಯಾಧಾರಿತ ಸಮಯಪಾಲನೆ' ಎಂದು ಹೇಳಿದರು.

ಲೋಕಾಯುಕ್ತದಲ್ಲಿ ಹಿಂದೆ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೂ ವಿಲೇವಾರಿಗೆ ನಿರ್ದಿಷ್ಟ ಸಮಯ ಬೇಕಾಗುತ್ತಿತ್ತು.

ಪ್ರಸ್ತುತ ಒಂದು ವರ್ಷದಲ್ಲಿ 30ಸಾವಿರ ಪ್ರಕರಣಗಳು ಬಂದಿದ್ದು, ಅವುಗಳಲ್ಲಿ 22ಸಾವಿರ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ' ಎಂದು ತಿಳಿಸಿದರು.

'ಸಂವಿಧಾನವು ಎಲ್ಲರಿಗೂ ಸಮಪಾಲು, ಸಮಬಾಳು ಹಾಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಮಹತ್ತರ ಆಶಯ ಹೊಂದಿದೆ. ಪ್ರತಿಯೊಬ್ಬರಿಗೂ ಉತ್ತಮ ಜೀವನ ಒದಗಿಸುವುದು ಅದರ ಮೂಲ ಉದ್ದೇಶ. ಅದು ಈಡೇರಬೇಕು' ಎಂದರು.

ಪಾಲ್ಗೊಂಡಿದ್ದವರಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಯುಕೇಶ್ ಕುಮಾರ್, ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್, ಡಿಸಿಪಿ ಡಾ.ಹರ್ಷಾಪ್ರಿಯಂವದ ಪಾಲ್ಗೊಂಡಿದ್ದರು.

ನ.3ರಿಂದ 12ರವರೆಗೆ ನೀರು ಹರಿವು, ಸೋರಿಕೆ ತಡೆ–ಕಾಲುವೆ ದುರಸ್ತಿ ಪೊಲೀಸ್ ನಿಗಾ ವಹಿಸಲು ವಿಜಯಪುರ ಜಿಲ್ಲಾಧಿಕಾರಿ ಸೂಚನೆ

ವಿಜಯಪುರ, ಅ.30– ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಂಗಾರು ಹಂಗಾಮಿನ ಕೊನೆಯ ಹಂತದ ನೀರು ಹರಿಸುವ ಪ್ರಕ್ರಿಯೆ ನವೆಂಬರ್ 3ರಿಂದ 12ರವರೆಗೆ ನಡೆಯಲಿದ್ದು, ಇಂಡಿ ಶಾಖಾ ಕಾಲುವೆಯ ಕೊನೆಯ ಅಂಚಿನವರೆಗೂ ಸಮರ್ಪಕವಾಗಿ ನೀರು ತಲುಪಿಸಲು ಸಂಬಂಧಿಸಿದ ಎಲ್ಲ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಸೂಚಿಸಿದರು.

ನವೆಂಬರ್ 3ರಿಂದ 12ರವರೆಗೆ ಕಾಲುವೆ ಜಾಲದ ಮೂಲಕ ನೀರು ಹರಿಸಲಾಗುತ್ತಿರುವುದರಿಂದ ನಿಗದಿತ ಪ್ರಮಾಣದ ನೀರು ಕಾಲುವೆಯ ಕೊನೆಯ ಭಾಗದ ರೈತರಿಗೂ ತಲುಪುವಂತೆ ಅಧಿಕಾರಿಗಳು ವಿಶೇಷ ಗಮನಹರಿಸಬೇಕು. ನೀರು ಹರಿಸುವ ಸಂದರ್ಭದಲ್ಲಿ ಕಾಲುವೆಗಳಲ್ಲಿ ಎಲ್ಲಿಯೇ ಸೋರಿಕೆ ಅಥವಾ ಹಾನಿ ಕಂಡುಬಂದರೂ ತಕ್ಷಣ ದುರಸ್ತಿ ಕಾರ್ಯ ಕೈಗೊಳ್ಳಬೇಕು. ನೀರು ಪೋಲಾಗದಂತೆ ಮುನ್ನೆಚ್ಚರಿಕೆ ವಹಿಸಿ, ಸಮರ್ಪಕ ನಿರ್ವಹಣೆ ಮಾಡಬೇಕು ಎಂದು ತಿಳಿಸಿದರು.

ಇಂಡಿ ಶಾಖಾ ಕಾಲುವೆಯ ಸುಮಾರು 172 ಕಿ.ಮೀ. ವ್ಯಾಪ್ತಿಯ ಕೊನೆಯ ಅಂಚಿನವರೆಗೆ ನೀರು ತಲುಪಿಸುವುದು ಪ್ರಮುಖ ಆದ್ಯತೆಯಾಗಿದ್ದು, ಮಧ್ಯದಲ್ಲಿ ಅನಧಿಕೃತವಾಗಿ ನೀರು ಎತ್ತುವುದು ಹಾಗೂ ನೀರಿನ ಹರಿವಿಗೆ ಅಡ್ಡಿಯಾಗುವ ಚಟುವಟಿಕೆಗಳನ್ನು ತಡೆಯಬೇಕು. ಕಾಲುವೆಯ ಕೊನೆಯ ಹಂತದವರೆಗೂ ನಿಗದಿತ ಪ್ರಮಾಣದಲ್ಲಿ ನೀರು ತಲುಪುವಂತೆ ನಿರಂತರ ನಿಗಾ ವಹಿಸಬೇಕು



ಎಂದು ಸೂಚಿಸಿದರು.

ನೀರು ಹರಿಸುವ ಅವಧಿಯಲ್ಲಿ ಅಧಿಕಾರಿಗಳು ವಾಚ್ ಆ್ಯಂಡ್ ವಾರ್ಡ್ ವ್ಯವಸ್ಥೆ ಕಲ್ಪಿಸಿ, ಕಾಲುವೆ ಜಾಲದ ಸೂಕ್ಷ್ಮ ಪ್ರದೇಶಗಳಲ್ಲಿ ನಿಗಾ ವಹಿಸಬೇಕು. ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ನಿಗಾ ಕೈಗೊಳ್ಳಬೇಕು. ಇಂಡಿ ಉಪವಿಭಾಗದ ಡಿವೈಎಸ್ಪಿ ಸೇರಿದಂತೆ ಕೆಂಭಾವಿ, ಸಿಂದಗಿ ಮತ್ತಿತರ ಸಂಬಂಧಿತ ಪೊಲೀಸ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ನೀರಿನ ಸಮರ್ಪಕ ಹರಿವಿಗೆ ಅಗತ್ಯ ನಿಗಾವಹಿಸಬೇಕು ಎಂದು ಸೂಚನೆ ನೀಡಿದರು.

ಬಿಡುಗಡೆಯಾದ ನೀರು ನಿಗದಿತ ಮಾರ್ಗದಲ್ಲಿ ಯಾವುದೇ ಅಡಚಣೆಯಿಲ್ಲದೆ ಕೊನೆಯ ಭಾಗವನ್ನು ತಲುಪುವಂತೆ ನೀರಾವರಿ ಮತ್ತು ಪೊಲೀಸ್ ಇಲಾಖೆಗಳು ಜಂಟಿಯಾಗಿ ಕಾರ್ಯನಿರ್ವಹಿಸಬೇಕು. ಇದು ಮುಂಗಾರು ಹಂಗಾಮಿನ ಕೊನೆಯ ಹಂತದ ನೀರು ಹರಿಸುವ ಅವಧಿಯಾಗಿರುವುದರಿಂದ ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಎಲ್ಲ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಲಬುರಗಿಯಲ್ಲಿ ಹಿರಿಯ ನಾಗರಿಕರ ಸಂಗಮ

ಜಗತ್ತಿನ ನವೀಕರಣಕ್ಕಾಗಿ ಆಧ್ಯಾತ್ಮ ಜಾಗೃತಿ ಸಮಾವೇಶ: ಬಿ.ಕೆ. ವಿಜಯಾ

ಕಲಬುರಗಿ, ಅ. 30: ನಗರದ ಆದರ್ಶ ನಗರದಲ್ಲಿರುವ ಬ್ರಹ್ಮಕುಮಾರೀಸ್ ಸತ್ಯತೀರ್ಥ ಆಡಿಟೋರಿಯಂನಲ್ಲಿ ಹಿರಿಯ ನಾಗರಿಕರು ಮತ್ತು ಅವರ ಕುಟುಂಬದ ಸದಸ್ಯರಿಗಾಗಿ ಯುಗದ ಹೆಮ್ಮೆಯೊಂದಿಗೆ ಘನತೆಯೊಂದಿಗೆ ಬದುಕಿ ಎಂಬ ಸಂಗಮ ಕಾರ್ಯಕ್ರಮ ಹಾಗೂ ನವೆಂಬರ್ 1 ರಂದು ಜಗತ್ತಿನ ನವೀಕರಣಕ್ಕಾಗಿ ಆದಧ್ಯಾತ್ಮಿಕ ಜಾಗೃತಿ ರಾಷ್ಟ್ರೀಯ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಬ್ರಹ್ಮಕುಮಾರೀಸ್ ಉಪ ವಲಯದ ಮುಖ್ಯಸ್ಥೆ ರಾಯಿಜಯೋಗಿನಿ ಬಿ.ಕೆ.ವಿಜಯಾ ದೀದೀ ಅವರು ಹೇಳಿದರು.

ಆದರ್ಶನಗರದ ಬ್ರಹ್ಮಕುಮಾರೀಸ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪಿತ ಬ್ರಹ್ಮಕುಮಾರೀಸ್ ಈಶ್ವರಿಯ ವಿಶ್ವವಿದ್ಯಾಲಯದ 90 ವರ್ಷದ ಆಧ್ಯಾತ್ಮಿಕ ಪ್ರವಾಸದ ಯಶಸ್ವಿಯ ಹಿನ್ನೆಲೆಯಲ್ಲಿ ಎರಡು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸುಲಫಲಮಠ ಹಾಗೂ ಶ್ರೀಶೈಲ ಸಾರಂಗಮಠದ ಡಾ. ಮಹಾಂತ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಅಫಜಲಪುರ ಶಾಸಕ ಎಂ.ವೈ. ಪಾಟೀಲ್, ಬ್ರಹ್ಮಕುಮಾರೀಸ್ ಸಾಮಾಜಿಕ ಸೇವಾ ವಿಭಾಗದ ಉಪಾಧ್ಯಕ್ಷ ಬಿ.ಕೆ. ಪ್ರೇಮ್‌ಜಿ, ರಾಜಯೋಗಿನಿ

ಬಿಕೆ ವಿಜಯಾ ದೀದೀಜಿ, ರಾಜಯೋಗಿನಿ ಬಿಕೆ ಆಶಾ ದೀದೀಜಿ, ರಾಜಯೋಗಿ ಬಿಕೆ ವೀರೇಂದ್ರ ಭಾಯಿಜಿ ಅವರು ಆಗಮಿಸುವರು. ಇದೇ ಸಂದರ್ಭದಲ್ಲಿ ಹಿರಿಯ ನಾಗರಿಕರಾದ ನಾಡೋಜ್ ಡಾ. ಜಿ.ಎಸ್. ಖಂಡೇರಾವ್ ಹಾಗೂ ಗಾಯತ್ರಿ ಅವರೂ ಸೇರಿದಂತೆ ವಿವಿಧ ಕ್ಷೇತ್ರಗಳ ಹತ್ತು ಸಾಧಕರಿಗೆ ಸನ್ಮಾನಿಸಲಾಗುವುದು ಎಂದು ಹೇಳಿದರು.

ಅದೇ ರೀತಿ ನವೆಂಬರ್ 1ರಂದು ಬೆಳಿಗ್ಗೆ ಹತ್ತರಿಂದ ಸಂಜೆ 4 ಗಂಟೆಯವರೆಗೆ ಸೇಡಂ ರಸ್ತೆಯಲ್ಲಿರುವ ಗೀತಾನಗರದ ಅಮೃತ ಸರೋವರದಲ್ಲಿರುವ ರೀಟ್ರೀಟ್ ಸೆಂಟರ್‌ನಲ್ಲಿ ಜಗತ್ತಿನ ನವೀಕರಣಕ್ಕಾಗಿ ಆಧ್ಯಾತ್ಮಿಕ ಜಾಗೃತಿ ರಾಷ್ಟ್ರೀಯ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಒಟ್ಟು ಮೂರು ಅಧಿವೇಶನಗಳು ಜರುಗಲಿವೆ. ಮೊದಲಿಗೆ ರಾಜ್ಯೋತ್ಸವ ಕುರಿತಾದ ಕಾರ್ಯಕ್ರಮ ಜರುಗಲಿವೆ.

ನಂತರ ರೈತರ ಕುರಿತು ಸಹ ಕಾರ್ಯಕ್ರಮ ನೆರವೇರಲಿದೆ. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸಂಚಲಕಿ ರಾಜಯೋಗಿ ಬಿಕೆ ಅವತಾರ ಭಾಯಿಜಿ, ಗೌರವ ಅತಿಥಿಗಳಾಗಿ ರಾಜ್ಯ ವಿಧಾನ ಪರಿಷತ್ ಸದಸ್ಯ ಡಾ. ಬಿ.ಜಿ. ಪಾಟೀಲ್, ಗ್ರಾಮೀಣ ಕ್ಷೇತ್ರದ ಶಾಸಕ ಬಸವರಾಜ್ ಮತ್ತಿಮೂಡ್, ಬಿಕೆ ಪ್ರೇಮಜಿ, ರಾಜಯೋಗಿನಿ ಬಿಕೆ ವಿಜಯಾ ದೀದೀಜಿ, ರಾಜಯೋಗಿ ಬಿಕೆ ವೀರೇಂದ್ರ ಭಾಯಿಜಿ, ಮಾನಸಿಕ ಆರೋಗ್ಯ ಸ್ವಾಸ್ಥ್ಯದ ಕುರಿತು ಪ್ರೊ. ಬಿಕೆ ಸ್ವಾಮೀನಾಥನ್ ಭಾಯಿಜಿ ಅವರು ಪ್ರೇರಣಾತ್ಮಕ ಭಾಷಣ ಮಾಡುವರು. ಮನೆಯಲ್ಲಿನ ಆರೋಗ್ಯಕರ ಚಟುವಟಿಕೆಗಳ ಕುರಿತು ದೆಹಲಿಯ ರಾಯಿಜಯೋಗಿನಿ ಬಿಕೆ ಆಶಾ ದೀದೀಜಿ ಅವರು ಮಾತನಾಡುವರು ಎಂದು ಅವರು ತಿಳಿಸಿದರು.

ಸಮಾವೇಶದಲ್ಲಿ ವುಇವಿಧ ರಾಜ್ಯಗಳಿಂದ 200 ಜನರು ಹಾಗೂ ಸ್ಥಳೀಯರು 2000 ಜನರು ಪಾಲ್ಗೊಳ್ಳುವರು. ಈ ಭಾಗದಲ್ಲಿ ಮಳೆ ಇಲ್ಲ. ಬರಗಾಲ ಇದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ರೈತರಿಗೆ ಆತ್ಮಬಲ ನೀಡಿ ಅವರು ಮಾನಸಿಕ ಸಮತೋಲನದಿಂದ ಬದುಕಬೇಕು. ಅದೇ ರೀತಿ ಹಿರಿಯ ನಾಗರಿಕರು ಸಹ ನೆಮ್ಮದಿಯಿಂದ ಬದುಕಬೇಕು. ಆ ಹಿನ್ನೆಲೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅವರು ಹೇಳಿದರು.

ಬಳ್ಳಾರಿಯಲ್ಲಿ ಪ್ರಥಮ ಬಾರಿಗೆ 'ಗಾಂಧಾರಿ ವಿದ್ಯೆ ಸ್ಪರ್ಧೆ' ಆಯೋಜನೆ

ಮಕ್ಕಳ ಏಕಾಗ್ರತೆ, ಆತ್ಮವಿಶ್ವಾಸ, ಗ್ರಹಣಶಕ್ತಿಗೆ ಪ್ರೋತ್ಸಾಹ ನೀಡುವ ವಿಶಿಷ್ಟ ಪ್ರಯತ್ನ

ಬಳ್ಳಾರಿ ಅ,30. ಮಕ್ಕಳಲ್ಲಿ ಏಕಾಗ್ರತೆ, ಆತ್ಮವಿಶ್ವಾಸ, ಸ್ಮರಣಶಕ್ತಿ ಹಾಗೂ ಗ್ರಹಣ ಸಾಮರ್ಥ್ಯವನ್ನು ಉತ್ತೇಜಿಸುವ ಉದ್ದೇಶದಿಂದ ಶ್ರೀ ಮಹಾದೇವ ಶಿಕ್ಷಣ, ಕಲೆ ಹಾಗೂ ಸಾಂಸ್ಕೃತಿಕ ಸಂಸ್ಥೆ, ಬಳ್ಳಾರಿ ವತಿಯಿಂದ ಗಾಂಧಾರಿ ವಿದ್ಯೆ ಸ್ಪರ್ಧೆಯನ್ನು ಭಾನುವಾರ ಬೆಳಗ್ಗೆ 10.30 ಗಂಟೆಗೆ ಬಳ್ಳಾರಿಯ ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಮಂಗಳಾ ಬಸವರಾಜ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾಪ್ರಕಟಣೆ ನೀಡಿರುವ ಅವರು, ಬಳ್ಳಾರಿಯಲ್ಲಿ ಈ ರೀತಿಯ ಸ್ಪರ್ಧೆಯನ್ನು ಪ್ರಪ್ರಥಮ ಬಾರಿಗೆ ಆಯೋಜಿಸುತ್ತಿರುವುದು ವಿಶೇಷವಾಗಿದೆ. ಈ ಗಾಂಧಾರಿ ವಿದ್ಯೆ ಸ್ಪರ್ಧೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬಳ್ಳಾರಿ, ಕುರೇಕುಪ್ಪ, ಸಂಡೂರು, ಕೊಪ್ಪಳ, ಧಾರವಾಡ, ಹಾವೇರಿ, ಸೇರಿದಂತೆ ವಿವಿಧ ಜಿಲ್ಲೆಗಳಿಂದ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ವಿವಿಧ ಪ್ರದೇಶಗಳ ಮಕ್ಕಳು ಒಂದೇ ವೇದಿಕೆಯಲ್ಲಿ ಸೇರಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಈ ಸ್ಪರ್ಧೆ ಅವಕಾಶ ಕಲ್ಪಿಸುತ್ತಿದೆ. ಬಳ್ಳಾರಿಯಲ್ಲಿ ಪ್ರಥಮ ಬಾರಿಗೆ ಆಯೋಜಿಸಲಾಗುತ್ತಿರುವ ಈ ವಿಶಿಷ್ಟ ಕಾರ್ಯಕ್ರಮವು ಮಕ್ಕಳಲ್ಲಿ ಏಕಾಗ್ರತೆ, ಆತ್ಮವಿಶ್ವಾಸ ಮತ್ತು ಕಲಿಕೆಯ ಆಸಕ್ತಿಯನ್ನು ಉತ್ತೇಜಿಸುವ ಪ್ರಯತ್ನವಾಗಿದೆ.

ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಹೊಸ ವಿಷಯಗಳನ್ನು ಕಲಿಯುವ ಆಸಕ್ತಿ ಮತ್ತು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಧೈರ್ಯವನ್ನು ಬೆಳೆಸಲು ಸಹಕಾರಿಯಾಗಬಹುದು ಎಂಬ ಆಶಯವನ್ನು ಸಂಸ್ಥೆ ಹೊಂದಿದೆ ಎಂದು ಅವರು ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ 5 ರಿಂದ 10 ವರ್ಷ ವಯಸ್ಸಿನ ಮಕ್ಕಳಿಗೆ ಕಿರಿಯರ ವಿಭಾಗ ಹಾಗೂ 11ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ ಹಿರಿಯರ ವಿಭಾಗ ಎಂದು ಎರಡು ವಿಭಾಗಗಳನ್ನು ರೂಪಿಸಲಾಗಿದೆ. ಬಣ್ಣಗಳ ಗುರುತಿಸುವಿಕೆ, ವಸ್ತುಗಳ ಗುರುತಿಸುವಿಕೆ, ಅಕ್ಷರ ಮತ್ತು ಸಂಖ್ಯೆಗಳ ಗುರುತಿಸುವಿಕೆ, ಸ್ಪರ್ಶದ ಮೂಲಕ ಗುರುತಿಸುವಿಕೆ, ಸ್ಮರಣಶಕ್ತಿ ಹಾಗೂ ಏಕಾಗ್ರತೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಆಯೋಜಿಸುವ ಉದ್ದೇಶವಿದೆ. ಎಲ್ಲಾ ಪರೀಕ್ಷೆಗಳನ್ನು ನಿಗದಿತ ನಿಯಮಗಳು, ಮಕ್ಕಳ ಸುರಕ್ಷತೆ ಮತ್ತು ಮೇಲ್ವಿಚಾರಣೆಗೆ ಆದ್ಯತೆ ನೀಡಿ ನಡೆಸಲಾಗುವುದು.

ಕಾರ್ಯಕ್ರಮವನ್ನು ಅಖಿಲ ಕರ್ನಾಟಕ ವೀರಶೈವ ಲಿಂಗಾಯತ ಜಾಗತಿಕ ವೇದಿಕೆಯ ರಾಜ್ಯಾಧ್ಯಕ್ಷ ಆರ್. ಪ್ರಭುಶೇಖರ ಗೌಡ ಅವರು ಉದ್ಘಾಟಿಸಲಿದ್ದು, ಸಂಸ್ಥೆಯ ಗೌರವಾಧ್ಯಕ್ಷ ಬಸವರಾಜ್ ಬಿಸಲಹಳ್ಳಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ

ಸಂಘದ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾದ ಎಸ್. ಎಂ. ಭದ್ರಯ್ಯ, ಗಾಂಧಾರಿ ವಿದ್ಯೆ ತರಬೇತುದಾರೆ ಸಂಡೂರಿನ ಉಮಾ ಗಡಿಗಿ, ಯೋಗ ಮತ್ತು ಗಾಂಧಾರಿ ವಿದ್ಯೆ ತರಬೇತುದಾರರಾದ ಕೆ. ಚಿದಂಬರ ರಾವ್ ಹಾಗೂ ಎ. ರಾಘವೇಂದ್ರ ಅವರು ಉಪಸ್ಥಿತರಿರಲಿದ್ದಾರೆ.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಕೆ. ತಿಪ್ಪೇರುದ್ರಪ್ಪ, ಸಾಂಸ್ಕೃತಿಕ ಕಾರ್ಯದರ್ಶಿ ಸುಮಾ ನಾಡಿಗಾರ್ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು, ತರಬೇತುದಾರರು, ಪೋಷಕರು ಹಾಗೂ ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಪ್ರೋತ್ಸಾಹ ನೀಡುವ ಈ ವಿಶಿಷ್ಟ ಪ್ರಯತ್ನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭಾಗವಹಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಹಾಲು ಉತ್ಪಾದಕರ ಸಂಘದಲ್ಲಿ ಪಾರದರ್ಶಕತೆ ಅಗತ್ಯ: ರೇವಣಸಿದ್ದಪ್ಪ

ಬೀದರ್, ಅ. 30: ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿ ಹಾಗೂ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಾಲಕಾಲಕ್ಕೆ ತರಬೇತಿ ನೀಡುವುದು ಅಗತ್ಯ ಎಂದು ಕಲಬುರಗಿ– ಬೀದರ್ ಹಾಗೂ ಯಾದಗಿರಿ ಹಾಲು ಒಕ್ಕೂಟದ ನಿರ್ದೇಶಕ ರೇವಣಸಿದ್ದಪ್ಪ ಪಾಟೀಲ ಹೇಳಿದರು.

ನಗರದ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೀದರ್ ಜಿಲ್ಲಾ ಸಹಕಾರ ಯೂನಿಯನ್, ಹಾಲು ಒಕ್ಕೂಟ ಮತ್ತು ಸಹಕಾರ ಇಲಾಖೆಯ ಆಶ್ರಯದಲ್ಲಿ ಬಸವಕಲ್ಯಾಣ ಹಾಗೂ ಹುಮನಾಬಾದ್ ತಾಲ್ಲೂಕುಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ತರಬೇತಿಯಿಂದ ಸಂಘಗಳ ಕಾರ್ಯನಿರ್ವಹಣೆಯ ಗುಣಮಟ್ಟ ಸುಧಾರಿಸುವುದರ ಜತೆಗೆ ಹಾಲು ಉತ್ಪಾದನೆ ಹೆಚ್ಚಿಸಲು ಸಹಕಾರಿಯಾಗಲಿದೆ. ತರಬೇತಿಯಲ್ಲಿ ನೀಡುವ ಮಾಹಿತಿಯನ್ನು ಕಾರ್ಯದರ್ಶಿಗಳು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಸಂಘಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಡಾ.ನೀಲಾಂಬಿಕಾ ಮಾತನಾಡಿ, ಸಂಘಗಳ ಆಡಳಿತಾತ್ಮಕ ಹಾಗೂ ತಾಂತ್ರಿಕ ಜ್ಞಾನ ಹೆಚ್ಚಿಸಿಕೊಳ್ಳಲು ಇಂತಹ ತರಬೇತಿಗಳಲ್ಲಿ ಭಾಗವಹಿಸಬೇಕು. ಹಣಕಾಸಿನ ವ್ಯವಹಾರಗಳಲ್ಲಿ ಪಾರದರ್ಶಕತೆ ಕಾಪಾಡಲು ಕಾಲಕಾಲಕ್ಕೆ ಲೆಕ್ಕಪರಿಶೋಧನೆ ಮಾಡಿಸಬೇಕು ಎಂದು ಹೇಳಿದರು.

ಪ್ರಾಂಶುಪಾಲ ಅರುಣಕುಮಾರ ಬಿ.ಹರಸೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಬೀದರ್ ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷ ವೈಜಿನಾಥ ಅಣ್ಣೆಪ್ಪ ಆನಂದ ಅಧ್ಯಕ್ಷತೆ ವಹಿಸಿದರು.

ಸೌಹಾರ್ದ ತರಬೇತಿ ಕೇಂದ್ರದ ನಿರ್ದೇಶಕ ಸುಬ್ರಮಣ್ಯ ಪ್ರಭು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು ಹಾಗೂ ಪಶುಪಾಲನಾ ಇಲಾಖೆಯ ಪಶುವೈದ್ಯಾಧಿಕಾರಿ ದೇವಾನಂದ ಅವರು ಶುದ್ಧ ಹಾಲು ಉತ್ಪಾದನೆ ಮತ್ತು ಹಾಲು ಉತ್ಪಾದನೆ ಹೆಚ್ಚಿಸುವ ವಿಧಾನಗಳು ಕುರಿತು ಉಪನ್ಯಾಸ ನೀಡಿದರು.

ರೋಟರಿ ಕ್ರಿಕೆಟ್ ಪ್ರೀಮಿಯರ್ ಲೀಗ್ ಟ್ರಿಡೆಂಟ್ ವಾರಿಯರ್ಸ್‌ಗೆ ಟ್ರೋಫಿ

ಬೀದರ್, ಅ. 30: 'ಟ್ರಿಡೆಂಟ್ ವಾರಿಯರ್ಸ್' ತಂಡವು ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್ ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ರೋಟರಿ ಕ್ರಿಕೆಟ್ ಪ್ರಿಮಿಯರ್ ಲೀಗ್ 3.0 ಚಾಂಪಿಯನ್ ಆಗಿ ಹೊರ ಹೊಮ್ಮಿದೆ.

ನಗರದ ಗುರುನಾನಕ್ ದೇವ ಎಂಜಿನಿಯರಿಂಗ್ ಕಾಲೇಜು ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ 'ಬೀದರ್ ಲೆಜೆಂಡ್ಸ್' ತಂಡವನ್ನು ಮಣಿಸಿ, ದಿವಂಗತ ಬಸವರಾಜ ಪಾಟೀಲ ಹುಮನಾಬಾದ್ ಟ್ರೋಫಿ ಹಾಗೂ 50 ಸಾವಿರ ನಗದು ತನ್ನದಾಗಿಸಿ ಕೊಂಡಿತು.

ರನ್ನರ್ ಅಪ್ 'ಬೀದರ್ ಲೆಜೆಂಡ್ಸ್' ತಂಡವು ತಾಳಂಪಳ್ಳಿ ಗ್ರೂಪ್ಸ್ ಟ್ರೋಫಿ ಹಾಗೂ 25 ಸಾವಿರ ನಗದು ಬಹುಮಾನಕ್ಕೆ ಪಾತ್ರವಾಯಿತು. ಮೊದಲು ಬ್ಯಾಟಿಂಗ್ ಮಾಡಿದ ಟ್ರಿಡೆಂಟ್ ವಾರಿಯರ್ಸ್ ತಂಡವು 5 ವಿಕೆಟ್ ನಷ್ಟಕ್ಕೆ ನಿಗದಿತ 12 ಓವರ್‌ಗಳಲ್ಲಿ ಬೃಹತ್ 128 ರನ್ ಬಾರಿಸಿತು.

ನಂತರ ಬ್ಯಾಟಿಂಗ್‌ಗೆ ಇಳಿದ ಬೀದರ್ ಲೆಜೆಂಡ್ಸ್ ತಂಡವು 12 ಓವರ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು 81 ರನ್ ಗಳಿಸಿ ಸೋಲು ಕಂಡಿತು.

ಫೈನಲ್ ಪಂದ್ಯದಲ್ಲಿ ಉತ್ತಮ ಆಟ ಪ್ರದರ್ಶಿಸಿದ ಜೈಗಣೇಶ ಪಂದ್ಯ ಪುರುಷ ಟ್ರೋಫಿ ಮತ್ತು ಅತಿ ಹೆಚ್ಚು ವಿಕೆಟ್‌ಗಾಗಿ ಪರ್ಪಲ್ ಟೋಪಿ, ಜಿತೇಂದ್ರ ರಾಠೋಡ್ ಸರಣಿ ಪುರುಷೋತ್ತಮ ಟ್ರೋಫಿ, ಅತಿ ಹೆಚ್ಚು ರನ್ ಟ್ರೋಫಿ ಹಾಗೂ ಅತಿ ಹೆಚ್ಚು ಸಿಕ್ಸರ್‌ಗಾಗಿ ಆರೆಂಜ್ ಟೋಪಿ, ಹರ್ಷದ್ ಪಟೇಲ್ ಉತ್ತಮ ಫೀಲ್ಡರ್ ಟ್ರೋಫಿ ಪಡೆದರು.

ವಿಜೇತ ಹಾಗೂ ರನ್ನರ್ ಅಪ್ ತಂಡಗಳಿಗೆ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ, ಎನ್‌ಎಸ್‌ಎಸ್‌ಕೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ ಹಾಗೂ ಉದ್ಯಮಿ ಸಂತೋಷ್ ತಾಳಂಪಳ್ಳಿ ಅವರು ಟ್ರೋಫಿ ಹಾಗೂ ನಗದು ಪ್ರದಾನ ಮಾಡಿದರು.

ದಲಿತ, ಶೋಷಿತರ ಮೇಲಿನ ದೌರ್ಜನ್ಯ ತಡೆಯಲು ಅಗ್ರಹಿಸಿ ಧರಣಿ

ರಾಯಚೂರು, ಅ. 30: ಜಿಲ್ಲೆಯ ಮಸ್ಕಿ ಕ್ಷೇತ್ರದ ತಿಡಿಗೋಳ ಗ್ರಾಮದಲ್ಲಿ ದಲಿತರು, ವಾಲ್ಮೀಕಿ ಹಾಗೂ ಇತರ ಶೋಷಿತ ಸಮುದಾಯಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದ್ದು, ಹಲ್ಲೆ ನಡೆಸಿದ ಆರೋಪಿಗಳನ್ನು ಕೂಡಲೇ ಬಂಧಿಸಿ, ಸಂತ್ರಸ್ತರಿಗೆ ರಕ್ಷಣೆ ಒದಗಿಸಬೇಕು. ದೌರ್ಜನ್ಯಗಳನ್ನು ತಡೆಯುವಂತೆ ಗ್ರಾಮಸ್ಥ ತಾಯಪ್ಪ ತಿಡಿಗೋಳ ಆಗ್ರಹಿಸಿದರು.

ತಿಡಿಗೋಳ ಗ್ರಾಮದ ಮಾರುತೇಶ್ವರ ಜಾತ್ರೆಯಲ್ಲಿ ಪಾಲ್ಗೊಂಡಿದ್ದ ಮಾದಿಗ ಸಮುದಾಯದ ಯುವಕರನ್ನು ಮೇಲ್ವರ್ಗದ ಕೆಲವರು ತಡೆದು, ಹಲ್ಲೆ ನಡೆಸಿದ್ದಾರೆ. ಹುಸೇನಪ್ಪ ಹರಿಜನ, ಹೊಳಿಯಪ್ಪ, ದುರುಗೇಶ, ನಾಗರಾಜ ಸೇರಿದಂತೆ ಹಲವು ಯುವಕರ ಮೇಲೆ ಸಾಮೂಹಿಕವಾಗಿ ಹಲ್ಲೆ ನಡೆಸಲಾಗಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ಆರೋಪಿಸಿದರು.

ಯುವಕರ ಮೇಲಿನ ಹಲ್ಲೆಯನ್ನು ಪ್ರಶ್ನಿಸಿದಾಗ ದಲಿತ ಕೇರಿಯತ್ತ ನುಗ್ಗಿದ ಗುಂಪು ಮಹಿಳೆಯರು, ವೃದ್ಧರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಮೇಲೂ ಹಲ್ಲೆ ನಡೆಸಿದೆ. 200ರಿಂದ 300 ಜನರು ದಲಿತ ಸಮುದಾಯದವರ ಮೇಲೆ ದಾಳಿ ನಡೆಸಿದ್ದು, ಮನೆಗಳ ಮುಂದಿನ ಕಟ್ಟೆಗಳನ್ನು ಧ್ವಂಸಗೊಳಿಸಲಾಗಿದೆ. ಇದರಿಂದ ಗ್ರಾಮದಲ್ಲಿ ದಲಿತ ಕುಟುಂಬಗಳು ಭಯದಿಂದ ಬದುಕುವಂತಾಗಿದೆ ಎಂದು ದೂರಿದರು.

ತಹಶೀಲ್ದಾರ್ ಮತ್ತು ಡಿವೈಎಸ್‌ಪಿ ಭೇಟಿ ನೀಡಿದ್ದಾರೆಯೇ ಹೊರತು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಿಲ್ಲ ಎಂದು ಆರೋಪಿಸಿದರು.

ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ವಕೀಲ ಎಸ್. ಮಾರೆಪ್ಪ ಮಾತನಾಡಿ, ಘಟನೆ ನಡೆದು ಒಂಬತ್ತು ದಿನ ಕಳೆದರೂ ಆರೋಪಿಗಳ ಬಂಧನವಾಗಿಲ್ಲ. ದಲಿತರ ವಿರುದ್ಧವೇ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಸಾಮಾಜಿಕ ಬಹಿಷ್ಕಾರ ಹೇರಲಾಗಿದೆ ಎಂದು ದೂರಿದರು.

ಹೋರಾಟಗಾರ ರವೀಂದ್ರನಾಥ ಪಟ್ಟಿ ಮಾತನಾಡಿ, ಜಿಲ್ಲೆಯಲ್ಲಿ ದಲಿತರ ಮೇಲಿನ ದೌರ್ಜನ್ಯ, ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ಹೆಚ್ಚುತ್ತಿದ್ದರೂ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ತಿಡಿಗೋಳದ ದೌರ್ಜನ್ಯ ಮತ್ತು ಅಸ್ಪೃಶ್ಯತೆ ಕುರಿತು ವರದಿ ನೀಡಿದ್ದರೂ ಕ್ರಮವಾಗಿಲ್ಲ ಎಂದರು.

ಸಿಂಧನೂರಿಗೆ ಆಗಮಿಸಲಿರುವ ಮುಖ್ಯಮಂತ್ರಿ ಅವರಿಗೆ ದಲಿತರ ರಕ್ಷಣೆಗಾಗಿ ಆಗ್ರಹಿಸಿ ಕಪ್ಪುಪಟ್ಟಿ ಪ್ರದರ್ಶಿಸಿ ಮನವಿ ಸಲ್ಲಿಸಲಾಗುವುದು. ನ. 8ರಂದು ತಿಡಿಗೋಳ ಗ್ರಾಮದಲ್ಲಿ ಮುಖ್ಯಮಂತ್ರಿ, ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಪ್ರತಿಭಟನೆ ನಡೆಸಿ, 'ತಿಡಿಗೋಳ ಚಲೋ' ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು, ದಲಿತರಿಗೆ ಸೂಕ್ತ ರಕ್ಷಣೆ ನೀಡಬೇಕು ಹಾಗೂ ದೌರ್ಜನ್ಯ ನಡೆಸಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದರೆ ಆರೋಪಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಜರುಗಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಕಲಬುರಗಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ

ಪ್ರಾದೇಶಿಕ ಕೇಂದ್ರದಲ್ಲಿ 5ಜಿ ಲ್ಯಾಬ್ ರಾಜ್ಯದಲ್ಲೇ ಅತ್ಯುತ್ತಮ ಸಾಧನೆ

ಕಲಬುರಗಿ, ಅ. 30: ನಗರದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು)ಲ್ಲಿ ಕೇಂದ್ರ ಸರ್ಕಾರದ ದೂರಸಂಪರ್ಕ ಇಲಾಖೆ 5ಜಿ ಲ್ಯಾಬ್ (ಪ್ರಯೋಗಾಲಯ) ಸ್ಥಾಪಿಸಿ ಅತ್ಯುತ್ತಮ ಸಾಧನೆ ತೋರಿ ರಾಜ್ಯದಲ್ಲೆ ಪ್ರಥಮ ಹಾಗೂ ದೇಶದಲ್ಲೆ ಉತ್ತಮ ಎಂಬ ಶ್ರೇಯಸ್ಸಿಗೆ ಪಾತ್ರವಾಗಿದೆ.

ಮೂರು ವರ್ಷದ ಹಿಂದೆ ಪ್ರಧಾನಿ ನರೇಂದ್ರ ಮೋದಿ ವಿಟಿಯು ಕಲಬುರಗಿ ಪ್ರಾದೇಶಿಕ ಕೇಂದ್ರ ಸೇರಿ ದೇಶದ 100 ಪ್ರಮುಖ ಸಂಸ್ಥೆಗಳಲ್ಲಿ 5ಜಿ ಪ್ರಯೋಗಾಲಯ ಸ್ಥಾಪಿಸಿದ್ದಾರೆ. ಆದರೆ ಕಲಬುರಗಿ ಪ್ರಯೋಗಾಲಯ ತನ್ನ ಕಾರ್ಯಮತೆಯಿಂದ ರಾಜ್ಯದಲ್ಲಿ ಸ್ಥಾಪನೆ ಆಗಿರುವ 8 ಪ್ರತಿಷ್ಠಿತ ಸಂಸ್ಥೆಗಳಲ್ಲಿನ 5ಜಿ ಪ್ರಯೋಗಗಳಲ್ಲಿ ಮೊದಲ ಸ್ಥಾನ ಪಡೆದಿದ್ದು ವಿಟಿಯುಗೆ ಹೆಮ್ಮೆಯ ಸಂಗತಿ ಎಂದು ಕೇಂದ್ರದ ನಿರ್ದೇಶಕಿ ಡಾ.ಶುಭಾಂಗಿ ಡಿ.ಸಿ ಹಾಗೂ ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಪ್ರೊ.ಬಸವರಾಜ ಗಾದಗೆ ತಿಳಿಸಿದರು.

ಕರ್ನಾಟಕದ ಐಐಎಸ್‌ಸಿ (ಭಾರತೀಯ ವಿಜ್ಞಾನ ಸಂಸ್ಥೆ) ಬೆಂಗಳೂರು. ಎನ್‌ಐಟಿಕೆ ಸುರತ್ಕಲ್, ಐಐಐಟಿ ಧಾರವಾಡ, ಎಸ್‌ಐಟಿ ತುಮಕೂರು, ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಎಂ.ಎಸ್. ರಾಮಯ್ಯ ತಂತ್ರಾನ ಸಂಸ್ಥೆ ಮತ್ತು ಎಂಐಟಿ ಮಣಿಪಾಲ ಸಂಸ್ಥೆಯಲ್ಲಿ 5ಜಿ ಲ್ಯಾಬ್‌ಗಳಿವೆ. ಆದರೆ ವಿಟಿಯು ಕಲಬುರಗಿ ಕೇಂದ್ರದ ಪ್ರಯೋಗಾಲಯ ಟಾಪ್ ಪರ್ಫಾಮಿರ್ಂಗ್ ಲ್ಯಾಬ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕುರಿತು ದೂರಸಂಪರ್ಕ ಇಲಾಖೆ ಕರ್ನಾಟಕ ವೃತ್ತದ ಉಪ ಮಹಾನಿರ್ದೇಶಕ ಶ್ರೀನಿವಾಸ ಗಲಗಲಿ ಅವರು ವಿಟಿಯು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಅವರಿಗೆ ಪತ್ರ ಬರೆದು ತಿಳಿಸಿದ್ದಾರೆ.

ಒಟ್ಟಾರೆ ಕಲಬುರಗಿಗೆ ಪ್ರಯೋಗಾಲಯ ಸ್ಥಾಪನೆಯಾಗಲು ಹಾಗೂ ಕಾರ್ಯಮತೆ ತೋರಲು ಕುಲಪತಿ ಪ್ರೊ.ವಿದ್ಯಾಶಂಕರ್ ಅವರ ಪ್ರಯತ್ನ ಮತ್ತು ಮಾರ್ಗದರ್ಶನ ಕಾರಣ ಎಂದು ಹೇಳಿದರು.

ನಾಲ್ಕು ಪೇಟೆಂಟ್: 5ಜಿ ಪ್ರಯೋಗಾಲಯ ನಾಲ್ಕು ಪೇಟೆಂಟ್ ಪಡೆದಿದೆ. ಡ್ರೋನ್ ಮೂಲಕ ಕೀಟನಾಶಕ ಸಿಂಪಡಣೆ ಸೇರಿದ್ದು, ಪ್ರಮುಖವಾಗಿ ಈ ಉನ್ನತ ಗುಣಮಟ್ಟದ ಕಾರ್ಯಮತೆ ಉಳಿಸಿಕೊಳ್ಳಲು ಮತ್ತು ಪೇಟೆಂಟ್ ಉತ್ಪಾದನೆ, ತಂತ್ರಜ್ಞಾನ ವಾಣಿಜ್ಯೀಕರಣ ಮತ್ತು ರಾಷ್ಟ್ರಕ್ಕಾಗಿ ಸ್ಥಳಿಯ ಪರಿಹಾರಗಳ ಅಭಿವೃದ್ಧಿಯತ್ತ 5ಜಿ ಬಳಸಿಕೊಳ್ಳಲು ವಿಟಿಯು ಬದ್ಧತೆ ಹೊಂದಿದೆ.

ಒಟ್ಟಾರೆ ವಿಟಿಯು ಪ್ರಾದೇಶಿಕ ಕೇಂದ್ರದ 5ಜಿ ಪ್ರಯೋಗಾಲಯ ದೇಶದ ಗಮನ ಸೆಳೆದಿದ್ದು, ಶೈಣಿಕ ಬಲವರ್ಧನೆಗೆ ಪ್ರೋತ್ಸಾಹ ದೊರೆತಂತಾಗಿದೆ ಎಂದು ಪ್ರೊ.ಶುಭಾಂಗಿ ಹಾಗೂ ಪ್ರೊ.ಬಸವರಾಜ ಗಾದಗೆ ಸಂತಸಪಟ್ಟರು.

ಮಹರ್ಷಿ ವಾಲ್ಮೀಕಿ ಸಾಧನೆ ಪ್ರತಿಯೊಬ್ಬರಿಗೂ ಸ್ಫೂರ್ತಿ: ಬಳ್ಳಾರಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಬೀದರ್, ಅ. 30: ಜಿಲ್ಲಾಡಳಿತದಿಂದ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ ದೀಪ ಬೆಳಗಿಸಿ ಮಾತನಾಡಿ, ಮಹರ್ಷಿ ವಾಲ್ಮೀಕಿಯವರ ತಪಸ್ಸು ಮತ್ತು ಸಾಧನೆ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾದುದು.

ಪರಿವರ್ತನೆ ಎಂಬುದು ಯಾರಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಸಾಧ್ಯ ಎಂಬುದಕ್ಕೆ ಅವರ ಜೀವನವೇ ಸಾಕ್ಷಿ. ಸಮಾಜದ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು. ಶಿಕ್ಷಣದಿಂದ ಮಾತ್ರ ಸಮಾನತೆ ಹಾಗೂ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ.

ಅಕ್ಷರ ಜ್ಞಾನ ಮತ್ತು ಸನ್ಮಾರ್ಗದ ಬೆಳಕನ್ನು ಸಮಾಜಕ್ಕೆ ನೀಡಿದ ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳು ಹಾಗೂ ಮೌಲ್ಯಗಳು ಸಾರ್ವಕಾಲಿಕವಾದುದು. ಪ್ರತಿಯೊಬ್ಬರೂ ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದ ಪ್ರಗತಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ವಾಲ್ಮೀಕಿ ಅವರು ಬರೆದ ರಾಮಾಯಣ ಮಹಾಕಾವ್ಯವು ಕೇವಲ ಧಾರ್ಮಿಕ ಗ್ರಂಥವಲ್ಲ, ಅದು ಮಾನವೀಯ ಮೌಲ್ಯಗಳ ಸಾಗರ. ತಂದೆ–ತಾಯಿ, ಸಹೋದರರು ಮತ್ತು ಸಮಾಜದೊಂದಿಗಿನ ಬಾಂಧವ್ಯ ಹೇಗಿರಬೇಕು ಎಂಬುದನ್ನು ಅದು ತಿಳಿಸಿಕೊಡುತ್ತದೆ ಎಂದರು.

ರಾಜೋತ್ಸವ ಪ್ರಶಸ್ತಿಗೆ ಭಾಜನರಾದ ಸುಪ್ರಸಿದ್ಧ ಜಾನಪದ ಕಲಾವಿದ ಸುರೇಶ ರಾಮಚಂದ್ರ ಜೋಶಿ ಅವರಿಗೆ ಆತ್ಮೀಯ ಸನ್ಮಾನ

ವಿಜಯಪುರ, ಅ.30– ಈ ವರ್ಷದ ಕನ್ನಡ ರಾಜೋತ್ಸವ ಪ್ರಶಸ್ತಿಗೆ ಭಾಜನರಾದ ಜಿಲ್ಲೆಯ ಸುಪ್ರಸಿದ್ಧ ಜಾನಪದ ಕಲಾವಿದ (ಡೊಳ್ಳಿನ ಪದಗಳು) ಸುರೇಶ ರಾಮಚಂದ್ರ ಜೋಶಿ ಅವರನ್ನು ನಗರದ ಅವರ ಮನೆಗೆ ತಾವೇ ಖುದ್ದಾಗಿ ಹೋಗಿ ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಅವರು ಆತ್ಮೀಯವಾಗಿ ಸನ್ಮಾನಿಸಿದರು.

ಅಬ್ದುಲ್ ಹಮೀದ್ ಮುಶ್ರೀಫ್ ಅವರು ಮಾತನಾಡುತ್ತಾ 71ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಜಾನಪದ ಕ್ಷೇತ್ರದಲ್ಲಿ (ಡೊಳ್ಳಿನ ಪದಗಳು) ಅಮೂಲ್ಯ ಕೊಡುಗೆ ನೀಡಿರುವ ಸುರೇಶ್ ರಾಮಚಂದ್ರ ಜೋಶಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾಗಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದ್ದು, ಇದರಿಂದ ನಮಗೆಲ್ಲರಿಗೂ ಬಹಳ ಸಂತೋಷ ವಾಗಿದೆ ಎಂದರು.

ಜಾನಪದ ಕಲಾ ಸೇವೆ, ನಿರಂತರ ಪರಿಶ್ರಮ ಹಾಗೂ ಸಾಧನೆಯ ಮೂಲಕ ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಿರುವ ತಮ್ಮ ಈ ಸಾಧನೆ ಸದಾ ಸ್ಮರಣೀಯ ಎಂದರು.

ಅಂತೆಯೇ ತಮ್ಮ ಈ ಸಾಧನೆ ನಾಡಿನ ಯುವಜನತೆಗೆ ಸ್ಫೂರ್ತಿಯಾಗಿದೆ. ಕನ್ನಡನಾಡು, ನುಡಿ ಹಾಗೂ ಸಂಸ್ಕೃತಿಯ ಹಿರಿಮೆಯನ್ನು ಎಲ್ಲೆಡೆ ಪಸರಿಸುವ ತಮ್ಮ ಕಲಾ ಪಯಣ ಹೀಗೆಯೇ ನಿರಂತರವಾಗಿ ಸಾಗಲಿ ಎಂದು ಅವರು ಶುಭ ಹಾರೈಸಿದರು.

ಕಲಬುರಗಿಗೆ ಹೊಸ ಪ್ರಾದೇಶಿಕ ಅಂಚೆ ಕಚೇರಿ ಮಂಜೂರು

ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ರವರಿಗೆ ಅಂಚೆ ಸಿಬ್ಬಂದಿಯಿಂದ ಕೃತಜ್ಞತಾ ಸನ್ಮಾನ

ಕಲ್ಯಾಣ ಕರ್ನಾಟಕ ಭಾಗದ ಅಂಚೆ ಇಲಾಖೆಯ ಸಿಬ್ಬಂದಿಗಳ ಹಾಗೂ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದ ಕಲಬುರಗಿ ಪ್ರಾದೇಶಿಕ ಅಂಚೆ ಕಚೇರಿಯನ್ನು ಮಂಜೂರಿ ಮಾಡಿಸಿದ ಹಿನ್ನೆಲೆಯಲ್ಲಿ, ಜಿಲ್ಲಾ ಅಂಚೆ ಇಲಾಖೆಯ ಅಧಿಕಾರಿಗಳು ಹಾಗೂ ಭಾರತೀಯ ಅಂಚೆ ಸಿಬ್ಬಂದಿಗಳ ಅಸೋಷಿಯೇಷನ್ ಮುಖಂಡರು ಕೇಂದ್ರದ ಮಾಜಿ ಸಚಿವರಾದ ಶ್ರೀ ಭಗವಂತ ಖೂಬಾ ಅವರನ್ನು ಅವರ ಗೃಹ ಕಚೇರಿಯಲ್ಲಿ ಭೇಟಿಯಾಗಿ ಸನ್ಮಾನಿಸಿ ಧನ್ಯವಾದಗಳನ್ನು ಅರ್ಪಿಸಿದರು.

ಕಳೆದ 12 ದಿನಗಳ ಹಿಂದೆಯಷ್ಟೇ (17–10–2026) ಅಂಚೆ ಇಲಾಖೆ ಅಸೋಷಿಯೇಷನ್ ಪದಾಧಿಕಾರಿಗಳು ಶ್ರೀ ಭಗವಂತ ಖೂಬಾ ಅವರನ್ನು ಭೇಟಿಯಾಗಿ, ಪ್ರತಿಯೊಂದು ಅಧಿಕೃತ ಕೆಲಸಗಳಿಗೂ ಧಾರವಾಡದ ಪ್ರಾದೇಶಿಕ ಕಚೇರಿಗೆ ಹೋಗಬೇಕಾದ ಅನಿವಾರ್ಯತೆ ಹಾಗೂ ಅದರಿಂದ ಕಲ್ಯಾಣ ಕರ್ನಾಟಕ ಭಾಗದ ಜನರಿಗಾಗುತ್ತಿರುವ ಅನಾನುಕೂಲಗಳ ಕುರಿತು ಅಳಲು ತೋಡಿಕೊಂಡಿದ್ದರು.

ಅಂಚೆ ಸಿಬ್ಬಂದಿಯ ಮನವಿಗೆ ತಕ್ಷಣ ಸ್ಪಂದಿಸಿದ ಖೂಬಾ ಅವರು, ಕೇಂದ್ರ ದೂರಸಂವಹನ ಸಚಿವರಾದ ಶ್ರೀ ಜ್ಯೋತಿರಾದಿತ್ಯ ಸಿಂಧೀಯಾ, ಭಾರತೀಯ ಅಂಚೆ ಇಲಾಖೆ ಕಾರ್ಯದರ್ಶಿಗಳು ಹಾಗೂ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ (ಬೆಂಗಳೂರು) ಅವರಿಗೆ ಪತ್ರ ಬರೆದು, ಕಲಬುರಗಿಯಲ್ಲಿಯೇ ಪ್ರಾದೇಶಿಕ ಕಚೇರಿ ಪ್ರಾರಂಭಿಸುವಂತೆ ನೇರವಾಗಿ ಒತ್ತಾಯಿಸಿದ್ದರು. ಖೂಬಾ ಅವರ ಪ್ರಯತ್ನದ ಫಲವಾಗಿ, ಪತ್ರ ಬರೆದ ಕೇವಲ 12 ದಿನಗಳ ಒಳಗಾಗಿ ಕೇಂದ್ರ ಸರ್ಕಾರವು ಕಲಬುರಗಿಯಲ್ಲಿ ಪ್ರಾದೇಶಿಕ ಕಚೇರಿ ಆರಂಭಿಸಲು ಹಸಿರು ನಿಶಾನೆ ನೀಡಿದೆ. ಗೃಹ ಕಚೇರಿಯಲ್ಲಿ ನಡೆದ ಸೌಹಾರ್ದಯುತ ಚರ್ಚೆಯ ವೇಳೆ, 2014ರಲ್ಲಿ ಮೊದಲ ಬಾರಿ ಸಂಸದರಾಗಿ ಆಯ್ಕೆಯಾದಾಗ ದೇಶದ ಅಂಚೆ ನೌಕರರ ಸಂಬಳ ಹೆಚ್ಚಳಕ್ಕೆ ಸಂಸತ್ತಿನಲ್ಲಿ ಪ್ರಥಮವಾಗಿ ಧ್ವನಿ ಎತ್ತಿದ್ದ ಖೂಬಾ ಅವರ ಐತಿಹಾಸಿಕ ನಡೆಯನ್ನು ಸಿಬ್ಬಂದಿಗಳು ಕೃತಜ್ಞತೆಯಿಂದ ಸ್ಮರಿಸಿದರು.

ಸಿಬ್ಬಂದಿಗಳ ಗೌರವ ಸ್ವೀಕರಿಸಿ ಮಾತನಾಡಿದ ಮಾಜಿ ಸಚಿವ ಭಗವಂತ ಖೂಬಾ ಅವರು, "2014 ಕ್ಕಿಂತ ಮುಂಚೆ ಅಂಚೆ ಇಲಾಖೆಯನ್ನು ಮುಚ್ಚುವ ಉದ್ದೇಶವನ್ನು ಅಂದಿನ ಸರ್ಕಾರ ಹೊಂದಿತ್ತು. ಆದರೆ ಮೋದಿ ಸರ್ಕಾರ ಬಂದ ನಂತರ ಇಲಾಖೆಗೆ ಸಂಪೂರ್ಣ ಹೊಸ ರೂಪ ನೀಡಲಾಗಿದ್ದು, ಇಂದು ಪ್ರತಿದಿನ ನೂರಾರು ಪಾಸ್‌ಪೋರ್ಟ್, ಆಧಾರ್ ಕಾರ್ಡ್ ಸೇವೆಗಳು, ಪೋಸ್ಟ್ ಪೇಮೆಂಟ್ ಬ್ಯಾಂಕ್ ಹಾಗೂ ವೃದ್ಧಾಪ್ಯ ವೇತನದಂತಹ, ಸುಕನ್ಯಾ ಸಮೃದ್ಧಿ ಯೋಜನೆಯಂತಹ ಜನಪರ ಸೇವೆಗಳನ್ನು ಯಶಸ್ವಿಯಾಗಿ ನೀಡಲಾಗುತ್ತಿದೆ" ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ರಾಂತಿ ಮಾಡುವ ಉದ್ದೇಶದಿಂದ ಕಳೆದ 10 ವರ್ಷಗಳಲ್ಲಿ ರೈಲ್ವೆ, ಹೈವೆ, ಏರ್‌ಪೋರ್ಟ್, ಸೈನಿಕ ಶಾಲೆ, ಸಿಪೆಟ್ (ಅಿಮಕಇಖ) ಕಾಲೇಜು, ಸೋಲಾರ್ ಯೋಜನೆ ಹಾಗೂ ಪಾಸ್‌ಪೋರ್ಟ್ ಸೇವಾ ಕೇಂದ್ರಗಳನ್ನು ತರಲಾಗಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ತಿಳಿಸಿದರು. ಈ 5 ವರ್ಷಗಳಲ್ಲಿ ಜಿಲ್ಲೆಯ ಔದ್ಯೋಗಿಕರಣಕ್ಕೆ ಯೋಜನೆ ಹೊಂದಿದ್ದು, ಸದ್ಯ ಅದು ತಾತ್ಕಾಲಿಕವಾಗಿ ಮುಂದಕ್ಕೆ ಹೋಗಿದೆ. ಮುಂದಿನ ದಿನಗಳಲ್ಲಿ ಜನತೆಯ ಆಶೀರ್ವಾದದಿಂದ ಅದನ್ನು ಪೂರ್ಣಗೊಳಿಸುವುದಾಗಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಂಚೆ ಇಲಾಖೆಯ ಪೋಸ್ಟ್ ಮಾಸ್ಟರ್ ರಾಜೇಂದ್ರ ವಗ್ಗೆ, ಉಪ ಅಂಚೆ ಅಧಿಕಾರಿ ಕಾಶಿನಾಥ ವರ್ಮಾ, ಸಹಾಯಕ ಪ್ರವೀಣ, ಮೇಲ್ವಿಚಾರಕ ಪ್ರಶಾಂತ ಫಾಳೆ, ಪ್ರದೀಪ ನಾಯಕವಾಡೆ, ರಾಜೇಂದ್ರ, ವೆಂಕಟೇಶ, ಮಹೇಶ, ರಾಧಾಕೃಷ್ಣನ್ ಹಾಗೂ ಬಾಲಕೃಷ್ಣನ್ ಸೇರಿದಂತೆ ಅಸೋಷಿಯೇಷನ್ ಮುಖಂಡರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅಂಬಾರಿ ಆನೆ ಆಯ್ಕೆ ವಿವಾದ ಜಿಲ್ಲಾಧಿಕಾರಿಗೆ ಡಿಸಿಎಫ್ ಪ್ರಭುಗೌಡ ಪತ್ರ ಬರೆದು ಸ್ಪಷ್ಟನೆ

ಮೈಸೂರು, ಅ.30: ದಸರಾ ಅಂಬಾರಿ ಆನೆ ಆಯ್ಕೆ ವಿಚಾರದಲ್ಲಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರಿಗೆ ಮಾಹಿತಿ ನೀಡಿಲ್ಲ ಎಂಬ ಆರೋಪಕ್ಕೆ ಸಂಬಂಧಿಸಿ ದಂತೆ ಡಿಸಿಎಫ್ ಪ್ರಭುಗೌಡ ಜಿಲ್ಲಾಧಿಕಾರಿಗೆ ಪತ್ರ ಬರೆದು ಸ್ಪಷ್ಟನೆ ನೀಡಿದ್ದಾರೆ. ಅಂಬಾರಿ ಆನೆ ಆಯ್ಕೆ ಕುರಿತು ರಾಜ ಮನೆತನಕ್ಕೆ ಲಿಖಿತವಾಗಿ, ಔಪಚಾರಿಕವಾಗಿ ಅಥವಾ ಅಧಿಕೃತವಾಗಿ ಮಾಹಿತಿ ನೀಡುವ ಪದ್ಧತಿ ಅರಣ್ಯ ಇಲಾಖೆಯಲ್ಲಿ ಇಲ್ಲ. ಆದರೂ ಸಮನ್ವಯದ ದೃಷ್ಟಿಯಿಂದ ಅ.11 ಮತ್ತು 12ರಂದು ದೂರವಾಣಿ ಮೂಲಕ ಸೂಕ್ತ ಮಾಹಿತಿಯನ್ನು ನೀಡಲಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಅ. 12ರಂದು ಸಂಜೆ 5.44ಕ್ಕೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರಿಗೆ ದೂರವಾಣಿ ಮೂಲಕ ಅಂಬಾರಿ ಆನೆ ಆಯ್ಕೆ ವಿಚಾರವಾಗಿ ವಿವರಿಸಲಾಗಿದೆ. ಅ. 13ರಂದು ಪತ್ರಿಕಾ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೂ ಮಾಹಿತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮಹೇಂದ್ರ ಆನೆ ಆಯ್ಕೆ ಮಾಡದಿರಲು ಕಾರಣವೇನು?

ಅಂಬಾರಿ ಹೊರುವ ಆನೆಯ ಆಯ್ಕೆ ಪ್ರಕ್ರಿಯೆಯಲ್ಲಿ ಮಹೇಂದ್ರ ಆನೆಯನ್ನು ಆಯ್ಕೆ ಮಾಡದಿರಲು ಕಾರಣವೇನು ಎಂಬುದರ ಬಗ್ಗೆಯೂ ಡಿಸಿಎಫ್ ವಿವರಣೆ ನೀಡಿದ್ದಾರೆ. ಈ ಬಾರಿ ಪ್ರಶಾಂತ ಆನೆಯನ್ನು ಆಯ್ಕೆ ಮಾಡಲು ಪರಿಗಣಿಸಿದ ಮಾನದಂಡ ಹಾಗೂ ಆಯ್ಕೆ ಪ್ರಕ್ರಿಯೆಯ ಕುರಿತು ಸುದೀರ್ಘವಾಗಿ ಪತ್ರದಲ್ಲಿ ವಿವರಿಸಿದ್ದಾರೆ.

ಅಂಬಾರಿ ಆನೆ ಆಯ್ಕೆ ವಿಚಾರದಲ್ಲಿ ಇಲಾಖೆಯು ಮಾಹಿತಿ ನೀಡಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿರುವ ಪ್ರಭುಗೌಡ, ರಾಜಮನೆತನದೊಂದಿಗೆ ಸಮನ್ವಯ ಸಾಧಿಸುವ ಉದ್ದೇಶದಿಂದ ದೂರವಾಣಿ ಮೂಲಕ ಮಾಹಿತಿ ನೀಡಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ. ಪ್ರಮೋದಾದೇವಿ ಒಡೆಯರ್ ಅವರ ಆರೋಪದ ಬೆನ್ನಲ್ಲೇ ಡಿಸಿಎಫ್ ಪ್ರಭುಗೌಡ ಜಿಲ್ಲಾಧಿಕಾರಿಗೆ ಪತ್ರ ಬರೆದು ನೀಡಿರುವ ಈ ಸ್ಪಷ್ಟನೆ ದಸರಾ ಅಂಬಾರಿ ಆನೆ ಆಯ್ಕೆ ವಿಚಾರದ ಚರ್ಚೆಗೆ ಮತ್ತಷ್ಟು ಮಹತ್ವ ನೀಡಿದೆ.

ಸೌಜನ್ಯ ಕೊಲೆ ಪ್ರಕರಣ: ಎಸ್‌ಐಟಿ ನೂತನ ಮುಖ್ಯಸ್ಥರಾಗಿ ಚೇತನ್‌ಸಿಂಗ್ ರಾಥೋಡ್ ನೇಮಕ

ಮಂಗಳೂರು, ಅ.30: ರಾಜ್ಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿರುವ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರುತನಿಖೆಗಾಗಿ ರಚಿಸಲಾಗಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ನೂತನ ಮುಖ್ಯಸ್ಥರಾಗಿ ಬೆಂಗಳೂರಿನ ಸಿಐಡಿ ವಿಭಾಗದ ಐಜಿಪಿ ಚೇತನ್ ಸಿಂಗ್ ರಾಥೋಡ್ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

ಈ ಹಿಂದೆ ಎಸ್‌ಐಟಿ ಮುಖ್ಯಸ್ಥರಾಗಿದ್ದ ಐಜಿಪಿ ಎನ್. ಶಶಿಕುಮಾರ್ ಅವರು ತಮ್ಮನ್ನು ಈ ಜವಾಬ್ದಾರಿಯಿಂದ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ ಅಕ್ಟೋಬರ್ 30ರ ಶುಕ್ರವಾರ ರಾಜ್ಯ ಸರ್ಕಾರ ಚೇತನ್ ಸಿಂಗ್ ಅವರನ್ನು ನೂತನ ಮುಖ್ಯಸ್ಥರನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.

ಸೌಜನ್ಯ ಪ್ರಕರಣದ ತನಿಖೆಯ ಕುರಿತು ಪ್ರಶ್ನೆಗಳನ್ನು ಎತ್ತಿದ್ದ ಕೆಲವರು, ಶಶಿಕುಮಾರ್ ಅವರು ಧರ್ಮಸ್ಥಳ ದೇವಸ್ಥಾನದ ಆಡಳಿತ ಮಂಡಳಿಗೆ ಹತ್ತಿರವಾಗಿದ್ದಾರೆ ಎಂದು ಆರೋಪಿಸಿದ್ದರು.

ಮಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಅವಧಿಯಲ್ಲಿಯೂ ಅವರ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಲಾಗಿತ್ತು.

ಇದಲ್ಲದೆ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವೆಂಕಟೇಶ್ ಪ್ರಸನ್ನ ಮನವಿಯ ಮೇರೆಗೆ ಅವರನ್ನು ಎಸ್‌ಐಟಿಯಿಂದ ಬದಲಾಯಿಸಲಾಗಿದೆ. ಅವರ ಸ್ಥಾನಕ್ಕೆ ಹಾಸನದ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶ್ರೀನಿಧಿ ಅವರನ್ನು ಎಸ್‌ಐಟಿ ಸದಸ್ಯರನ್ನಾಗಿ ನೇಮಿಸಲಾಗಿದೆ.

ಎಸ್‌ಐಟಿಯಲ್ಲಿ ಡಿಐಜಿ ಸಿ.ಎಚ್. ಸುಧೀರ್ ಕುಮಾರ್ ರೆಡ್ಡಿ, ಮಂಗಳೂರು ನಗರ ಪೊಲೀಸ್ ಆಯುಕ್ತೆ ನಿಶಾ ಜೇಮ್ಸ್ (ಬೆಂಗಳೂರು ಗುಪ್ತಚರ ವಿಭಾಗದ ಎಸ್ಪಿ) ಮತ್ತು ಬೆಂಗಳೂರಿನ ಸಿಐಡಿ ಎಸ್ಪಿ ಲೋಕೇಶ್ ಜಗಲಾಸರ್ ಕೂಡ ಸದಸ್ಯರಾಗಿದ್ದಾರೆ.

ಬಳ್ಳಾರಿಯ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಮಕ್ಕಳ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ

ಬಳ್ಳಾರಿ, ಅ 30: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬಳ್ಳಾರಿ, ವಕೀಲರ ಸಂಘ ಬಳ್ಳಾರಿ, ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಹಯೋಗದೊಂದಿಗೆ ಶಾಲೆ ಮತ್ತು ಕಾಲೇಜು ಮಕ್ಕಳಿಗೆ ಪೋಕ್ಸೋ ಕಾನೂನು –2012 ಕುರಿತು ಜಾಗೃತಿ ಕಾರ್ಯಕ್ರಮ ""ಸುರಕ್ಷಿತ ಬಚಪನ್ ಅಭಿಯಾನ?2026"ರ ಅಂಗವಾಗಿ ಬಳ್ಳಾರಿಯ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಇಂದು ಮಕ್ಕಳ ಸುರಕ್ಷತೆ ಮತ್ತು ಪೋಕ್ಸೋ (ಕಔಅಖಔ) ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ನಾಗೇಶ್ ನಾಯಕ್ ಅವರು ಮಾತನಾಡಿ ಪೋಕ್ಸೋ ಕಾಯ್ದೆಯ ಉದ್ದೇಶ, ಮಕ್ಕಳ ಹಕ್ಕುಗಳು, ಬಾಲ್ಯವಿವಾಹ ತಡೆಗಟ್ಟುವ ಕ್ರಮ, ಭಿಕ್ಷಾಟನೆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕ್ರಮಗಳು ಹಾಗೂ ಇಂತಹ ಘಟನೆಗಳು ಸಂಭವಿಸಿದಾಗ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅರಿವು ಮೂಡಿಸಲಾಯಿತು. ಮಕ್ಕಳಿಗೆ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ತಿಳಿಸಿ, ಯಾವುದೇ ಅಹಿತಕರ ಘಟನೆ ಸಂಭವಿಸಿದಲ್ಲಿ ಭಯಪಡದೆ ಪೋಷಕರು, ಶಿಕ್ಷಕರು ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವಂತೆ ಸಲಹೆ ನೀಡಿದರು.

॥ ಸಿರಿಗನ್ನಡಂ ಗೆಲ್ಗೆ ॥ ॥ ಸಿರಿಗನ್ನಡಂ ಬಾಳ್ಗೆ ॥

ಕರ್ನಾಟಕ ಸರ್ಕಾರ

ನಿವಾಸಿ ಆಯುಕ್ತರವರ ಕಛೇರಿ, ಕರ್ನಾಟಕ ಭವನ,
ನಂ. ೧೦, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ

೭೧ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದ

ಆಹ್ವಾನ ಪತ್ರಿಕೆ

ದಿನಾಂಕ ೩೧ನೇ ಅಕ್ಟೋಬರ್ ೨೦೨೬ ಶನಿವಾರ
ದಿನಾಂಕ ೧ನೇ ನವೆಂಬರ್ ೨೦೨೬ ಭಾನುವಾರ
ಮತ್ತು
ದಿನಾಂಕ ೧೩ನೇ ನವೆಂಬರ್ ೨೦೨೬ ಶುಕ್ರವಾರ

ಸರ್ವರಿಗೂ ಆದರದ ಸುಸ್ವಾಗತ

ಹಸಿರಾಗಲಿ ಕರ್ನಾಟಕ ಉಸಿರಾಗಲಿ ಕನ್ನಡ

॥ ಕನ್ನಡವೇ ಸತ್ಯ॥ ॥ ಕನ್ನಡವೇ ನಿತ್ಯ ॥

ದಿನಾಂಕ ೩೧ನೇ ಅಕ್ಟೋಬರ್ ೨೦೨೬ ಶನಿವಾರ

ಸ್ಥಳ : ಕರ್ನಾಟಕ ಭವನ-೧ (ಅನೆಕ್ಸ್)
ಸಮಯ : ಬೆಳಿಗ್ಗೆ ೯:೩೦ ರಿಂದ ಮಧ್ಯಾಹ್ನ ೨:೦೦ ರವರೆಗೆ

ರಕ್ತದಾನ ಶಿಬಿರ

ಸಹಯೋಗ
ಭಾರತೀಯ ರೆಡ್ ಕ್ರಾಸ್ ಸಂಸ್ಥೆ,
ನವದೆಹಲಿ

ನೇತ್ರ ತಪಾಸಣೆ ಶಿಬಿರ

ಸಹಯೋಗ
ಸೆಂಟರ್ ಫಾರ್ ಸೈಟ್,
ನವದೆಹಲಿ

ಉಚಿತ ಆರೋಗ್ಯ ತಪಾಸಣೆ ಶಿಬಿರ

ಸಹಯೋಗ
ಪ್ರೈಮಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ಚಾಣಕ್ಯಪುರಿ, ನವದೆಹಲಿ

ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು

॥ ಕನ್ನಡ ಉಳಿಸಿ॥ ॥ ಕನ್ನಡ ಬೆಳೆಸಿ॥

೭೧ನೇ ಕರ್ನಾಟಕ ರಾಜ್ಯೋತ್ಸವದ

ಕಾರ್ಯಕ್ರಮಗಳು

ದಿನಾಂಕ ೦೧ನೇ ನವೆಂಬರ್ ೨೦೨೬ ಭಾನುವಾರ

ಸ್ಥಳ : ಕರ್ನಾಟಕ ಭವನ-೧ (ಕಾವೇರಿ) ಆವರಣ
ಬೆಳಿಗ್ಗೆ ಕಾರ್ಯಕ್ರಮಗಳು

೯:೦೦ : ಧ್ವಜಾರೋಹಣ
೯:೧೫ : ದೇವಿ ಭುವನೇಶ್ವರಿ ಪೂಜೆ ಮತ್ತು ನಾಡಗೀತೆ
೧೦.೦೦ : ಬಹುಮಾನ ವಿತರಣಾ ಸಮಾರಂಭ

ಮುಖ್ಯ ಅತಿಥಿಗಳು

ಶ್ರೀ ಟಿ. ಬಿ. ಜಯಚಂದ್ರ
ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳು-೧, ನವದೆಹಲಿ
ಮತ್ತು
ಶ್ರೀ ಪ್ರಕಾಶ್ ಬಿ. ಹುಕ್ಕೇರಿ
ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳು-೨, ನವದೆಹಲಿ

ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ

॥ ತನು ಕನ್ನಡ ॥ ॥ ಮನ ಕನ್ನಡ ॥

ದಿನಾಂಕ ೧೩ನೇ ನವೆಂಬರ್ ೨೦೨೬ ಶುಕ್ರವಾರ

ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ
ಸಂಜೆ ಕಾರ್ಯಕ್ರಮಗಳು

ಮುಖ್ಯ ಅತಿಥಿಗಳು

ಶ್ರೀ ಟಿ. ಬಿ. ಜಯಚಂದ್ರ ಮತ್ತು ಶ್ರೀ ಪ್ರಕಾಶ್ ಬಿ. ಹುಕ್ಕೇರಿ
ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳು, ನವದೆಹಲಿ

ವಿಶೇಷ ಅತಿಥಿಗಳು

ಡಾ. ಪುರುಷೋತ್ತಮ ಬಿಳಿಮಲೆ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಶ್ರೀ ಆರ್. ರೇಣುಕುಮಾರ್
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ, ನವದೆಹಲಿ

ಕಾರ್ಯಕ್ರಮಗಳು

೦೪.೩೦ ಅತಿಥಿಗಳ ಆಗಮನ
೦೫.೦೦ ಸ್ವಾಗತ
೦೫.೦೫ ಸಭಾ ಕಾರ್ಯಕ್ರಮದ ಉದ್ಘಾಟನೆ
೦೫.೧೦ ನಾಡಗೀತೆ
೦೫.೧೫ ವಿಶೇಷ ಅತಿಥಿಗಳ ಭಾಷಣ
೦೫.೨೦ ಮುಖ್ಯ ಅತಿಥಿಗಳ ಭಾಷಣ
೦೫.೨೫ ವಂದನಾರ್ಪಣೆ
೦೫.೩೦ ಸಿಬ್ಬಂದಿಗಳು ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ
೦೭.೩೦ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾ ತಂಡಗಳಿಂದ ಸಂಗೀತ ಮತ್ತು ನೃತ್ಯಗಳು
೦೯.೦೦ ಭೋಜನ

ಡಾ. ಸಮೀರ್ ಶುಕ್ಲಾ, ಭಾ.ಆ.ಸೇ
ನಿವಾಸಿ ಆಯುಕ್ತರು ಹಾಗೂ
ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು

ಅನನ್ಯ ಶ್ರೀವಾಸ್ತವ್, ಭಾ.ಪೊ.ಸೇ
ಅಪರ ನಿವಾಸಿ ಆಯುಕ್ತರು

ಡಾ. ಟಿ. ಕಾರ್ತಿಕ್, ಎಂ.ಬಿ.ಬಿ.ಎಸ್.,
ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು

ಎಲ್. ದಿವಾಕರ್
ಸಮನ್ವಯಾಧಿಕಾರಿ(ಸಂಸದರ ಕೋಶ)

ಸಿ. ಮೋಹನ್ ಕುಮಾರ್
ಸಹಾಯಕ ನಿವಾಸಿ ಆಯುಕ್ತರು(ಹೆಚ್.ಕೆ)(ಗ್ರೇಡ್-2)

॥ ಜೈ ಕರ್ನಾಟಕ ॥
ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ
ಕನ್ನಡ.... ಕನ್ನಡ.... ಕಸ್ತೂರಿ ಕನ್ನಡ

ಕನ್ನಡವೇ ಸತ್ಯ ಕರ್ನಾಟಕ ಸರ್ಕಾರ **ಕನ್ನಡವೇ ನಿತ್ಯ**

ನಿವಾಸಿ ಆಯುಕ್ತರವರ ಕಛೇರಿ
ಕರ್ನಾಟಕ ಭವನ, ನವದೆಹಲಿ

೭೧ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ - ೨೦೨೬

ಕಾರ್ಯಕ್ರಮಗಳು

ದಿನಾಂಕ	ಸಮಯ	ಕಾರ್ಯಕ್ರಮಗಳು	ಸ್ಥಳ
೩೧-೧೦-೨೦೨೬ ಶನಿವಾರ	ಬೆಳಿಗ್ಗೆ ೯:೩೦ ರಿಂದ ಮಧ್ಯಾಹ್ನ ೨:೦೦	ರಕ್ತದಾನ, ಉಚಿತ ನೇತ್ರ ತಪಾಸಣೆ ಹಾಗೂ ಉಚಿತ ಆರೋಗ್ಯ ತಪಾಸಣೆ ಶಿಬಿರಗಳ ಉದ್ಘಾಟನೆ **ರಕ್ತದಾನ ಶಿಬಿರ** (ಸಹಯೋಗ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ನವದೆಹಲಿ) **ಉಚಿತ ನೇತ್ರ ತಪಾಸಣೆ ಶಿಬಿರ** (ಸಹಯೋಗ : ಸೆಂಟರ್ ಫಾರ್ ಸೈಟ್, ನವದೆಹಲಿ) **ಉಚಿತ ಆರೋಗ್ಯ ತಪಾಸಣೆ ಶಿಬಿರ** (ಸಹಯೋಗ : ಪ್ರೈಮಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ನವದೆಹಲಿ.	ಕರ್ನಾಟಕ ಭವನ-೧(ಅನೆಕ್ಸ್) ನಂ.೧೦, ಕೌಟಿಲ್ಯ ಮಾರ್ಗ ಚಾಣಕ್ಯಪುರಿ, ನವದೆಹಲಿ
೧-೧೧-೨೦೨೬ ಭಾನುವಾರ	ಬೆಳಿಗ್ಗೆ ೯:೦೦ ರಿಂದ ೯:೧೫ ಬೆಳಿಗ್ಗೆ ೧೦:೦೦	**ಧ್ವಜಾರೋಹಣ** ದೇವಿ ಭುವನೇಶ್ವರಿ ಪೂಜೆ ಮತ್ತು ನಾಡಗೀತೆ ಬಹುಮಾನ ವಿತರಣಾ ಸಮಾರಂಭ	ಕರ್ನಾಟಕ ಭವನ-೧(ಕಾವೇರಿ) ನಂ.೧೦, ಕೌಟಿಲ್ಯ ಮಾರ್ಗ ಚಾಣಕ್ಯಪುರಿ, ನವದೆಹಲಿ
೧೩-೧೧-೨೦೨೬ ಶುಕ್ರವಾರ	ಸಂಜೆ ೪.೩೦	ಸಾಂಸ್ಕೃತಿಕ ಕಾರ್ಯಕ್ರಮಗಳು	ದೆಹಲಿ ಕರ್ನಾಟಕ ಸಂಘ ರಾವ್ ತುಲಾರಾಂ ಮಾರ್ಗ, ಸೆಕ್ಟರ್-೧೨, ಆರ್.ಕೆ.ಪುರಂ, ನವದೆಹಲಿ.

ಹಸಿರಾಗಲಿ ಕರ್ನಾಟಕ **ಸರ್ವರಿಗೂ ಆದರದ ಸುಸ್ವಾಗತ** **ಉಸಿರಾಗಲಿ ಕನ್ನಡ**

ಬಡತನದ ವಿರುದ್ಧ ಭಾರತದ ಮಹಾಸಮರಕ್ಕೆ ಭರ್ಜರಿ ಗೆಲುವು

ನವದೆಹಲಿ, ಅ.30: ಬಡತನ ನಿರ್ಮೂಲನೆಯ ಹಾದಿಯಲ್ಲಿ ಭಾರತ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಕಳೆದ 12 ವರ್ಷಗಳಲ್ಲಿ 49.6 ಕೋಟಿ ಜನರು ಬಡತನದ ಸುಳಿಯಿಂದ ಹೊರಬಂದಿದ್ದು, ದೇಶದಲ್ಲಿ ಕಡು ಬಡತನದ ಪ್ರಮಾಣ ಗಣನೀಯವಾಗಿ ಕುಸಿದಿದೆ. 2011ರಲ್ಲಿ ಶೇ 27.1ರಷ್ಟಿದ್ದ ಕಡು ಬಡತನದ ಪ್ರಮಾಣ 2023ರ ವೇಳೆಗೆ ಶೇ 2.6ಕ್ಕೆ ಇಳಿಕೆಯಾಗಿದೆ ಎಂದು ವಿಶ್ವಬ್ಯಾಂಕ್‌ನ ಮಹತ್ವದ ವರದಿ ತಿಳಿಸಿದೆ.

ವಿಶ್ವಬ್ಯಾಂಕ್ ಪ್ರಕಟಿಸಿರುವ ಅಕ್ಟೋಬರ್ 2026ರ 'ಬಡತನ ಮತ್ತು ಸಮಾನತೆ ಸಂಕ್ಷಿಪ್ತ ವರದಿ'ಯಲ್ಲಿ ಭಾರತದ ಈ ಸಾಧನೆಯನ್ನು ದಾಖಲಿಸಲಾಗಿದೆ. 2021ರ ಖರೀದಿ ಶಕ್ತಿಯ ಸಮಾನತೆಯ ಆಧಾರದ ಮೇಲೆ ಲೆಕ್ಕ ಹಾಕಿರುವ ವರದಿಯ ಪ್ರಕಾರ, ದಿನಕ್ಕೆ 400 ರೂ.ಗಿಂತ ಕಡಿಮೆ ಆದಾಯ ಹೊಂದಿರುವ ಕೆಳ ಮಧ್ಯಮ ಆದಾಯದ ಬಡತನ ರೇಖೆಗಿಂತ ಕೆಳಗಿರುವ ಜನರ ಪ್ರಮಾಣವೂ 2011ರ ಶೇ 57.7ರಿಂದ 2023ರಲ್ಲಿ ಶೇ 16.1ಕ್ಕೆ ಇಳಿದಿದೆ.

ವಿಶ್ವದಲ್ಲೇ ಅತ್ಯಂತ ವೇಗವಾಗಿ ಬಡತನ ಕಡಿಮೆಯಾಗುತ್ತಿರುವ ದೇಶಗಳ ಸಾಲಿನಲ್ಲಿ ಭಾರತವೂ ಗುರುತಿಸಿಕೊಂಡಿದೆ ಎಂದು ವಿಶ್ವಬ್ಯಾಂಕ್ ಹೇಳಿದೆ. ಹಣಕಾಸಿನ ಆದಾಯದ ಮಾನದಂಡ ಮಾತ್ರವಲ್ಲದೆ, ಶಿಕ್ಷಣ, ಆರೋಗ್ಯ, ಜೀವನಮಟ್ಟ ಸೇರಿದಂತೆ ಹಣಕಾಸೇತರ ಮಾನದಂಡಗಳಲ್ಲೂ ಭಾರತ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ವರದಿ ವಿಶ್ಲೇಷಿಸಿದೆ.

ಬಡತನ ಇಳಿಕೆಗೆ ಕಾರಣಗಳೇನು?

ಜನರ ಬಳಕೆ ವೆಚ್ಚದಲ್ಲಿನ ಏರಿಕೆ, ಉದ್ಯೋಗಾವಕಾಶಗಳ ಹೆಚ್ಚಳ, ವಿಶೇಷವಾಗಿ ಮಹಿಳೆಯರ ಉದ್ಯೋಗ ಪಾಲ್ಗೊಳ್ಳುವಿಕೆಯಲ್ಲಿ ಕಂಡುಬಂದ ಸುಧಾರಣೆ ಹಾಗೂ ಆಹಾರ ಸಬ್ಸಿಡಿ ಸೇರಿದಂತೆ ಸರ್ಕಾರದ ವಿಸ್ತೃತ ಸಾಮಾಜಿಕ ಕಲ್ಯಾಣ ಯೋಜನೆಗಳು ಬಡತನ ಪ್ರಮಾಣ ಇಳಿಕೆಗೆ ಪ್ರಮುಖ ಕಾರಣಗಳಾಗಿವೆ ಎಂದು ವಿಶ್ವಬ್ಯಾಂಕ್ ಗುರುತಿಸಿದೆ.

2028ರ ವೇಳೆಗೆ ಮತ್ತಷ್ಟು ಇಳಿಕೆ ನಿರೀಕ್ಷೆ

ಭಾರತದಲ್ಲಿ ಬಡತನ ಪ್ರಮಾಣ ಮುಂದಿನ ವರ್ಷಗಳಲ್ಲೂ ಇಳಿಕೆಯಾಗುವ ನಿರೀಕ್ಷೆಯಿದೆ. ದಿನಕ್ಕೆ 400 ರೂ. ಆದಾಯದ ಮಿತಿಯನ್ನು ಆಧರಿಸಿದ ವಿಶ್ವಬ್ಯಾಂಕ್‌ನ ಅಂದಾಜಿನ ಪ್ರಕಾರ, 2026ರಲ್ಲಿ ಶೇ 14.2ರಷ್ಟಿರುವ ಬಡತನ ಪ್ರಮಾಣ 2028ರ ವೇಳೆಗೆ ಶೇ 12.1ಕ್ಕೆ ಇಳಿಯುವ ಸಾಧ್ಯತೆಯಿದೆ.

ಬಹು ಆಯಾಮದ ಬಡತನದಲ್ಲೂ ಭಾರಿ ಇಳಿಕೆ

ಹಣಕಾಸೇತರ ಬಡತನದ ಪ್ರಮಾಣದಲ್ಲೂ ಭಾರತ ಗಮನಾರ್ಹ ಸುಧಾರಣೆ ದಾಖಲಿಸಿದೆ. ಆಕ್ಸ್‌ಫರ್ಡ್ ಪಾವರ್ಟಿ ಅಂಡ್ ಹ್ಯೂಮನ್ ಡೆವಲಪ್‌ಮೆಂಟ್ ಇನಿಶಿಯೇಟಿವ್ ರೂಪಿಸಿರುವ ಬಹು ಆಯಾಮದ ಬಡತನ ಸೂಚ್ಯಂಕದ ಪ್ರಕಾರ, 2005-06ರಲ್ಲಿ ಶೇ 53.8ರಷ್ಟಿದ್ದ ಬಡತನದ ಪ್ರಮಾಣ 2019-21ರ ವೇಳೆಗೆ ಶೇ.16.4ಕ್ಕೆ ಕುಸಿದಿದೆ. ಇದೇ ವೇಳೆ, ವಿಶ್ವಬ್ಯಾಂಕ್‌ನ ಬಹು ಆಯಾಮದ ಬಡತನ ಅಳತೆಗೋಲಿನ ಪ್ರಕಾರ 2022-23ರಲ್ಲಿ ಈ ಪ್ರಮಾಣ ಶೇ 15.5ರಷ್ಟಿತ್ತು.

ಒಟ್ಟಿನಲ್ಲಿ, ಕಳೆದ ಒಂದು ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಭಾರತ ಬಡತನ ನಿರ್ಮೂಲನೆಯ ದಿಕ್ಕಿನಲ್ಲಿ ದೊಡ್ಡ ಹೆಜ್ಜೆಯಿಟ್ಟಿರುವುದನ್ನು ವಿಶ್ವಬ್ಯಾಂಕ್ ವರದಿ ಎತ್ತಿ ತೋರಿಸಿದೆ.

ಐಎನ್‌ಎಸ್ ವಿಕ್ರಾಂತ್‌ನಲ್ಲಿ ರಫೇಲ್ ಎಂ ಯುದ್ಧವಿಮಾನದ ಮೊದಲ ಲ್ಯಾಂಡಿಂಗ್, ಟೇಕ್‌ಆಫ್!



ನವದೆಹಲಿ, ಅ.30: ಭಾರತೀಯ ನೌಕಾಪಡೆಯ ಸ್ವದೇಶಿ ನಿರ್ಮಿತ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್‌ನಲ್ಲಿ ಫ್ರಾನ್ಸ್‌ನ ಅತ್ಯಾಧುನಿಕ ರಫೇಲ್ ಎಂ (ಮೆರೈನ್) ಯುದ್ಧವಿಮಾನ ಮೊದಲ ಬಾರಿಗೆ ಇಳಿಯುವ (ಲ್ಯಾಂಡಿಂಗ್) ಮತ್ತು ಟೇಕ್‌ಆಫ್ ಮಾಡುವ ಮೂಲಕ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ. ಯುದ್ಧವಿಮಾನಗಳನ್ನು ನೌಕಾಪಡೆಗೆ ಸೇರ್ಪಡೆಗೊಳಿಸುವ ಪ್ರಕ್ರಿಯೆಯ ಭಾಗವಾಗಿ ನಡೆಯುತ್ತಿರುವ ಪರೀಕ್ಷೆಗಳು ಯಶಸ್ವಿಯಾಗಿ ಮುಂದುವರಿದಿವೆ ಎಂದು ಈ ಬೆಳವಣಿಗೆಯ ಬಗ್ಗೆ ಮಾಹಿತಿ ಹೊಂದಿರುವ ಅಧಿಕಾರಿಗಳು ತಿಳಿಸಿದ್ದಾರೆ.

ಈ ಪರೀಕ್ಷೆಗಳು ರಫೇಲ್ ಎಂ ಯುದ್ಧವಿಮಾನಗಳನ್ನು ಭಾರತೀಯ ನೌಕಾಪಡೆಯ ಕಾರ್ಯಾಚರಣೆಗೆ ಸಜ್ಜುಗೊಳಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿವೆ. ಕಳೆದ ವರ್ಷ ಮಾಡಿಕೊಂಡ ಒಪ್ಪಂದದ ಹಿನ್ನೆಲೆಯಲ್ಲಿ ಫ್ರಾನ್ಸ್‌ನ ಪೈಲಟ್‌ಗಳು ಗೋವಾದ ಭೂ-ಆಧಾರಿತ ಪರೀಕ್ಷಾ ಕೇಂದ್ರದಲ್ಲಿಯೂ ಇದೇ ಮಾದರಿಯ ಪರೀಕ್ಷೆಗಳನ್ನು ನಡೆಸಿದ್ದರು.

63 ಸಾವಿರ ಕೋಟಿ ರೂ.ವೆಚ್ಚದಲ್ಲಿ 26 ರಫೇಲ್ ಎಂ ಖರೀದಿ:

ಭಾರತವು 2025ರ ಏಪ್ರಿಲ್‌ನಲ್ಲಿ ನೌಕಾಪಡೆಗಾಗಿ ಫ್ರಾನ್ಸ್‌ನಿಂದ 26 ರಫೇಲ್ ಎಂ ಯುದ್ಧವಿಮಾನಗಳನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿತ್ತು. 63 ಸಾವಿರ ಕೋಟಿ ರೂ.ಮೌಲ್ಯದ ಈ ಒಪ್ಪಂದದಡಿ ಡಸಾಲ್ಟ್ ಏವಿಯೇಷನ್ ಕಂಪನಿ ನಿರ್ಮಿಸುತ್ತಿರುವ ಯುದ್ಧವಿಮಾನಗಳ ಪೂರೈಕೆ 2029ರಲ್ಲಿ ಆರಂಭವಾಗಲಿದ್ದು, 2031ರ ವೇಳೆಗೆ ಪೂರ್ಣಗೊಳ್ಳಲಿದೆ. ಈ ಯುದ್ಧವಿಮಾನಗಳನ್ನು ಭಾರತದ ಎರಡು ವಿಮಾನವಾಹಕ ನೌಕೆಗಳಿಂದ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುತ್ತದೆ.

ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ ವಿಕ್ರಾಂತ್:

ಪ್ರಸ್ತುತ ಐಎನ್‌ಎಸ್ ವಿಕ್ರಾಂತ್‌ನಲ್ಲಿ ರಷ್ಯಾ ನಿರ್ಮಿತ ಮಿಗ್-29ಕೆ ಯುದ್ಧವಿಮಾನಗಳನ್ನು ಕಾರ್ಯಾಚರಣೆಗೆ ಬಳಸಲಾಗುತ್ತಿದೆ. ಇವು ವಿಮಾನವಾಹಕ ನೌಕೆಯಲ್ಲಿರುವ ಇಳಿಜಾರು ರನ್‌ವೇ ಮೂಲಕ ವೇಗ ಪಡೆದು ಮೇಲೇರಲಿದ್ದು, ಲ್ಯಾಂಡಿಂಗ್ ವೇಳೆ ಅರೆಸ್ಟರ್ ವೈರ್‌ಗಳ ನೆರವಿನಿಂದ ನಿಲ್ಲುತ್ತವೆ. ನೌಕಾಪಡೆಯ ಪರಿಭಾಷೆಯಲ್ಲಿ ಈ ವ್ಯವಸ್ಥೆಯನ್ನು ಎಸ್‌ಟಿಒಬಿಎಆರ್ (ಶಾರ್ಟ್ ಟೇಕ್‌ಆಫ್ ಬಟ್ ಅರೆಸ್ಟೆಡ್ ರಿಕವರಿ) ಎಂದು ಕರೆಯಲಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿ 2022ರ ಸೆಪ್ಟೆಂಬರ್‌ನಲ್ಲಿ ಐಎನ್‌ಎಸ್ ವಿಕ್ರಾಂತ್ ಅನ್ನು ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆಗೊಳಿಸಿದ್ದರು. ಸುಮಾರು 13 ವರ್ಷಗಳ ಅವಧಿಯಲ್ಲಿ 20 ಸಾವಿರ ಕೋಟಿ ರೂ. ವೆಚ್ಚದಲ್ಲಿ ಈ ಬೃಹತ್ ಯುದ್ಧನೌಕೆಯನ್ನು ನಿರ್ಮಿಸಲಾಗಿದೆ.

ಶೇ.76ರಷ್ಟು ಸ್ವದೇಶಿ ತಂತ್ರಜ್ಞಾನ ಬಳಕೆ:

45 ಸಾವಿರ ಟನ್ ತೂಕದ ಐಎನ್‌ಎಸ್ ವಿಕ್ರಾಂತ್‌ನಲ್ಲಿ ಶೇ.76ರಷ್ಟು ಸ್ವದೇಶಿ ಉಪಕರಣ ಮತ್ತು ತಂತ್ರಜ್ಞಾನವನ್ನು ಬಳಸಲಾಗಿದೆ. 262 ಮೀಟರ್ ಉದ್ದದ ಈ ನೌಕೆಯಲ್ಲಿ 15 ಮಹಡಿಗಳು ಹಾಗೂ 2,300 ಕೊಠಡಿಗಳಿವೆ. 30 ಯುದ್ಧವಿಮಾನಗಳನ್ನು ಇರಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, 1,600 ಸಿಬ್ಬಂದಿ ಕಾರ್ಯನಿರ್ವಹಿಸಬಹುದು . ಇಂಧನ ಮರುಪೂರಣವಿಲ್ಲದೆ 7,500 ನಾಟಿಕಲ್ ಮೈಲುಗಳಷ್ಟು ದೂರ ಕ್ರಮಿಸುವ ಸಾಮರ್ಥ್ಯವೂ ಇದಕ್ಕಿದೆ.

ನಾಲ್ಕನೇ ವಿಮಾನವಾಹಕ ನೌಕೆ

ಭಾರತ ಹಲವು ದಶಕಗಳಿಂದ ವಿಮಾನವಾಹಕ ನೌಕೆಗಳನ್ನು ಕಾರ್ಯಾಚರಣೆಗೆ ಬಳಸುತ್ತಿದೆ. ಐಎನ್‌ಎಸ್ ವಿಕ್ರಾಂತ್ ಭಾರತೀಯ ನೌಕಾಪಡೆಯ ಸೇವೆಗೆ ಸೇರ್ಪಡೆಯಾದ ನಾಲ್ಕನೇ ವಿಮಾನವಾಹಕ ನೌಕೆಯಾಗಿದೆ.

ಬ್ರಿಟನ್ ಮೂಲದ ಮೊದಲ ಐಎನ್‌ಎಸ್ ವಿಕ್ರಾಂತ್ 1961ರಿಂದ 1997ರವರೆಗೆ ಸೇವೆ ಸಲ್ಲಿಸಿತ್ತು.

ಬಳಿಕ ಬ್ರಿಟನ್ ಮೂಲದ ಐಎನ್‌ಎಸ್ ವಿರಾಟ್ 1987ರಿಂದ 2016ರವರೆಗೆ ಕಾರ್ಯನಿರ್ವಹಿಸಿತ್ತು. ರಷ್ಯಾ ಮೂಲದ ಐಎನ್‌ಎಸ್ ವಿಕ್ರಮಾದಿತ್ಯ 2013ರಿಂದ ನೌಕಾಪಡೆಯ ಸೇವೆಯಲ್ಲಿದೆ. ಇದೀಗ ಸ್ವದೇಶಿ ನಿರ್ಮಿತ ಐಎನ್‌ಎಸ್ ವಿಕ್ರಾಂತ್ ಈ ಸಾಲಿಗೆ ಸೇರ್ಪಡೆಯಾಗಿದ್ದು, ಭಾರತದ ಮೊದಲ ವಿಮಾನವಾಹಕ ನೌಕೆಯ ಹೆಸರನ್ನೇ ಇದಕ್ಕೂ ಇಡಲಾಗಿದೆ.